**ಸಂಪುಟ: 04 ಸಂಚಿಕೆ: 306 ಪುಟಗಳು: 08 ಶನಿವಾರ 18 ಜನವರಿ 2025**

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

9448225696 +91 8035841833 ₹5


# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**


ಮತ್ತೊಬ್ಬರ ಜೀವನ ಕಂಡು ಅಸೂಯೆ ಪಟ್ಟು ಹುಸಿ ನಗುವುದಕ್ಕಿಂತ ಅವರ ಆತ್ಮವನ್ನು ಅರಿತು ಆನಂದ ಪಟ್ಟರೆ ಅತ್ಯುತ್ಸಾಹ ಬರುವುದು

# ಕೇಜ್ರಿ ವಿರುದ್ಧ ಕೇಸರಿ ಬ್ರಹ್ಮಾಸ್ತ್ರ



- ಗರ್ಭಿಣಿಯರಿಗೆ 21,000 ರೂ.
- ಪ್ರತಿ ಮಹಿಳೆಗೆ 2,500 ರೂ.
- ಗ್ಯಾಸ್ ಸಿಲಿಂಡರ್ 500 ರೂ.ಗೆ

**ಗ್ಯಾರಂಟಿ ಅಬ್ಬರಕ್ಕೆ ಅರವಿಂದ ಕಕ್ಕಾಬಿಕ್ಕಿ**



## ಕೇಜ್ರಿವಾಲ್ ವಾಗ್ದಾಳಿ

ಕೇಜ್ರಿವಾಲ್ ಉಚಿತ ಕೊಡುಗೆಗಳನ್ನು ನೀಡುತ್ತಾರೆ ಎಂದು ಬಿಜೆಪಿ ಪದೇ ಪದೇ ಟೀಕಿಸುತ್ತಿತ್ತು. ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರು ದೆಹಲಿಯ ಜನರಿಗೆ ಉಚಿತ ಭಾಗ್ಯಗಳನ್ನು ನೀಡುವುದಾಗಿ ಘೋಷಿಸಿದ್ದಾರೆ" ಎಂದು ಕೇಜ್ರಿವಾಲ್ ವಾಗ್ದಾಳಿ ನಡೆಸಿದರು. ಜೆಪಿ ನಡ್ಡಾ ಅವರು ಕೇಜ್ರೀವಾಲ್ ರೀತಿ ಉಚಿತ ಭಾಗ್ಯಗಳನ್ನು ನೀಡುವುದಾಗಿ ಘೋಷಣೆ ಮಾಡಿದ್ದಾರೆ. ಪ್ರಧಾನಿ ಮೋದಿ ಇದಕ್ಕೆ ಒಪ್ಪಿಗೆ ನೀಡುತ್ತಾರೆಯೇ ಅಥವಾ ಈ ಹಿಂದೆ ತಾನು ಹೇಳಿದ್ದು ತಪ್ಪು ಎಂದು ಮೋದಿ ಒಪ್ಪಿಕೊಳ್ಳುತ್ತಾರೆಯೇ..? ಅವರು ಇದನ್ನು ಸಾರ್ವಜನಿಕವಾಗಿ ಘೋಷಿಸಬೇಕು ಮತ್ತು ಮೋದಿಯೇ ಮುಂದೆ ಬಂದು, ಬಿಜೆಪಿ ನೀಡಿದ ಈ ಭರವಸೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಬೇಕು ಎಂದು ಅರವಿಂದ್ ಕೇಜ್ರಿವಾಲ್ ಒತ್ತಾಯಿಸಿದರು.

## ಫ್ರೀಬೀಸ್‌ನಲ್ಲಿ ಆಪ್, ಕಾಂಗ್ರೆಸ್ಸಿಗಿಂತ ತಾನೇನು ಕಮ್ಮಿಯಿಲ್ಲದಂತೆ ಬಿಜೆಪಿ 'ಪ್ರಣಾಳಿಕೆ' ಬಿಡುಗಡೆ



1 ಮುಖ್ಯಮಂತ್ರಿ ಮಹಿಳಾ ಸಮ್ಮಾನ್ ಯೋಜನೆಯಡಿಯಲ್ಲಿ ಮಹಿಳೆಯರಿಗೆ 2,100

2 ಐಟಿಐ ವಿದ್ಯಾರ್ಥಿಗಳಿವೆ ಸೀಡ್ ಫಂಡಿಂಗ್ ನಡಿ 50 ಸಾವಿರ ರೂಪಾಯಿ

3 ಹೋಳಿ, ದೀಪಾವಳಿಗೆ ಫ್ರೀ ಸಿಲಿಂಡರ್, ಮಹಿಳೆಯರಿಗೆ ಮಾಸಿಕ 2,500

**ದೆಹಲಿ ಜನರಿಗೆ ಬಿಜೆಪಿ ಭರವಸೆ**

- **ಉದಯವಾಹಿನಿ, ನವದೆಹಲಿ**

ಮುಂಬರುವ ದೆಹಲಿ ವಿಧಾನಸಭಾ ಚುನಾವಣೆಗಾಗಿ ಸಂಕಲ್ಪ ಪತ್ರ (ಪ್ರಣಾಳಿಕೆ) ಬಿಡುಗಡೆ ಮಾಡಿರುವ ಬಿಜೆಪಿ ಹಲವು ಗ್ಯಾರಂಟಿಗಳನ್ನ ಘೋಷಣೆ ಮಾಡಿದೆ. ಫೆ.5ರಂದು ನಡೆಯಲಿರುವ ಚುನಾವಣೆ ಹಿನ್ನೆಲೆ ಕೇಂದ್ರ ಸಚಿವರೂ ಆಗಿರುವ ಪಕ್ಷದ ರಾಷ್ಟ್ರೀಯ ಜೆ.ಪಿ ನಡ್ಡಾ ಅವರು ಸಂಕಲ್ಪ ಪತ್ರ ಬಿಡುಗಡೆಗೊಳಿಸಿದರು. ಅಲ್ಲದೇ ಆಡಳಿತಾರೂಢ ಆಪ್ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡುತ್ತಲೇ ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಭರವಸೆಗಳನ್ನು ಈಡೇರಿಸುವುದಾಗಿ ಆಶ್ವಾಸನೆ ನೀಡಿದರು. ಮಹಿಳೆಯರಿಗೆ 6 ಪೌಷ್ಟಿಕಾಂಶ ಕಿಟ್‌ಗಳು, ಗರ್ಭಿಣಿಯರಿಗೆ 21,000 ರೂ. ನೀಡಲಾಗುವುದು. ಅಲ್ಲದೇ ಮಹಿಳಾ ಸಮೃದ್ಧಿ ಯೋಜನೆಯಡಿ ಮಹಿಳೆಯರಿಗೆ ಪ್ರತಿ ತಿಂಗಳು 2,500 ರೂ. ನೆರವು, 500ಗೆ ಎಲ್‌ಪಿಜಿ ಸಿಲಿಂಡರ್ ನೀಡುವುದಾಗಿ ಘೋಷಿಸಿದರು. ಇದರೊಂದಿಗೆ 60-70 ವರ್ಷ ವಯಸ್ಸಿನ ಹಿರಿಯ ನಾಗರಿಕರಿಗೆ 2,500 ರೂ. ಮತ್ತು 70 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಮಾಸಿಕ 3,000 ರೂ. ನೆರವು ನೀಡುವುದಾಗಿ ಘೋಷಿಸಿದ್ದಾರೆ. ಅಲ್ಲದೇ ಪಕ್ಷ ಅಧಿಕಾರಕ್ಕೆ ಬಂದರೆ, ಮೊದಲ ಸಂಪುಟ ಸಭೆಯಲ್ಲೇ ಆಯುಷ್‌ಮಾನ್ ಭಾರತ್ ಯೋಜನೆ ಜಾರಿಗೆ ಒಪ್ಪಿಗೆ ನೀಡಲಾಗುವುದು ಜೊತೆಗೆ ಹೆಚ್ಚುವರಿಯಾಗಿ ಆರೋಗ್ಯ ರಕ್ಷಣೆಗಾಗಿ 5 ಲಕ್ಷ ರೂ. ನೀಡಲಾಗುವುದು. 500 ರೂ.ಗೆ ಎಲ್‌ಪಿಜಿ ಸಿಲಿಂಡರ್ ನೀಡುವ ಜೊತೆಗೆ ಹೋಳಿ ಮತ್ತು ದೀಪಾವಳಿ ಹಬ್ಬಗಳ ಸಂದರ್ಭದಲ್ಲಿ 1 ಉಚಿತ ಸಿಲಿಂಡರ್ ನೀಡಲಾಗುವುದು ಎಂದು ಗ್ಯಾರಂಟಿ ನೀಡಿದರು. ಇದೇ ವೇಳೆ ಆಪ್ ವಿರುದ್ಧ ವಾಗ್ದಾಳಿ ನಡೆಸಿದ ಕೇಂದ್ರ ಸಚಿವ ನಡ್ಡಾ, ಬಿಜೆಪಿಯ ಪ್ರಣಾಳಿಕೆ ದೆಹಲಿಯ ಅಭಿವೃದ್ಧಿಗೆ ಅಡಿಪಾಯ ಎಂದು ಬಣ್ಣಿಸಿದರು.

**ಮಹಿಳೆಯರಿಗೆ ವಿಶೇಷ ಆದ್ಯತೆ..!:** ಈ ವೇಲೆ ಜೆಪಿ ನಡ್ಡಾ ಅವರು ವಿವಿಧ ರಾಜ್ಯಗಳಲ್ಲಿ ಬಿಜೆಪಿ ಸರ್ಕಾರಗಳು ಮಾಡಿದ ಕೆಲಸಗಳ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿದರು ಮತ್ತು ಮಹಿಳೆಯರ ಸಬಲೀಕರಣವು ಪಕ್ಷದ ಆದ್ಯತೆಯಾಗಿದೆ ಎಂದು ಹೇಳಿದರು. ''ಮಹಿಳೆಯರು ನಮ್ಮ ಪ್ರಮುಖ ಆದ್ಯತೆಯಾಗಿದೆ. ಉಜ್ವಲ ಯೋಜನೆ, ಸ್ವಚ್ಛ ಭಾರತದಡಿ ಶೌಚಾಲಯ. ಮಹಾರಾಷ್ಟ್ರ ಮತ್ತು ಸಂಸದರಲ್ಲಿ ಮಾಸಿಕ ಮಹಿಳಾ ಸಮ್ಮಾನ್ ನೀಡುತ್ತಿದ್ದೇವೆ,'' ಎಂದು ಹೇಳಿದರು.

### ಕಾಂಗ್ರೆಸ್‌ಗೆ ಪರ್ಯಾಯದ ಕನಸು

ಕಳೆದ ಚುನಾವಣೆಯಲ್ಲಿ ಒಂದು ಸ್ಥಾನವನ್ನೂ ಗೆಲ್ಲಲು ಸಾಧ್ಯವಾಗದೇ ಹತಾಶೆ ಅನುಭವಿಸಿದ್ದ ಕಾಂಗ್ರೆಸ್, ಈ ಸಲ ಪುಟಿದೇಳುವ ತವಕದಲ್ಲಿದೆ. ಕೇಂದ್ರ ಸರಕಾರ ಹಾಗೂ ಆಪ್ ಆಡಳಿತದಿಂದ ಬೇಸತ್ತಿರುವ ಜನರಿಗೆ ಕಾಂಗ್ರೆಸ್ ಒಂದೇ ಪರ್ಯಾಯ ಆಯ್ಕೆ ಎನ್ನುವ ಕನಸನ್ನು ಪಕ್ಷದ ಮುಖಂಡರು ಕಾಣುತ್ತಿದ್ದಾರೆ. ಆಪ್ ಸರಕಾರದ ಮೂರು ಅವಧಿ ಮತ್ತು ಹಿಂದೆ ಕಾಂಗ್ರೆಸ್ ಅವಧಿಯಲ್ಲಾದ ಅಭಿವೃದ್ಧಿ ಕೆಲಸಗಳ ತುಲನೆ ಮಾಡಿ ಜನ ಮತ್ತೆ ಕೈ ಹಿಡಿಯಲಿದ್ದಾರೆ ಎನ್ನುವ ನಂಬಿಕೆ ಪಕ್ಷದ ನಾಯಕರದ್ದು.

### ಕಮಲಕ್ಕೆ ಮತ್ತೆ ಅರಳುವ ಆಸೆ

ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯ ಜಯಭೇರಿ ನಂತರ ಬಿಜೆಪಿ ರಾಷ್ಟ್ರ ರಾಜಧಾನಿ ದಿಲ್ಲಿಯತ್ತ ಚಿತ್ತ ನೆಟ್ಟಿದೆ. ಬರೋಬ್ಬರಿ 25 ವರ್ಷಗಳಿಂದ ದಿಲ್ಲಿಯಲ್ಲಿ ಅಧಿಕಾರ ಹಿಡಿಯಲು ಸಾಧ್ಯವಾಗದೇ ಇರುವುದರಿಂದ, ಈ ಸಲ ಹೇಗಾದರೂ ಮಾಡಿ ಸರಕಾರ ರಚಿಸಲೇಬೇಕು ಎಂಬ ಹಠಕ್ಕೆ ಬಿದ್ದಿದೆ. ಅರವಿಂದ ಕೇಜ್ರಿವಾಲ್ ವಿರುದ್ಧ ಭ್ರಷ್ಟಾಚಾರದ ಆರೋಪದೊಂದಿಗೆ ಸಮರಕ್ಕಿಳಿದಿದೆ. ಕಳೆದ ವಾರ ಪ್ರಧಾನಿ ಮೋದಿ 'ಪರಿವರ್ತನ್' ಹೆಸರಿನ ಸಮಾವೇಶದ ಮೂಲಕ ರಣಕಹಳೆ ಮೊಳಗಿಸಿದ್ದಾರೆ. ಮುಖ್ಯಮಂತ್ರಿ ನಿವಾಸ 'ಶೀಷಮಹಲ್' ನವೀಕರಣ ಮತ್ತು ಅಬಕಾರಿ ಹಗರಣವನ್ನು ಪ್ರಮುಖವಾಗಿ ಪ್ರಚಾರ ಮಾಡುತ್ತಿದೆ. ಇದಲ್ಲದೇ ಕುಡಿಯುವ ನೀರಿನ ಸಮಸ್ಯೆ, ಕಲುಷಿತ ನೀರು ಪೂರೈಕೆ, ವಾಯುಮಾಲಿನ್ಯ, ರಸ್ತೆ ಅವ್ಯವಸ್ಥೆ ಮತ್ತು ಕಳಪೆ ಸಾರಿಗೆ ವ್ಯವಸ್ಥೆಯಂತಹ ವಿಷಯಗಳನ್ನು ಆಪ್ ಸರಕಾರದ ವೈಫಲ್ಯಗಳೆಂದು ಬಿಂಬಿಸುತ್ತ ಬಂದಿದೆ.

### ಪ್ರಣಾಳಿಕೆಯಲ್ಲೇನಿದೆ..

ಗರ್ಭಿಣಿಯರಿಗೆ 21,000 ಸಾವಿರ ರೂಪಾಯಿ ನೀಡಲಾಗುವುದು ಮತ್ತು 6 ಪೌಷ್ಟಿಕಾಂಶದ ಕಿಟ್ಸ್ ನೀಡಲಾಗುವುದು. ಜತೆಗೆ ಮೊದಲ ಮಗುವಿಗೆ 5,000 ರೂ. ನಗದು ಹಾಗೂ ಎರಡನೇ ಮಗುವಿಗೆ 6,000 ರೂಪಾಯಿ. ಒಂದು ವೇಳೆ ದೆಹಲಿಯಲ್ಲಿ ಭಾರತೀಯ ಜನತಾ ಪಕ್ಷ ಅಧಿಕಾರಕ್ಕೆ ಬಂದಲ್ಲಿ, ಮೊದಲ ಕ್ಯಾಬಿನೆಟ್ ಸಭೆಯಲ್ಲೇ ಕೇಂದ್ರದ ಆಯುಷ್ಮಾನ್ ಭಾರತ್ ಆರೋಗ್ಯ ಯೋಜನೆಯನ್ನು ಬಿಜೆಪಿ ಜಾರಿಗೊಳಿಸಲಿದೆ ಎಂದು ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ ಭರವಸೆ ನೀಡಿದ್ದಾರೆ. ಕೇಂದ್ರದ ಪ್ರಮುಖ ಉನ್ನತ ಆರೋಗ್ಯ ಯೋಜನೆಯನ್ನು ಆಮ್ ಆದ್ಮಿ ಪಕ್ಷದ ಸರ್ಕಾರ ವಿರೋಧಿಸುತ್ತಿದೆ. ಆಮ್ ಆದ್ಮಿ ಪಕ್ಷದ ಮೊಹಲ್ಲಾ ಕ್ಲಿನಿಕ್ಸ್‌ಗಳು ಭ್ರಷ್ಟಾಚಾರ ಮತ್ತು ಅದಕ್ಷತೆಯ ಪ್ರತೀಕವಾಗಿದೆ ಎಂದು ಬಿಜೆಪಿ ಆರೋಪಿಸಿದೆ.

### ಆಪ್ ಓಟಕ್ಕೆ ಬ್ರೇಕ್ ಹಾಕಲು ಕಸರತ್ತು ಕಮಲ

ದಿಲ್ಲಿಯಲ್ಲೀಗ ಮೈ ಕೊರೆಯುವ ಚಳಿ. ರಾಜಕೀಯ ನಾಯಕರಿಗೆ ವಿಧಾನಸಭೆ ಚುನಾವಣೆಯ ಬಿಸಿ. ಆಡಳಿತಾರೂಢ ಆಮ್ ಆದ್ಮಿ ಪಕ್ಷ ತನ್ನ ಹಿಡಿತ ಮುಂದುವರಿಸಲು ರಣತಂತ್ರ ಹೆಣೆದಿದ್ದು, ಬಿಜೆಪಿ ಮತ್ತು ಕಾಂಗ್ರೆಸ್ ದಿಲ್ಲಿ ನಿವಾಸಿಗಳ ದಿಲ್ ಗೆದ್ದು ಆಪ್‌ನ ಓಟಕ್ಕೆ ಬ್ರೇಕ್ ಹಾಕಲು ತೀವ್ರ ಕಸರತ್ತು ನಡೆಸಿವೆ. ಮೂರೂ ಪಕ್ಷಗಳು ಉಚಿತ ಘೋಷಣೆಗಳನ್ನು ಮಾಡಿವೆ. ಫ್ರೀಬೀಸ್‌ಗಿಂತಲೂ ಹೆಚ್ಚಾಗಿ ರಾಜಕೀಯ ನಾಯಕರ ನಡುವೆ ಭಾರಿ ವಾಕ್ಸಮರ ನಡೆಯುತ್ತಿದೆ. ಪಕ್ಷ ಸ್ಥಾಪನೆಯಾದ ಅತ್ಯಂತ ಕಡಿಮೆ ಅವಧಿಯಲ್ಲಿ ದಿಲ್ಲಿ ಗದ್ದುಗೆ ಏರಿದ್ದಲ್ಲದೆ 2013ರಿಂದಲೂ ಆಡಳಿತ ನಡೆಸುತ್ತಿರುವ ಆಪ್, ರಾಜಕೀಯ ಕ್ಷೇತ್ರದ ಅತಿ ವೇಗದ ಸ್ಟಾರ್ಟ್ ಆಪ್ ಎಂಬ ಖ್ಯಾತಿ ಹೊಂದಿದೆ. ಪಂಜಾಬ್‌ನಲ್ಲೂ 2022ರ ವಿಧಾನಸಭೆ ಚುನಾವಣೆ ಗೆದ್ದು ರಾಷ್ಟ್ರೀಯ ಪಕ್ಷದ ಮಾನ್ಯತೆ ಪಡೆಯುವಲ್ಲಿ ಆಪ್ ಯಶಸ್ವಿಯಾಯಿತು.

## ಅಬಕಾರಿ ಇಲಾಖೆಯಲ್ಲಿ ವರ್ಗಾವಣೆಗೆ ಹೊಸ ನಿಯಮ

- **ಉದಯವಾಹಿನಿ, ಬೆಂಗಳೂರು**

ಅಬಕಾರಿ ಇಲಾಖೆಯಲ್ಲಿ ಸುಧಾರಣೆ ಹಾಗೂ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಹಲವು ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಇಲಾಖೆಯಲ್ಲಿನ ವರ್ಗಾವಣೆಗೆ ಹೊಸ ನಿಯಮಗಳನ್ನು ರೂಪಿಸಲಾಗಿದೆ ಎಂದು ಅಬಕಾರಿ ಹಾಗೂ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ ತಿಮ್ಮಾಪುರ ತಿಳಿಸಿದ್ದಾರೆ.

ಅಬಕಾರಿ ಇಲಾಖೆಯ ವರ್ಗಾವಣೆ ನಿಯಮಗಳನ್ನು ಮಾರ್ಪಾಡು ಮಾಡುವ ಮೂಲಕ ಪಾರದರ್ಶಕ ಮತ್ತು ನಿಯಮಾಧಾರಿತ ವರ್ಗಾವಣೆ ಪದ್ಧತಿಯನ್ನು ಜಾರಿಗೊಳಿಸುವುದರಿಂದ ಇತರೆ ಪ್ರಭಾವಗಳಿಗೆ ಒಳಗಾಗುವುದನ್ನು ತಡೆಗಟ್ಟಲು ಸಾಧ್ಯವಾಗಲಿದೆ ಎಂದುರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕರ್ನಾಟಕ ನಾಗರೀಕ ಸೇವೆಗಳು (ಅಬಕಾರಿ ಇಲಾಖೆಯ ವರ್ಗಾವಣೆ) ನಿಯಮಗಳು, 2025 ಅನುಮೋದನೆ ನೀಡಲಾಗಿದ್ದು, ಅನುಬಂಧದಲ್ಲಿ ನೀಡಲಾದ ಕರಡನ್ನು ಹೊರಡಿಸಿ, ಸಂಬಂಧಪಟ್ಟವರಿಂದ ಆಕ್ಷೇಪಣೆ ಅಥವಾ ಸಲಹೆಗಳನ್ನು ಆಹ್ವಾನಿಸುವುದು ಹಾಗೂ ಸ್ವೀಕೃತವಾಗಬಹುದು.

## ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ವಿಚಾರಣೆಗೆ ದಿನಾಂಕ ಫಿಕ್ಸ್.!

- **ಉದಯವಾಹಿನಿ, ಬೆಂಗಳೂರು**

ನಟ ದರ್ಶನ್ ಗ್ಯಾಂಗ್ ಗೆ ಬಿಗ್ ಶಾಕ್ ಎದುರಾಗಿದ್ದು, ಸುಪ್ರೀಂಕೋರ್ಟ್ ನಲ್ಲಿ ಪೊಲೀಸರ ಮೇಲ್ಮನವಿ ವಿಚಾರಣೆಗೆ ದಿನಾಂಕ ಫಿಕ್ಸ್ ಆಗಿದೆ. ಜ.24 ರಂದು ಸುಪ್ರೀಂಕೋರ್ಟ್ ನಲ್ಲಿ ನಟ ದರ್ಶನ್ ಹಾಗೂ 7 ಆರೋಪಿಗಳ ವಿಚಾರಣೆ ನಡೆಯಲಿದೆ. ಜಾಮೀನು ನೀಡಿರುವ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಪೊಲೀಸರು ಸುಪ್ರೀಂಕೋರ್ಟ್ ಮೊರೆ ಹೋಗಿದ್ದು, ಜ.24 ರಂದು ವಿಚಾರಣೆ ನಡೆಯಲಿದೆ. ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ಅವರ ಜಾಮೀನು ರದ್ದು ಕೋರಿ ರಾಜ್ಯ ಸರ್ಕಾರ ಸುಪ್ರೀಂಕೋರ್ಟ್ ಗೆ ಅರ್ಜಿ ಸಲ್ಲಿಸಿದೆ. ದರ್ಶನ್ ಸೇರಿದಂತೆ 7 ಮಂದಿಗೆ ಕರ್ನಾಟಕ ಹೈಕೋರ್ಟ್ ನೀಡಿರುವ ಜಾಮೀನು ರದ್ದು ಮಾಡುವಂತೆ ರಾಜ್ಯ ಸರ್ಕಾರ ಸುಪ್ರೀಂಕೋರ್ಟ್ ಗೆ ಮನವಿ ಮಾಡಿದೆ. ರೇಣುಕಾ ಸ್ವಾಮಿ ಕೊಲೆ ಪ್ರಕರಣದಲ್ಲಿ 2024ರ ಜೂನ್ 11ರಂದು ದರ್ಶನ್ ಬಂಧಿಸಲಾಗಿತ್ತು 2024ರ ಅಕ್ಟೋಬರ್ 30ರಂದು ವೈದ್ಯಕೀಯ ಚಿಕಿತ್ಸೆಗಾಗಿ ದರ್ಶನ್ ಗೆ ಹೈಕೋರ್ಟ್ ಮಧ್ಯಂತರ ಜಾಮೀನು ನೀಡಿತ್ತು.

## ಪೊಲೀಸ್ ಅಧಿಕಾರಿಗಳ ಜೊತೆ ಸಿಎಂ ತುರ್ತು ಸಭೆ

- **ಉದಯವಾಹಿನಿ, ಬೆಂಗಳೂರು**

ಮಂಗಳೂರಿನ ಕೋಟೆಕರ್ ಸಹಕಾರಿ ಬ್ಯಾಂಕ್ ದರೋಡೆ ಪ್ರಕರಣದ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ, ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆ ತುರ್ತು ಸಭೆ ನಡೆಸಿದ್ದಾರೆ. ಶೀಘ್ರವಾಗಿ ಆರೋಪಿಗಳ ಪತ್ತೆ ಮಾಡುವಂತೆ ಖಡಕ್ ಸೂಚನೆ ನೀಡಿದ್ದಾರೆ. ವೈದ್ಯಕೀಯ ಶಿಕ್ಷಣ ಇಲಾಖೆಯ ಕಾರ್ಯಕ್ರಮ ಮುಗಿಯುತ್ತಿದ್ದಂತೆ ಪಶ್ಚಿಮ ರೇಂಜ್ ನ ಐಜಿ ಅಮಿತ್, ಪೊಲೀಸ್ ಆಯುಕ್ತ ಸಿಂಗ್, ಅನುಪಮ್ ಅಗರವಾಲ್, ಎಸ್.ಪಿ ಯತೀಶ್, ಡಿವೈಎಸ್ ಪಿ ಸೇರಿ ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಿದರು. ಘಟನೆಯ ಕುರಿತಂತೆ ಸಮಗ್ರ ಮಾಹಿತಿ ಪಡೆದರು. ಪೊಲೀಸರಿದ್ರೂ ಯಾಕೆ ಹೀಗಾಯ್ತು..? ಆರೋಪಿಗಳು ತಪ್ಪಿಸಿಕೊಂಡು ಹೋಗಿದ್ದು ಹೇಗೆ..? ಎನ್ನು ಟೋಲ್ ಗಳನ್ನು ದಾಟಿ ಹೋಗಿದ್ದಾರೆ. ನೀವು ಟೋಲ್‌ಗಳನ್ನು ಏಕೆ ಟೈಟ್ ಮಾಡಲಿಲ್ಲ ಎಂದು ಗರಂ ಆದರು.

## ಗುಡ್ ನ್ಯೂಸ್: ಎಲ್ಲಾ ಜಿಲ್ಲೆಗಳಿಗೂ 'ಆಶಾಕಿರಣ' ಯೋಜನೆ ವಿಸ್ತರಣೆ

- **ಉದಯವಾಹಿನಿ, ಬೆಂಗಳೂರು**

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಉಚಿತವಾಗಿ ನೇತ್ರ ತಪಾಸಣೆ, ಶಸ್ತ್ರ ಚಿಕಿತ್ಸೆ ಮತ್ತು ಕನ್ನಡಕಗಳನ್ನು ವಿತರಿಸುವ ಆಶಾಕಿರಣ ಯೋಜನೆಯನ್ನು 13.30 ಕೋಟಿ ರೂ. ಅನುದಾನದಲ್ಲಿ ಜಾರಿಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಸಚಿವ ಹೆಚ್.ಕೆ. ಪಾಟೀಲ್ ಈಗಾಗಲೇ ಕಲಬುರಗಿ, ಹಾವೇರಿ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಚಾಮರಾಜನಗರ, ಉತ್ತರಕನ್ನಡ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಆಶಾಕಿರಣ ಯೋಜನೆ ಜಾರಿಯಾಗಿದ್ದು ಉಳಿದ 22 ಜಿಲ್ಲೆಗಳಲ್ಲಿಯೂ ಯೋಜನೆಯನ್ನು ವಿಸ್ತರಿಸಲಾಗುವುದು ಎಂದು ತಿಳಿಸಿದ್ದಾರೆ. ಈಗಾಗಲೇ ಅಸ್ತಿತ್ವದಲ್ಲಿರುವ ಅಂಗಕಸಿ 'ಜೀವ ಸಾರ್ಥಕತೆ' ಯೋಜನೆಗೆ ಶ್ವಾಸಕೋಶ, ಹೃದಯ ಮತ್ತು ಮೂಳೆ ಮಜ್ಜೆಯ ಕಸಿಯನ್ನು ಸೇರ್ಪಡೆಗೊಳಿಸಿ ಯೋಜನೆಯನ್ನು ವಿಸ್ತರಿಸಲು ತೀರ್ಮಾನಿಸಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಪಿಪಿಪಿ ಮಾದರಿಯಲ್ಲಿ ಒದಗಿಸುತ್ತಿರುವ ಸಿಟಿ ಸ್ಕ್ಯಾನ್, ಎಂ.ಆರ್.ಐ. ಸ್ಕ್ಯಾನ್ ಸೇವೆಯನ್ನು ಬಿಪಿಎಲ್ ಕಾರ್ಡ್ ಹೊಂದಿದವರಿಗೆ ಉಚಿತವಾಗಿ, ಉಳಿದವರಿಗೆ ಶೇ. 70ರಷ್ಟು ಶುಲ್ಕ ಭರಿಸುವ ಕುರಿತಾದ ಪ್ರಸ್ತಾವನೆಗೆ ಸಂಪುಟ ಸಭೆ ಅನುಮೋದನೆ ನೀಡಿದೆ.

## ಪಕ್ಷದ ಶಿಸ್ತು ಉಲ್ಲಂಘಿಸಿರುವ ಕಾಂಗ್ರೆಸ್ ಸಚಿವರ ಬಗ್ಗೆ ವರದಿ ಸಿದ್ಧ

- **ಉದಯವಾಹಿನಿ, ಬೆಂಗಳೂರು**



ಪಕ್ಷದ ಶಿಸ್ತು ಉಲ್ಲಂಘಿಸಿ ಬಹಿರಂಗ ಹೇಳಿಕೆ ನೀಡುತ್ತಿರುವ ಸಚಿವರ ಬಗ್ಗೆ ಎಐಸಿಸಿ ಹೈಕಮಾಂಡ್ ನಾಯಕರು ಕೇಳಿದ್ದು, ಮಾಧ್ಯಮ ವರದಿಗಳ ಸಹಿತ ಸಚಿವರ ಹೇಳಿಕೆಗಳ ಬಗ್ಗೆ ಕೆಪಿಸಿಸಿ ವರದಿ ಸಿದ್ಧಪಡಿಸಿದೆ.

''ವರಿಷ್ಠರ ಸೂಚನೆ ಆಧರಿಸಿ ಕೆಲವು ಸಚಿವರ ಅಸಂಬದ್ಧ ಹೇಳಿಕೆಗಳ ಬಗ್ಗೆ ವರಿಷ್ಠರು ವರದಿ ಕೇಳಿದ್ದು, ಪಕ್ಷ ಮತ್ತು ಸರಕಾರದ ವರ್ಚಸ್ಸಿಗೆ ಭಂಗ ತರುವ ಬಹಿರಂಗ ಮಾತುಗಳ ಜತೆಗೆ, ಕಳೆದ ಒಂದೂವರೆ ವರ್ಷದಿಂದ ಸಚಿವರು ಯಾವ ರೀತಿ ಕಾರ್ಯನಿರ್ವಹಣೆ ಮಾಡಿದ್ದಾರೆ ಮತ್ತು ಪಕ್ಷ ಸಂಘಟನೆಗೆ ಯಾವ ರೀತಿ ಸಹಕಾರ ನೀಡಿದ್ದಾರೆ ಎಂಬ ಬಗ್ಗೆಯೂ ವರದಿಯಲ್ಲಿಉಲ್ಲೇಖಿಸಲಾಗುತ್ತಿದೆ,'' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ ಭಂಡಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

''ಹೈಕಮಾಂಡ್ ಆದೇಶ ಉಲ್ಲಂಘಿಸುವವರು ಕಾಂಗ್ರೆಸ್ ಶಿಸ್ತಿನ ಸಿಪಾಯಿಗಳಲ್ಲ. ಪಕ್ಷಕ್ಕೆ ಪ್ರಬಲ ಮತ್ತು ಸಮರ್ಥ ನಾಯಕತ್ವವಿದೆ. ಸಿಎಂ, ಸಚಿವರು ಹಾಗೂ ಕೆಪಿಸಿಸಿ ಅಧ್ಯಕ್ಷರನ್ನು ಯಾವಾಗ ಬದಲಾವಣೆ ಮಾಡಬೇಕು? ಎಷ್ಟು ದಿನ ಮುಂದುವರಿಸಬೇಕು ಅಥವಾ ಹೊಸದಾಗಿ ಯಾರಾಗಬೇಕು? ಎಂಬ ಎಲ್ಲಾ ವಿಷಯಗಳನ್ನು ವರಿಷ್ಠ ನಾಯಕರು ನಿರ್ಧಾರ ಮಾಡಲಿದ್ದಾರೆ. ಈ ಕುರಿತು ಸಚಿವರು ಯಾವುದೇ ಹೇಳಿಕೆ ಕೊಡಬಾರದು. ನಾಯಕತ್ವ ಬದಲಾವಣೆ ತೀರ್ಮಾನ ತೆಗೆದುಕೊಳ್ಳುವುದು ಮಾಧ್ಯಮಗಳಲ್ಲ, ನಮ್ಮ ಪಕ್ಷದ ಹೈಕಮಾಂಡ್. ಹಾಗಾಗಿ, ಮಾಧ್ಯಮಗಳ ಎದುರು ಅಸಂಬದ್ಧ ಹೇಳಿಕೆ ನೀಡುತ್ತಿರುವ ಸಚಿವರ ಬಗ್ಗೆ ಎಐಸಿಸಿ ನಾಯಕರು ವರದಿ ಕೇಳಿದ್ದಾರೆ,'' ಎಂದು ತಿಳಿಸಿದ್ದಾರೆ. ಕಳೆದ ಒಂದೂವರೆ ವರ್ಷದಿಂದ ಸಚಿವರು ತಮ್ಮ ಇಲಾಖೆಯಲ್ಲಿ ಯಾವ ರೀತಿ ಕಾರ್ಯನಿರ್ವಹಣೆ ಮಾಡಿದ್ದಾರೆ? ಜಿಲ್ಲಾ ಪ್ರವಾಸ ಸಂದರ್ಭದಲ್ಲಿ ಡಿಸಿಸಿ ಕಚೇರಿಗೆ ಭೇಟಿ ನೀಡಿದ್ದಾರಾ? ಪಕ್ಷ ಸಂಘಟನೆಗೆ ಒತ್ತು ಕೊಡಲಾಗುತ್ತಿದೆಯೇ? ಪ್ರಣಾಳಿಕೆಯಲ್ಲಿ ಕೊಟ್ಟಿರುವ ಯೋಜನೆಗಳ ಜಾರಿಗೆ ಪಕ್ಷ ಮತ್ತು ಸರಕಾರಕ್ಕೆ ಸಹಕಾರ ಕೊಡುತ್ತಿದ್ದಾರೆಯೇ? ಎಂಬ ವಿವರಗಳನ್ನೂ ವರಿಷ್ಠರು ಕೇಳಿದ್ದಾರೆ,'' ಎಂದು ಭಂಡಾರಿ ಹೇಳಿದ್ದಾರೆ.

''ಸಚಿವರಾದ ಆರ್.ಬಿ ತಿಮ್ಮಾಪುರ, ಸತೀಶ್ ಜಾರಕಿಹೊಳಿ ಹಾಗೂ ಎಚ್.ಸಿ.ಮಹದೇವಪ್ಪ ಅವರು ಮಾಧ್ಯಮಗಳ ಮುಂದೆ ಪದೇಪದೆ ಮಾತನಾಡುತ್ತಿದ್ದು, ಹೈಕಮಾಂಡ್ ಇದನ್ನು ಗಂಭೀರವಾಗಿ ಪರಿಗಣಿಸಿದೆ'' ಎಂದು ಅವರು ಸಚಿವರ ಹೆಸರುಗಳನ್ನೂ ನಿರ್ದಿಷ್ಟವಾಗಿ ಉಲ್ಲೇಖಿಸಿದ್ದಾರೆ.

## ನಮ್ಮ ಮೆಟ್ರೋ ಪ್ರಯಾಣಿಕರಿಗೆ ಬಿಗ್ ಶಾಕ್

- **ಉದಯವಾಹಿನಿ, ಬೆಂಗಳೂರು**

'ನಮ್ಮ ಮೆಟ್ರೋ ಪ್ರಯಾಣಿಕರಿಗೆ ಬಿಗ್ ಶಾಕ್ ಎದುರಾಗಿದ್ದು, ಟಿಕೆಟ್ ದರ ಏರಿಕೆಗೆ ಬಿಎಂಆರ್ ಸಿಎಲ್ ಗ್ರೀನ್ ಸಿಗ್ನಲ್ ನೀಡಿದೆ. ಹೌದು, ಮೆಟ್ರೋ ದರ ಪರಿಷ್ಕರಣೆ ಸಂಬಂಧ ಇಂದು ಬಿಎಂಆರ್ ಸಿಎಲ್ ಅಧಿಕಾರಿಗಳು ಮತ್ತು ದರ ಏರಿಕೆ ಸಮಿತಿಯ ಸದಸ್ಯರ ಜೊತೆ ಹೈವೋಲ್ಟೇಜ್ ಸಭೆ ನಡೆದಿದೆ. ಸಭೆಯಲ್ಲಿ ದರ ಏರಿಕೆ ಬಗ್ಗೆ, ಫೈನಲ್ ಮಾಡಲಾಗಿದೆ. ಎಷ್ಟು ದರ ಏರಿಕೆ ಆಗಿದೆ ಎಂಬುದನ್ನು ಸುದ್ದಿಗೋಷ್ಟಿ ನಡೆಸಿ ಅಧಿಕೃತವಾಗಿ ಘೋಷಣೆ ಮಾಡುವ ಸಾಧ್ಯತೆಯಿದೆ.

ಮೂಲಗಳ ಪ್ರಕಾರ ಶೇ.15 ರಿಂದ 20 ರಷ್ಟು ಹೆಚ್ಚಿಸುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.2017 ರಲ್ಲಿ ನಮ್ಮ ಮೆಟ್ರೋ ಟಿಕೆಟ್ ದರ ಶೇ.10-15 ರಷ್ಟು ಏರಿಕೆ ಮಾಡಲಾಗಿತ್ತು.

ಇದೀಗ ಶೇ.15 ರಿಂದ 20 ರಷ್ಟು ಹೆಚ್ಚಿಸುವ ಸಾಧ್ಯತೆಯಿದೆ. ಬೆಂಗಳೂರಿಗರ ಜೀವನಾಡಿಯಾಗಿರುವ ನಮ್ಮ ಮೆಟ್ರೋದಲ್ಲಿ ಪ್ರತಿ ನಿತ್ಯ ಸಾವಿರಾರು ಜನ ಸಂಚಾರ ಮಾಡುತ್ತಾರೆ.

ಕಾರ್ಯಾಚರಣೆ ವೆಚ್ಚ ಅಧಿಕವಾದ ಹಿನ್ನೆಲೆ ನಮ್ಮ ಮೆಟ್ರೋ ಪ್ರಯಾಣ ದರ ಹೆಚ್ಚಳಕ್ಕೆ ಪ್ರಸ್ತಾಪ ಮಾಡಲಾಗಿತ್ತು. ಈಗಾಗಲೇ ಬಸ್ ಟಿಕೆಟ್ ದರ ಹೆಚ್ಚಳ ವಾಗಿದ್ದು, ಈ ಬೆನ್ನಲ್ಲೇ ಮತ್ತೊಂದು ಶಾಕ್ ಎದುರಾಗಿದೆ.



## ಹಸಿರುಬಣ್ಣಕ್ಕೆ ತಿರುಗಿದ ತುಂಗಭದ್ರೆ ನೀರು! ರಾಸಾಯನಿಕಗಳಿಂದ ಕಲುಷಿತ ?

● ಗದಗ ನಗರ ಸೇರಿದಂತೆ ಮುಂಡರಗಿ ಹಾಗೂ ಶಿರಹಟ್ಟಿ ಭಾಗದ ಜನರಲ್ಲಿ ಹಸಿರು ಬಣ್ಣಕ್ಕೆ ತಿರುಗಿದ ತುಂಗಭದ್ರಾ ನದಿ ನೀರಿನ ಆತಂಕ ಮನೆ ಮಾಡಿದೆ

- **ಉದಯವಾಹಿನಿ, ಮುಂಡರಗಿ**

ಗದಗ ಜಿಲ್ಲೆಯ ಜೀವನಾಡಿಯಾಗಿರೋ ತುಂಗಭದ್ರೆಗೆ ಅದ್ಯಾರ ಕೆಟ್ಟು ಕಣ್ಣು ಬಿದ್ದಿದೆಯೋ ಗೊತ್ತಿಲ್ಲ. ಏಕಾಏಕಿ ತುಂಗಭದ್ರಾ ನದಿಯ ನೀರು ಹಸಿರು ಬಣ್ಣಕ್ಕೆ ತಿರುಗಿದ್ದು, ಗದಗ, ಮುಂಡರಗಿ ಮತ್ತು ಶಿರಹಟ್ಟಿ ಭಾಗದ ಜನರಲ್ಲಿ ಆತಂಕ ತಂದೊಡ್ಡಿದೆ.

ಹೌದು, ಗದಗ ಜಿಲ್ಲೆಯಲ್ಲಿ ಹಾದು ಹೋಗಿರುವ ತುಂಗಭದ್ರಾ ನದಿಯ ನೀರು ಸಂಪೂರ್ಣ ಹಸಿರು ಬಣ್ಣಕ್ಕೆ (ಪಚ್ಚೇ ಬಣ್ಣ) ಕ್ಕೆ ತಿರುಗಿದೆ. ಇದರಿಂದ ಜಿಲ್ಲೆಯ ಜನರು ಸಾಕಷ್ಟು ಆತಂಕಕ್ಕೀಡಾಗಿದ್ದು, 24X7 ಕುಡಿಯುವ ನೀರಿನ ಯೋಜನೆ ಒಳಗೊಂಡಿರೋ, ಗದಗ ನಗರ ಸೇರಿದಂತೆ ಮುಂಡರಗಿ ಹಾಗೂ ಶಿರಹಟ್ಟಿ ಭಾಗದ ಜನರಲ್ಲಿ ಹಸಿರು ಬಣ್ಣಕ್ಕೆ ತಿರುಗಿದ ತುಂಗಭದ್ರಾ ನದಿ ನೀರಿನ ಆತಂಕ ಮನೆ ಮಾಡಿದೆ.

**ಆತಂಕದಲ್ಲಿ ಜಿಲ್ಲೆಯ ಜನರು**



**ತುಂಗಭದ್ರಾ ಜಲಾಶಯ ಭರ್ತಿ: ರೈತರಲ್ಲಿ ಸಂತಸ!**

ವಿಪರ್ಯಾಸ ಅಂದರೆ, ಕಳೆದ ಒಂದು ವಾರದಿಂದ ನದಿ ನೀರು ಈ ರೀತಿಯ ಬಣ್ಣಕ್ಕೆ ತಿರುಗಿದ್ದು, ಮೊದ ಮೊದಲು, ನದಿ ನೀರು ಪಾಚಿಗಟ್ಟಿರಬಹುದು ಎಂದು ಸುಮ್ಮನಾಗಿದ್ದರು. ಆದರೆ ಬರುಬರುತ್ತಾ ದಿನಗಳೆದರೂ, ನೀರು ತನ್ನ ಮೊದಲಿನ ಬಣ್ಣಕ್ಕೆ ಹಿಂದಿರುಗಿಲ್ಲ. ಮತ್ತಷ್ಟು ಹಸಿರು ಬಣ್ಣಕ್ಕೆ ತಿರುಗಿದೆ. ಇದರಿಂದ ಆತಂಕಗೊಂಡ ನದಿ ಪಾತ್ರದಲ್ಲಿನ ರೈತರು ತಮ್ಮ ದನ ಕರುಗಳನ್ನ ನದಿಯಲ್ಲಿ ನೀರು ಕುಡಿಸಲು ಹಿಂದೇಟು ಹಾಕಿದ್ದು, ನದಿ ನೀರನ್ನ ಜಾನುವಾರು ಸೇರಿದಂತೆ ತಾವುಗಳು ಕುಡಿಯಲು ಹೆದರುತ್ತಿದ್ದಾರೆ.

**ಎಲ್ಲೆಲ್ಲಿ ಹಸಿರು ಬಣ್ಣಕ್ಕೆ ತಿರುಗಿದೆ?:** ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಹಮ್ಮಿಗಿ ಗ್ರಾಮದಲ್ಲಿ ಶಿಂಗಟಾಲೂರು ಏತನೀರಾವರಿ ಯೋಜನೆಯಡಿ, ತುಂಗಭದ್ರಾ ನದಿಗೆ ಬ್ಯಾರೇಜ್ ನ್ನ (ಕಿರು ಆಣೆಕಟ್ಟು) ನಿರ್ಮಿಸಲಾಗಿದೆ. ಸದ್ಯ ಬ್ಯಾರೇಜ್ ಹಿನ್ನಿರಿನಲ್ಲಿಯೂ ಇರುವ ನೀರು ಹಸಿರು ಬಣ್ಣಕ್ಕೆ ತಿರುಗಿದ್ದು, ಅಲ್ಲಿಂದ ಮುಂದೆ, ಕೊರ್ಲಹಳ್ಳಿ-ಮದಲಗಟ್ಟಿ ಸೇತುವೆ ವರೆಗೂ ನದಿಯ ನೀರು ಹಸಿರುಗೊಂಡಿದೆ.

### ವಿಡಿಯೋ ನೋಡಿದ ಮೇಲೆ ಎಚ್ಚೆತ್ತುಕೊಂಡ ಅಧಿಕಾರಿಗಳು!

ಕಳೆದೊಂದು ವಾರದಿಂದ ನದಿ ನೀರು ಈ ರೀತಿ ಕಲುಷಿತಗೊಂಡಿದ್ದರೂ ಸಹ, ಯಾವ ಇಲಾಖೆಯ ಅಧಿಕಾರಿಗಳೂ ತೀವ್ರಗತಿಯಲ್ಲಿ ಕಾರ್ಯಪ್ರವೃತ್ತರಾಗಿಲ್ಲ. ರೈತರು ಸೋಶಿಯಲ್ ಮಿಡಿಯಾದಲ್ಲಿ ಹರಿಬಿಟ್ಟರೋ, ಹಸಿರು ಬಣ್ಣಕ್ಕೆ ತಿರುಗಿದ ನದಿ ನೀರಿನ ವಿಡಿಯೋ ತುಣುಕಗಳನ್ನ ನೋಡಿದ ಮೇಲೆ, ಅಧಿಕಾರಿಗಳು ಎಚ್ಚೆತ್ತುಗೊಂಡಿದ್ದು, ಕುಳಿತಲ್ಲೇ ಮಾಹಿತಿ ತರಿಸಿಕೊಂಡು, ಒಂದು ಇಲಾಖೆಯಿಂದ ಮತ್ತೊಂದು ಇಲಾಖೆ ಮೇಲೆ, ಒಬ್ಬರ ಮೇಲೆ, ಮತ್ತೊಬ್ಬರು ಹಾಕುತ್ತಾ, ನೀರು ಕಲುಷಿತಗೊಂಡಿರುವ ಗಂಭೀರ ವಿಷಯವನ್ನ ನಿರ್ಲಕ್ಷಿಸಿ ನಿಧಾನಗತಿಯಲ್ಲಿ ಸರಿಪಡಿಸುವ ಕೆಲಸಕ್ಕೆ ಇಳಿದಿದ್ದು, ಅಮಾಯಕರ ಅಥವಾ ಪ್ರಾಣಿ ಪಕ್ಷಿಗಳ ಜೀವ ಹೋಗುವವರೆಗೂ, ಸಂಬಂಧಿಸಿದ ಅಧಿಕಾರಿವರ್ಗ ಗಾಢ ನಿದ್ರೆಯಿಂದ ಎದ್ದೇಳುವಂತೆ ಕಾಣಿಸುತ್ತಿಲ್ಲ.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹8,127 /Gram24ct ₹7,450/Gram22ct | ಬೆಳ್ಳಿ: ₹96.50/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ**

# ಸತ್ಯ ಸಾಯಿ ಪ್ರಶಾಂತಿ ನಿಲಯಂ

ನಿನ್ನೆ ಗುರುವಾರ ರಾತ್ರಿ ಆಂಧ್ರದ ಪುಟ್ಟಪರ್ತಿಯ ಸತ್ಯ ಸಾಯಿ ಪ್ರಶಾಂತಿ ನಿಲಯಕ್ಕೆ ಬಂದೆವು. ಪಾಂಡಿಚೇರಿಯ ನೆಡುಮಾರನ್ ಉಮಾಮಹೇಶ್ವರಿ ಕುಟುಂಬ ಹಾಗೂ ಅರ್ಚಕ ರಾಜೇಶ್ ಜೊತೆಗಿದ್ದರು. ವಸತಿ ಅನ್ನಪ್ರಸಾದ ಇಲ್ಲಿ ಉಚಿತವಲ್ಲ, ನಿಜ ಹೇಳಬೇಕೆಂದರೆ ಬದುಕಿನಲ್ಲಿ ಯಾವುದೂ ಉಚಿತವಲ್ಲ. ಬೆಲೆ ತೆರಲೇಬೇಕು. ಆಗಲೇ ಬೆಲೆ ಗೊತ್ತಾಗುವುದು. ಇದು ಸತ್ಯ ಸಾಯಿಬಾಬಾ ಅವರ ಜನ್ಮ ಕರ್ಮ ತಪೋಭೂಮಿ. 1989-90 ರಲ್ಲಿ ನಾನು ಅವರನ್ನು ಬೆಂಗಳೂರಿನ ವೈಟ್ ಫೀಲ್ಡ್ ನ ಅವರ ಆಶ್ರಮದಲ್ಲಿ ಕಂಡಿದ್ದೆ. ಪರಮಹಂಸ ಸಂನ್ಯಾಸಾಶ್ರಮದವರು ಕರೆದೊಯ್ದಿದ್ದರು. ವಿಶಾಲ ಆಲದ ಮರದ ಕೆಳಗೆ ಕುಳಿತ ಅಸಂಖ್ಯ ಭಕ್ತರತ್ತ ಬಂದು ಕೆಲ ಲಿಖಿತ ಪ್ರಶ್ನೆಗಳಿಗೆ ಉತ್ತರಿಸಿ ಕೈಬೀಸಿ ಆಶೀರ್ವದಿಸಿ ಹೋದರು. ಬರಿಗೈಯಿಂದ ಭಕ್ತರಿಗೆ ವಿಭೂತಿ ಲಿಂಬೆಹಣ್ಣು ಮುಂತಾದುದನ್ನು ಆಶೀರ್ವದಿಸಿ ಕೊಡುವ ಪವಾಡಪುರುಷರೆಂಬ ಖ್ಯಾತಿ ಅವರದು. ಬೆಂಗಳೂರು ವಿವಿಯ ಮಾಜಿ ಉಪಕುಲಪತಿ ಡಾ. ಎಚ್. ನರಸಿಂಹಯ್ಯ ಒಮ್ಮೆ ಅವರಿಗೆ ಭೇಟಿಯಾಗಿ ಕುಂಬಳಕಾಯಿ ಕೊಡಿ ಎಂದರಂತೆ – ಕೊಡಲಿಲ್ಲವಂತೆ. ಪವಾಡ ಮತ್ತೊಂದು ನಿಜವಿರಲಿ ಸುಳ್ಳಿರಲಿ. ಅಷ್ಟರಿಂದ ಮಾತ್ರ ಸತ್ಯ ಸಾಯಿ ಬಾಬಾ ಅವರನ್ನು ಅಳೆಯಲಾಗದು. ಇದನ್ನು ನಾನಿಂದು ಕಣ್ಣಾರೆ ಕಂಡು ಮನವರಿಕೆ ಮಾಡಿಕೊಂಡೆ.

# ಜಾತಿ ಗಣತಿ ಅನುಷ್ಠಾನವನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ

## ಕಾಂಗ್ರೆಸ್ ನ ಹಿರಿಯ ನಾಯಕ ಹಾಗೂ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಹೇಳಿಕೆ


• **ಉದಯವಾಹಿನಿ ಬೆಂಗಳೂರು,**

ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯ ವೇಳೆ ಜಾತಿ ಗಣತಿ ಮಾಡುವ ಭರವಸೆ ನೀಡಲಾಗಿತ್ತು. ಅದು ಇಂದಲ್ಲ ನಾಳೆ ರಾಜ್ಯದಲ್ಲಿ ಆ ವರದಿ ಅನುಷ್ಠಾನಕ್ಕೆ ಬರುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಹಾಗೂ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಾತಿ ಜನಗಣತಿಯನ್ನು ತಡೆಯುತ್ತಿರುವುದು ಯಾರು ಎಂದು ಗೊತ್ತಿಲ್ಲ, ಪಕ್ಷದ ಪ್ರಣಾಳಿಕೆಯಲ್ಲಿ ಸಮೀಕ್ಷಾ ವರದಿಯನ್ನು ಬಹಿರಂಗ ಪಡಿಸುವುದಾಗಿ ತಿಳಿಸಲಾಗಿತ್ತು. ಅದನ್ನು ಒಪ್ಪುವುದಿಲ್ಲ ಎಂದರೆ ಅದನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಪ್ರಗತಿಪರ ಕಾರ್ಯಕ್ರಮಗಳನ್ನು ಜಾರಿಗೆ ತರುವಾಗ ಸಾಕಷ್ಟು ಬದಲಾವಣೆಗಳು, ವಿರೋಧಗಳು ಸಹಜ. ಆದರೆ ಪಕ್ಷದ ಭರವಸೆಯನ್ನು ದಿಟ್ಟವಾಗಿ ಜಾರಿಗೆ ತರಬೇಕಿದೆ ಎಂದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಸಂಘ ಪರಿವಾರದವರು ಅಂಬೇಡ್ಕರ್ ದ್ವೇಷಿಗಳು. ಸಂವಿಧಾನ ದ್ರೋಹಿಗಳು. ಅಮಿತ್ ಶಾ ಅಂಬೇಡ್ಕರ್ ಬಗ್ಗೆ ಈಗಾಗಲೇ ಅವಮಾನಕಾರಿ ಹೇಳಿಕೆ ನೀಡಿದ್ದಾರೆ. ಈಗ ಮೋಹನ್ ಭಾಗವತ್ ರಾಮಮಂದಿರ ಉದ್ಘಾಟನೆ ನಂತರ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆ ಎಂದು ಹೇಳಿದ್ದಾರೆ. ವಾಸ್ತವವಾಗಿ ಆರ್ ಎಸ್ ಎಸ್ ನೋಂದಣಿಯಾಗದ ಅನಧಿಕೃತ ಸಂಘಟನೆ. ಕೋಟ್ಯಂತರ ರೂಪಾಯಿಯನ್ನು ಬೇರೆ ಮೂಲಗಳಿಂದ ಖರ್ಚು ಮಾಡುತ್ತಿದ್ದಾರೆ.

ಯಾವುದಕ್ಕೂ ಲೆಕ್ಕ ಇಲ್ಲ,ಮೋಹನ್ ಭಾಗವತ್ ಯಾರು ಎಂದು ಗೊತ್ತಿಲ್ಲ. ಝಡ್ ಪ್ಲಸ್ ಭದ್ರತೆ ನೀಡಲಾಗಿದೆ. ಜನರ ತೆರಿಗೆ ದುಡ್ಡನ್ನು ಈ ರೀತಿ ಪೋಲು ಮಾಡಿ ದೇಶದಲ್ಲಿ ಅರಾಜಕತೆ ಸೃಷ್ಟಿಸುವ ವ್ಯಕ್ತಿಗೆ ಭದ್ರತೆ ನೀಡಲಾಗುತ್ತಿದೆ. ಕೂಡಲೇ ಭದ್ರತೆಯನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು. ಸಂಘ ಪರಿವಾರ ಸಂವಿಧಾನ ತ್ರಿವರ್ಣ



**ಸಾವಿರಾರು ಜನರು ತ್ಯಾಗ ಬಲಿದಾನ ಮಾಡಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದಾರೆ. ಅದನ್ನು ಅಪಮಾನಿಸಲಾಗುತ್ತಿದೆ. ದೇಶದಲ್ಲಿ ಸಂವಿಧಾನ ಇಲ್ಲ ಎಂದರೆ ಶಿಕ್ಷಣ, ಆರೋಗ್ಯ ಎಲ್ಲವೂ ಒಂದು ವರ್ಗಕ್ಕೆ ಸೀಮಿತವಾಗಲಿದೆ. ಈ ಬಗ್ಗೆ ಜನ ಸಾಮಾನ್ಯರು ಎಚ್ಚೆತ್ತುಕೊಳ್ಳಬೇಕು ಎಂದು ಕರೆ ನೀಡಿದರು.**

ಧ್ವಜವನ್ನು ಒಪ್ಪುವುದಿಲ್ಲ, ಹಿಂದೆಯೇ ವಿರೋಧ ಮಾಡಿದ್ದರು. ಸಂವಿಧಾನ ಬದಲಾವಣೆಯನ್ನು ಮೌನವಾಗಿ ಮಾಡಬೇಕು. ಬಹಿರಂಗವಾಗಿ ಚರ್ಚೆ ಮಾಡಬಾರದು ಎಂದು ಮೋಹನ್ ಭಾಗವತ್ ಹೇಳಿದ್ದಾರೆ. ಸಂವಿಧಾನ, ತ್ರಿವರ್ಣ ಧ್ವಜ ಒಪ್ಪದೆ ಇರುವವರು ತಾಲಿಬಾನಗಳು. ಇವರಿಂದ ದೇಶ ಏನನ್ನು ನಿರೀಕ್ಷೆ ಮಾಡಲಾಗುವುದಿಲ್ಲ ಎಂದರು. ಹಿಂದೆ ಬಿಜೆಪಿ ಸರ್ಕಾರ

**ಸಂಘ ಪರಿವಾರದ ಜೊತೆ ಸಂಪರ್ಕ ಇಟ್ಟುಕೊಂಡವರು ಸರ್ಕಾರದಲ್ಲಿ ಈಗಲೂ ಆಯಕಟ್ಟಿನ ಜಾಗದಲ್ಲಿದ್ದಾರೆ. ಅವರನ್ನು ದೂರ ಇಡಬೇಕಿದೆ. ನಮ್ಮ ಸರ್ಕಾರ ಗ್ಯಾರಂಟಿಯಲ್ಲಿ ಮುಳುಗಿ ಹೋಗಿದ್ದೇವೆ. ಈ ವಿಚಾರಗಳ ಕುರಿತು ಪಕ್ಷ ಮತ್ತು ಸರ್ಕಾರ ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಪಕ್ಷದಲ್ಲಿ ಯಾವುದೇ ಗೊಂದಲಗಳು ಇಲ್ಲ, ಎಲ್ಲರಿಗೂ ತಮ್ಮ ಅಭಿಪ್ರಾಯ ಹೇಳಿಕೊಳ್ಳಲು ನಮ್ಮಲ್ಲಿ ಆಂತರಿಕ ಪ್ರಜಾಪ್ರಭುತ್ವ ಇದೆ. ಹೈಕಮಾಂಡ್ ಎಲ್ಲವನ್ನೂ ಬಗೆ ಹರಿಸುತ್ತದೆ ಎಂದರು.**

ಭೂ ಸುಧಾರಣೆ ಕಾಯ್ದೆ, ಮತಾಂತರ ಕಾಯ್ದೆ ತಿದ್ದುಪಡಿ ಮಾಡಿತ್ತು, ಅದನ್ನು ಕಾಂಗ್ರೆಸ್‌ಸರ್ಕಾರ ತಿದ್ದುಪಡಿ ಮಾಡಬೇಕು. ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಕರ್ನಾಟಕ ಎಲ್ಲಾ ರಾಜ್ಯಗಳಿಂತ ಮೊದಲು ಚರ್ಚೆ ಮಾಡಿದೆ. ಅದನ್ನು ಜಾರಿಗೆ ತರಬೇಕು.

# ಕೆಚ್ಚಲು ಕೊಯ್ದ ಪ್ರಕರಣ ಮೂರು ಹಸುಗಳು ಚೇತರಿಕೆ

• **ಉದಯವಾಹಿನಿ, ಬೆಂಗಳೂರು**

ಚಾಮರಾಜಪೇಟೆಯ ವಿನಾಯಕ ನಗರದಲ್ಲಿ ಕೆಚ್ಚಲು ಕೊಯ್ದ ಪ್ರಕರಣದ ಮೂರು ಹಸುಗಳು ಚೇತರಿಸಿಕೊಳ್ಳುತ್ತಿದ್ದು, ಪಶು ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ. ಹಸುಗಳ ಆರೋಗ್ಯ ಸುಧಾರಿಸುತ್ತಿದ್ದು, ವೈದ್ಯರು ಚಿಕಿತ್ಸೆ ನೀಡುತ್ತಿದ್ದಾರೆ. ಕೆಚ್ಚಲು ಕೊಯ್ದ ಕಾರಣ ಹೆಚ್ಚು ರಕ್ತಸ್ರಾವವಾಗಿ ಹಸುಗಳು ಕೊಂಚ ಬಡಕಲಾಗಿವೆ. ಅವುಗಳಿಗೆ ಮೇವು ನೀಡಲಾಗುತ್ತಿದೆ. ಸಂಪೂರ್ಣವಾಗಿ ಗುಣಮುಖಗೊಂಡ ಬಳಿಕ ಎರಡು ಕೆಚ್ಚಲುಗಳಲ್ಲೇ ಹಾಲು ಕರೆಯಲಾಗುವುದು' ಎಂದು ಹಸುಗಳ ಮಾಲೀಕ ಕರ್ಣ ತಿಳಿಸಿದರು.

ನನ್ನ ತಾತ, ತಂದೆ ಮೂರು ದಶಕಗಳಿಂದ ಇಲ್ಲೇ ವಾಸವಿದ್ದು, ಹಾಲಿನ ವ್ಯಾಪಾರದಲ್ಲಿ ತೊಡಗಿದ್ದರು. ಬಹುತೇಕ ಮುಸ್ಲಿಂ ಸಮುದಾಯದವರೇ ಹಾಲು ಖರೀದಿ ಮಾಡುತ್ತಿದ್ದರು. ಯಾರದೋ ಪ್ರಚೋದನೆಗೆ ಒಳಗಾಗಿ ಆರೋಪಿ ಕೃತ್ಯವೆಸಗಿದ್ದಾನೆ ಎಂದು ಹೇಳಿದರು. 'ಹಸುಗಳ ಆರೈಕೆಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಒಂದು ಲಕ್ಷ ರೂಪಾಯಿ ನೀಡಿದ್ದಾರೆ. ನಾನು ಬದುಕಿರುವವರೆಗೂ ಹಸುಗಳನ್ನು ಸಾಕುತ್ತೇನೆ. ಕಸಾಯಿ ಖಾನೆಗೆ ಕೊಡುವುದಿಲ್ಲ. ಸಾಕಲು ಕಷ್ಟವಾದ ಸಂದರ್ಭದಲ್ಲಿ ಮಾತ್ರ ಗೋಶಾಲೆಗಳಿಗೆ ದಾನ ನೀಡುತ್ತೇನೆ ಎಂದರು.

# ಏರಿಕೆಗೆ ಬಿಎಂಆರ್‌ಸಿಲ್ ಬೋರ್ಡ್ ಒಪ್ಪಿಗೆ

• **ಉದಯವಾಹಿನಿ ಬೆಂಗಳೂರು**

ರಾಜ್ಯದಲ್ಲಿ ದರ ಏರಿಕೆಯ ಪರ್ವ ಮುಂದುವರಿದಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಿಎಂಟಿಸಿ ಟಿಕೆಟ್ ದರವನ್ನು ಶೇಕಡ15ರಷ್ಟು ಹೆಚ್ಚಿಸಿದ ಬೆನ್ನಲ್ಲೇ ಬೆಂಗಳೂರು ನಗರದ ಮತ್ತೊಂದು ಪ್ರಮುಖ ಸಾರಿಗೆ ಸಂಪರ್ಕ ಸಾಧನವಾಗಿರುವ ಮೆಟ್ರೋ ಟ್ರೈನು ಪ್ರಯಾಣದ ದರ ಹೆಚ್ಚಿಸಲು ಬಿಎಂಆರ್‌ಸಿಲ್ ಸಿದ್ಧತೆಗಳನ್ನು ಮಾಡಿಕೊಂಡಿದೆ. ಇವತ್ತು ನಗರದಲ್ಲಿ ನಡೆದ ಬೋರ್ಡ್ ಮೀಟಿಂಗ್ ನಲ್ಲಿ ಸಂಸ್ಥೆಯ ದರ ಏರಿಕೆ ಸಮಿತಿ ನೀಡಿದ ಶಿಫಾರಸ್ಸುಗಳನ್ನು ಮಂಡಳಿಯ ಮುಂದೆ ಮಂಡಿಸಲಾಗಿದ್ದು ದರ ಹೆಚ್ಚಳಕ್ಕೆ ಅನುಮೋದನೆ ಸಿಕ್ಕಿದೆ ಎಂದು ಬಿಎಂಆರ್‌ಸಿಎಲ್ ಹಿರಿಯ ಸಾರ್ವಜನಿಕ ಸಂಪರ್ಕಾಧಿಕಾರಿ ಯಶ್ವಂತ್ ಚೌಹಾನ್ ಹೇಳಿದ್ದಾರೆ.

# ದಪ್ಪಗಿರುವುದಕ್ಕೆ ಹುಡುಗಿ ಸಿಗುತ್ತಿಲ್ಲವೆಂದು ಆಟೋ ಚಾಲಕ ನೇಣಿಗೆ ಶರಣು

• **ಉದಯವಾಹಿನಿ ನೆಲಮಂಗಲ**

ದಪ್ಪಗಿರುವುದಕ್ಕೆ ಹುಡುಗಿ ಸಿಗುತ್ತಿಲ್ಲವೆಂದು ಯುವಕ ನೇಣಿಗೆ ಶರಣಾಗಿರುವಂತಹ ಘಟನೆ ಬೆಂಗಳೂರು ಉತ್ತರ ತಾಲ್ಲೂಕಿನ ನಾರಾಯಣಪ್ಪನಪಾಳ್ಯದಲ್ಲಿ ನಡೆದಿದೆ. ಬಾಡಿಗೆ ಮನೆಯಲ್ಲಿ ಆಟೋ ಚಾಲಕ ವೆಂಕಟೇಶ್(29) ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೋವಿಂದರಾಜು ಮತ್ತು ಮಂಗಳಮ್ಮ ದಂಪತಿ ಪುತ್ರ ವೆಂಕಟೇಶ್ ಮದುವೆಯಾಗಲು ಸುಮಾರು 15 ಹುಡುಗಿಯರನ್ನ ನೋಡಿದ್ದರು. ಎಲ್ಲಾ ಹುಡುಗಿ ಪೋಷಕರು ಹುಡುಗ ದಪ್ಪಗಿದ್ದಾನೆಂದು ನಿರಾಕರಿಸಿದ್ದರು. ಇದರಿಂದ ಮನನೊಂದು ನೇಣಿಗೆ ಶರಣಾಗಿದ್ದಾರೆ. ಫೋನ್ ತೆಗೆಯದಿದ್ದಕ್ಕೆ ಚಿಕ್ಕಮ್ಮ ಮನೆಗೆ ಬಂದಾಗ ಘಟನೆ ಬೆಳಕಿಗೆ ಬಂದಿದೆ.

# ಅಪಾರ್ಟ್‌ಮೆಂಟ್‌ನಲ್ಲಿ ರೌಡಿ ಕೊಲೆ ತಮಿಳುನಾಡಿನಲ್ಲಿ ಮೃತದೇಹ ಪತ್ತೆ

• **ಉದಯವಾಹಿನಿ ಬೆಂಗಳೂರು**

ಹಣ ಕೊಡುವುದಾಗಿ ಅಪಾರ್ಟ್‌ಮೆಂಟ್‌ಗೆ ಕರೆಸಿಕೊಂಡು ರೌಡಿಯನ್ನು ಕೊಲೆ ಮಾಡಿರುವ ಘಟನೆ ಬಾಗಲೂರು ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಮೃತದೇಹ ತಮಿಳುನಾಡಿನಲ್ಲಿ ಪತ್ತೆಯಾಗಿದೆ. ಕೊತ್ತನೂರು ನಿವಾಸಿ ಗುಣ (30) ಕೊಲೆಯಾದ ರೌಡಿಶೀಟರ್. ಕೃತ್ಯ ಎಸಗಿದ ಬ್ರಿಜೇಶ್ ಸೇರಿ ಇಬ್ಬರು ಆರೋಪಿಗಳಿಗಾಗಿ ಶೋಧ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು. ಆರೋಪಿಗಳು ಜ.10ರಂದು ಗುಣನನ್ನು ಅಪಾರ್ಟ್‌ಮೆಂಟ್‌ಗೆ ಕರೆಸಿಕೊಂಡು ಗುಂಡಿಕ್ಕಿ ಕೊಲೆ ಮಾಡಲಾಗಿತ್ತು, ಗುಣ ಅವರ ಪತ್ನಿ ಜೋಸ್ಪಿನ್ ನೀಡಿದ ದೂರು ಆಧರಿಸಿ ತನಿಖೆ ನಡೆಸಲಾಯಿತು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಕೊಲೆಯಾದ ಗುಣ ಕೊತ್ತನೂರು ಠಾಣೆಯ ರೌಡಿಶೀಟರ್ ಎಂಬುದು ಗೊತ್ತಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.


# ವೈಟ್ ಟಾಪಿಂಗ್ ಎಷ್ಟು ಸೂಕ್ತ

• **ಉದಯವಾಹಿನಿ ಬೆಂಗಳೂರು**

ವೈಟ್ ಟಾಪಿಂಗ್ ರಸ್ತೆಗಳು ವೈಜ್ಞಾನಿಕವಾಗಿ ಇರುತ್ತವೆಯೊ, ಇಲ್ಲವೋ ಎಂಬ ಬಗ್ಗೆ ಸೂಕ್ತ ವಿವರಣೆ ನೀಡಿ' ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಹೈಕೋರ್ಟ್ ನಿರ್ದೇಶಿಸಿದೆ. ಬೆಂಗಳೂರು ಮಹಾನಗರದ ರಸ್ತೆಗಳ ದುಃಸ್ಥಿತಿ ಕುರಿತಂತೆ ಕೋರಮಂಗಲದ ವಿಜಯ್ ಮೆನನ್ ಸೇರಿ ಒಟ್ಟು ನಾಲ್ವರು. 2015ರಲ್ಲಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಬಿಬಿಎಂಪಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಗುಂಡಿಗಳನ್ನು ಮುಚ್ಚುವ ಬಗ್ಗೆ ಯಾವುದೇ ಉಲ್ಲೇಖ ಇಲ್ಲದಿರುವುದನ್ನು ಗಮನಿಸಿದ ನ್ಯಾಯಪೀಠ, 'ರಸ್ತೆ ಗುಂಡಿ ಮುಚ್ಚುವ ದುರಸ್ತಿ ಕಾರ್ಯವನ್ನು ಆಗ್ಗಾಗ್ಗೆ ಕೈಗೊಳ್ಳುತ್ತಾ ಇರುತ್ತೀರೋ ಅಥವಾ ಮುಂಗಾರು ಮಳೆ ಬಂದಾಗ ಮಾತ್ರವೇ ನಡೆಸುತ್ತೀರೋ, ಇಲ್ಲವೇ ಪಿಐಎಲ್ ದಾಖಲಾದಾಗ: ಅಷ್ಟೇ ಮಾಡುತ್ತೀರೋ ಎಂದು ಬಿಬಿಎಂಪಿ ಪರ ವಕೀಲರನ್ನು ಪ್ರಶ್ನಿಸಿತು. ಅಂತೆಯೇ, 'ವೈಟ್ ಟಾಪಿಂಗ್ ರಸ್ತೆಗಳು ಸೂಕ್ತವಲ್ಲ ಎಂಬ ಹಲವು ವರದಿಗಳಿವೆ. ಸಾಮಾನ್ಯವಾಗಿ ಡಾಂಬರು ರಸ್ತೆ ಮೇಲೆ ಮಳೆ ನೀರು ಬಿದ್ದರೆ ಅದು ಮಣ್ಣಿನಲ್ಲಿ ಇಂಗಿ ಹೋಗುತ್ತದೆ. ಆದರೆ, ವೈಟ್ ಟಾಪಿಂಗ್ ರಸ್ತೆಯಲ್ಲಿ ಹಾಗಾಗುವುದಿಲ್ಲ. ಆದ್ದರಿಂದ, ವೈಟ್ ಟಾಪಿಂಗ್ ರಸ್ತೆ ವೈಜ್ಞಾನಿಕವಾಗಿ ಸರಿಯೇ, ತಪ್ಪೇ ಎಂಬುದನ್ನು ನ್ಯಾಯಾಲಯಕ್ಕೆ ತಿಳಿಸಿ' ಎಂದು ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಫೆಬ್ರುವರಿ 20ಕ್ಕೆ ಮುಂದೂಡಿತು.

# ಪರಂ- ಎಚ್‌ಸಿಎಂ ಭೇಟಿ ಕುತೂಹಲಕ್ಕೆಡೆ

• **ಉದಯವಾಹಿನಿ ಬೆಂಗಳೂರು**



ಉದಯವಾಹಿನಿ ಚಿತ್ರ

ರಾಜ್ಯ ಕಾಂಗ್ರೆಸ್‌ನಲ್ಲಿ ಡಿನ್ನರ್ ಸಭೆಗಳಿಗೆ ಹಾಗೂ ಪಕ್ಷದ ಹುದ್ದೆ ಸೇರಿದಂತೆ ಯಾವುದೇ ವಿಚಾರಗಳ ಬಗ್ಗೆ ಬಹಿರಂಗ ಹೇಳಿಕೆಗೆ ಹೈಕಮಾಂಡ್ ಬ್ರೇಕ್ ಹಾಕಿರುವಾಗಲೇ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಸಮಾಜಕಲ್ಯಾಣ ಸಚಿವ ಡಾ.ಎಚ್.ಸಿ ಮಹದೇವಪ್ಪ ಇಬ್ಬರೇ ಸಭೆ ನಡೆಸಿರುವುದು ನಾನಾ ವ್ಯಾಖ್ಯಾನಗಳಿಗೆ ಕಾರಣವಾಗಿದೆ.

ಸಚಿವ ಮಹದೇವಪ್ಪ ಅವರು ಬೆಳಿಗ್ಗೆಯೇ ಸದಾಶಿವ ನಗರದಲ್ಲಿರುವ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರ ನಿವಾಸಕ್ಕೆ ಬಂದು ಸುಮಾರು 40ಕ್ಕೂ ಹೆಚ್ಚು ನಿಮಿಷ ಅವರ ಜತೆ ಚರ್ಚೆ ನಡೆಸಿದರು. ಇವರಿಬ್ಬರ ಚರ್ಚೆ ಕುತೂಹಲ ಮೂಡಿಸಿದೆ.

ಈ ಭೇಟಿಯ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಮಹದೇವಪ್ಪ ಅವರು, ಯಾವುದೇ ರಾಜಕೀಯ ಚರ್ಚೆ ನಡೆದಿಲ್ಲ. ವೈಯಕ್ತಿಕ ಕೆಲಸಕ್ಕೆ ಪರಮೇಶ್ವರ್ ಅವರನ್ನು ಭೇಟಿ ಮಾಡಿದ್ದೆ ಎಂದು ಹೇಳಿದರು.

ಈ ಬಗ್ಗೆ ಗೃಹ ಸಚಿವ ಪರಮೇಶ್ವರ್ ಸಹ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿ ಸಚಿವ ಮಹದೇವಪ್ಪ ಅವರ ಭೇಟಿ ಚರ್ಚೆ ವಿಶೇಷವೇನೂ ಇಲ್ಲ. ವೈಯಕ್ತಿಕ ಕೆಲಸಕ್ಕೆ ಬಂದು ಮಾತನಾಡಿದ್ದಾರೆ. ಯಾಕೆ ಮಾತನಾಡಬಾರದಾ ಅನೇಕ ಸಮಯದಲ್ಲಿ ಅವರೂ ಬರುತ್ತಾರೆ. ನಾವೂ ಹೋಗುತ್ತೇವೆ ಎಂದರು. ಹಲವು ಬಾರಿ ಹಲವು ಸಚಿವರ ಮನೆಗೆ ನಾನು ತಿಂಡಿ ಊಟಕ್ಕೆ ಹೋಗಿದ್ದೇನೆ. ಅವರೂ ಬರುತ್ತಾರೆ ಇದಕ್ಕೆಲ್ಲ ಏನೇನೋ ಅರ್ಥ ಕಲ್ಪಿಸುವುದು ಸರಿಯಲ್ಲ. ಇಂತಹ ವೈಯಕ್ತಿಕ ಭೇಟಿಗಳನ್ನು ಯಾರಿಂದಲು ನಿಲ್ಲಿಸಲು ಆಗಲ್ಲ ಎಂದು ಮಾರ್ಮಿಕವಾಗಿ ಹೇಳಿದರು. ಪರಿಶಿಷ್ಟ ಜಾತಿ ಪಂಗಡದ ಸಮಾವೇಶದ ಚರ್ಚೆ ಸಂಬಂಧ ಸಚಿವ ಡಾ. ಜಿ. ಪರಮೇಶ್ವರ್ ಆಯೋಜಿಸಿದ್ದ ಪರಿಶಿಷ್ಟ ಜಾತಿ ಪಂಗಡದ ಸಚಿವರು, ಶಾಸಕರ ಔತಣಕೂಟಕ್ಕೆ ಹೈಕಮಾಂಡ್ ಬ್ರೇಕ್ ಹಾಕಿತ್ತು.ಆಗಿನಿಂದಲೂ ಪರಮೇಶ್ವರ್ ಸ್ವಲ್ಪಮಟ್ಟಿಗೆ ಅಸಮಾಧಾನಗೊಂಡಿದ್ದಾರೆ.

# ಸದನದಲ್ಲಿ ಲಕ್ಷ್ಮಿ ಹೆಬ್ಬಾಳ್ಕರ್‌ಗೆ ಸಿ.ಟಿ.ರವಿ ನಿಂದಿಸಿದ್ದು ಫೋರೆನ್ಸಿಕ್ ಪರೀಕ್ಷೆಯಲ್ಲಿ ದೃಢ

• **ಉದಯವಾಹಿನಿ ಬೆಂಗಳೂರು,**



ಉದಯವಾಹಿನಿ ಚಿತ್ರ

ಸದನದಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧ ಎಂಎಲ್‌ಸಿ ಸಿ.ಟಿ.ರವಿ ಆಕ್ಷೇಪಾರ್ಹ ಪದ ಬಳಕೆ ಮಾಡಿರುವುದು ಖಚಿತ ಎಂದು ಸಿಐಡಿ ಮೂಲಗಳು ತಿಳಿಸಿವೆ. ಅಸಲಿ ವೀಡಿಯೋ ಇದೀಗ ಸಿಐಡಿಗೆ ಲಭ್ಯವಾಗಿದೆ.

ಪ್ರಕರಣವನ್ನು ಸಿಐಡಿಗೆ ವಹಿಸಲಾಗಿತ್ತು. ರಾಜ್ಯ ಆಡಳಿತ ಮತ್ತು ಸಿಬ್ಬಂದಿ ಸುಧಾರಣೆ ಇಲಾಖೆ ನೀಡಿದ್ದ ಸದನದ ವಿಡಿಯೋವನ್ನು ಪರೀಕ್ಷೆಗೆ ಒಳಪಡಿಸಿದಾಗ ಸಿಟಿ ರವಿ ಅವಾಚ್ಯ ಶಬ್ದ ಬಳಸಿರುವುದು ಫೋರೆನ್ಸಿಕ್ ಪರೀಕ್ಷೆಯಲ್ಲಿ ದೃಢವಾಗಿದೆ ಎಂದು ತಿಳಿದುಬಂದಿದೆ. ನಾಲ್ಕು ಗಂಟೆಯ ವಿಡಿಯೋ ರೆಕಾರ್ಡ್‌ನಲ್ಲಿ ಒಟ್ಟು ಏಳು ಬಾರಿ ಅವಾಚ್ಯ ಶಬ್ದ ಬಳಕೆ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳಿಂದ ತಿಳಿದಬಂದಿದೆ, ಅವಾಚ್ಯ ಶಬ್ದ ಬಳಸಿದ ಧ್ವನಿ ಪತ್ತೆಗೆ ಸಿಟಿ ರವಿ ವಾಯ್‌ಸ ಸ್ಯಾಂಪಲ್ ಪಡೆಯಲು ಸಿಐಡಿ ಮುಂದಾಗಿದೆ. ಆದರೆ ತಾನು ಅವಾಚ್ಯ ಶಬ್ದ ಬಳಸಿಲ್ಲ ಎಂದು ಸಿಟಿ ರವಿ ಹೇಳುತ್ತಿದ್ದಾರೆ.

ಜೊತೆಗೆ ವಾಯ್‌ಸ ಸ್ಯಾಂಪಲ್ ನೀಡಲು ನಿರಾಕರಿಸಿದ್ದಾರೆ. ಹೀಗಾಗಿ, ನ್ಯಾಯಾಲಯದ ಮೂಲಕ ವಿಚಾರಣೆಗೆ ಮತ್ತು ವಾಯ್‌ಸ ಸ್ಯಾಂಪಲ್ ಪಡೆಯಲು ಸಿಐಡಿ ಮುಂದಾಗಿದೆ. ಸಿ.ಟಿ.ರವಿ ವಾಯ್‌ಸ ಸ್ಯಾಂಪಲ್ ಪಡೆಯಲು ಸಿಐಡಿ ಮುಂದಾಗಿತ್ತು. ಆದರೆ, ಅದಕ್ಕೆ ಸಿ.ಟಿ.ರವಿ ನಿರಾಕರಿಸಿದ್ದರು. ಕೊನೆಗೆ ಡಿಪಿಎಆರ್‌ನಿಂದ ಅಸಲಿ ವೀಡಿಯೋವನ್ನು ಸಿಐಡಿ ವಶಕ್ಕೆ ಪಡೆದಿತ್ತು. ಬೆಳಗಾವಿ ಅಧಿವೇಶನದ ವೇಳೆ ಮೇಲನೆಯಲ್ಲಿ ನಡೆದಿದ್ದ ಘಟನಾವಳಿಗಳ ಕುರಿತು ವೀಡಿಯೋ-ಆಡಿಯೋ ದಾಖಲೆ ನೀಡುವಂತೆ ರಾಜ್ಯ ಆಡಳಿತ ಮತ್ತು ಸಿಬ್ಬಂದಿ ಸುಧಾರಣೆ ಇಲಾಖೆಗೆ (ಡಿಪಿಎಆರ್) ಸಿಐಡಿ ಮನವಿ ಮಾಡಿತ್ತು.

**ಸದನದಲ್ಲಿ ನಿಂದನೆ ಕೃತ್ಯ ನಡೆದ ವೇಳೆ ಚಿತ್ರೀಕರಿಸಿದ್ದ 4 ಗಂಟೆ ವೀಡಿಯೋವನ್ನು ಸಿಐಡಿಗೆ ಸಲ್ಲಿಸಲಾಗಿತ್ತು. ಬೆಳಗಾವಿ ಚಳಿಗಾಲದ ಅಧಿವೇಶನದ ಕೊನೆಯ ದಿನ ಡಿಸೆಂಬರ್ 19 ರಂದು ವಿಧಾನಪರಿಷತ್‌ನಲ್ಲಿ ಬಿಜೆಪಿ, ಕಾಂಗ್ರೆಸ್‌ಸದಸ್ಯರ ಮಧ್ಯೆ ಮಾತಿನ ಚಕಮಕಿ ನಡೆದಿತ್ತು. ಮಾತಿನ ಚಕಮಕಿ ನಡುವೆ ಸಿಟಿ ರವಿ ಅವರು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ಅಸಂಸದೀಯ ಅವಾಚ್ಯ ಶಬ್ದ ಬಳಕೆ ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು. ಈ ಬಗ್ಗೆ ಹಿರೇಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಎಫ್ ಐಆರ್ ದಾಖಲಾಗಿತ್ತು.**

# ಪಾರದರ್ಶಕತೆಗೆ ಅಬಕಾರಿ ಇಲಾಖೆಯಲ್ಲಿ ವರ್ಗಾವಣೆಗೆ ಹೊಸ ನಿಯಮ

• **ಉದಯವಾಹಿನಿ ಬೆಂಗಳೂರು,**



ಸುಧಾರಣೆ ಹಾಗೂ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಸರ್ಕಾರ ಅಬಕಾರಿ ಇಲಾಖೆಯ ವರ್ಗಾವಣೆಗೆ ಹೊಸ ನಿಯಮಗಳನ್ನು ರೂಪಿಸಿದೆ. ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ನಿನ್ನೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಕರ್ನಾಟಕ ನಾಗರೀಕ ಸೇವೆಗಳು (ಅಬಕಾರಿ ಇಲಾಖೆಯ ವರ್ಗಾವಣೆ) ನಿಯಮಗಳು 2025 ಅನುಮೋದಿಸಲಾಗಿದೆ. ಆ ಮೂಲಕ ಪಾರದರ್ಶಕ ಮತ್ತು ನಿಯಮಾಧಾರಿತ ವರ್ಗಾವಣೆ ಪದ್ಧತಿಯನ್ನು ಜಾರಿಗೊಳಿಸಲು ಮುಂದಾಗಿದೆ.

ಜೊತೆಗೆ ಒಬ್ಬ ಅಧಿಕಾರಿ ಅಥವಾ ಸಿಬ್ಬಂದಿಯನ್ನು ಸತತವಾಗಿ ಎರಡಕ್ಕಿಂತ ಹೆಚ್ಚು ಅವಧಿಗೆ ಕಾರ್ಯನಿರ್ವಾಹಕ ಹುದ್ದೆಗೆ ವರ್ಗಾಯಿಸುವಂತಿಲ್ಲ. ಅಬಕಾರಿ ಅಧಿಕಾರಿಗಳ ಕಡ್ಡಾಯ ವರ್ಗಾವಣೆಗೆ ಹೊಸ ನಿಯಮದಲ್ಲಿ ಪ್ರಸ್ತಾಪಿಸುವುದು.

ಕಳೆದ 05 ವರ್ಷಗಳಲ್ಲಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿನ ಕಾರ್ಯನಿರ್ವಾಹಕ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಿದ ಅಬಕಾರಿ ಜಂಟಿ ಆಯುಕ್ತರು, ಉಪ ಆಯುಕ್ತರು, ಅಧೀಕ್ಷಕರು, ನಿರೀಕ್ಷಕರು ಮತ್ತು ಉಪ ನಿರೀಕ್ಷಕರುಗಳನ್ನು ಸದರಿ ಜಿಲ್ಲೆಗಳನ್ನು ಹೊರತುಪಡಿಸಿ ಇತರೆ ಜಿಲ್ಲೆಗಳಿಗೆ ವರ್ಗಾಯಿಸಲು ಹೊಸ ನಿಯಮದಲ್ಲಿ ಉಲ್ಲೇಖಿಸಲಾಗಿದೆ.

ಅಬಕಾರಿ ಇಲಾಖೆಯು ಸಮವಸ್ತ್ರಾಧಾರಿತ ಮತ್ತು ನಿಯಂತ್ರಕ ಇಲಾಖೆ ಆಗಿರುವುದರಿಂದ ಹೊಸ ವರ್ಗಾವಣೆ ನಿಯಮ ಜಾರಿ ಮತ್ತು ತನಿಖೆ ಕಾರ್ಯವನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ಅನುಕೂಲವಾಗಲಿದೆ. ಇಲಾಖೆಯಲ್ಲಿ ಪಾರದರ್ಶಕತೆ ವ್ಯವಸ್ಥೆ ಜಾರಿಯಾಗುವುದಿಂದ ಭ್ರಷ್ಟಾಚಾರಕ್ಕೆ ಆಸ್ಪದ ಸಿಗುವುದಿಲ್ಲ ಮತ್ತು ಸರ್ಕಾರಕ್ಕೆ ಆದಾಯ ಕೂಡ ಹೆಚ್ಚಾಗಲಿದೆ.

### ಕೌನ್ಸಿಲಿಂಗ್ ಮೂಲಕ ವರ್ಗಾವಣೆ

**ಅಬಕಾರಿ ಇಲಾಖೆಯಲ್ಲಿನ ಹುದ್ದೆಗಳನ್ನು ಕಾರ್ಯ ನಿರ್ವಾಹಕ ಮತ್ತು ಕಾರ್ಯನಿರ್ವಾಹಕೇತರ ಎಂದು ವಿಂಗಡಿಣೆ ಮಾಡಲಾಗಿದೆ. ಅಬಕಾರಿ ನಿರೀಕ್ಷಕರು, ಅಬಕಾರಿ ಉಪ ನಿರೀಕ್ಷಕರು, ಅಬಕಾರಿ ಮುಖ್ಯ ಪೇದೆ ಮತ್ತು ಅಬಕಾರಿ ಪೇದೆಗಳ ವರ್ಗಾವಣೆಯನ್ನು ಕೌನ್ಸಿಲಿಂಗ್ ಮುಖಾಂತರ ಮಾಡಲು ನಿರ್ಧಾರ ಮಾಡಲಾಗಿದೆ.**

# ದರ್ಶನ್‌ಗೆ ಜಾಮೀನು, ಜ.24 ಸುಪ್ರೀಂನಲ್ಲಿ ವಿಚಾರಣೆ

• **ಉದಯವಾಹಿನಿ ಬೆಂಗಳೂರು,**



ರೇಣುಕಾ ಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್‌ಗೆ ನೀಡಿರುವ ಜಾಮೀನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿ ವಿಚಾರಣೆಯು ಜನವರಿ 24ರಂದು ನಡೆಯಲಿದೆ.

ಒಂದೊಮ್ಮೆ ಜಾಮೀನು ರದ್ದಾದರೆ ದರ್ಶನ್ ಮತ್ತೆ ಜೈಲು ಸೇರಬೇಕಾಗುತ್ತದೆ.

ಜೂನ್ 11ರಂದು ದರ್ಶನ್ ಅವರು ರೇಣುಕಾ ಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾದರು. ಆ ಬಳಿಕ ಹಲವು ತಿಂಗಳು ಜೈಲಿನಲ್ಲಿ ಇದ್ದರು. ಕೆಳಹಂತದ ಕೋರ್ಟ್‌ನಲ್ಲಿ ಅವರ ಜಾಮೀನು ಅರ್ಜಿ ವಜಾ ಆಯಿತು. ಆ ಬಳಿಕ ಹೈಕೋರ್ಟ್‌ನಲ್ಲಿ ಅನಾರೋಗ್ಯದ ಕಾರಣ ನೀಡಿ ಮಧ್ಯಂತರ ಜಾಮೀನು ಪಡೆದ ಅವರು ನಂತರ ಪೂರ್ಣ ಪ್ರಮಾಣದ ಜಾಮೀನು ಪಡೆದುಕೊಂಡರು. ದರ್ಶನ್ ಜೊತೆ ಪವಿತ್ರಾಗೌಡ, ನಾಗರಾಜ್, ಲಕ್ಷ್ಮಣ್, ಅನುಕುಮಾರ್, ಜಗದೀಶ್ ಮತ್ತು ಪ್ರದೋಶ್ ಕೂಡ ಜಾಮೀನು ಪಡೆದಿದ್ದಾರೆ. ಇದನ್ನು ಸುಪ್ರೀಂನಲ್ಲಿ ಪ್ರಶ್ನಿಸಲಾಗಿದೆ.

ಸುಪ್ರೀಂಕೋರ್ಟ್‌ನಲ್ಲಿ ಜ.24ರಂದು ಅರ್ಜಿ ವಿಚಾರಣೆ ನಡೆಸಲಿದೆ. ದರ್ಶನ್, ಪವಿತ್ರಾ ಸೇರಿ 7 ಆರೋಪಿಗಳ ಜಾಮೀನು ಪ್ರಶ್ನಿಸಿ ಬೆಂಗಳೂರು ಪೊಲೀಸರು ಜನವರಿ 6ರಂದು ಅರ್ಜಿ ಸಲ್ಲಿಕೆ ಮಾಡಿದ್ದಾರೆ. ಈಗ ಅರ್ಜಿ ವಿಚಾರಣೆಗೆ ದಿನಾಂಕ ನಿಗದಿ ಮಾಡಿದೆ.

ಕಳೆದ ಡಿಸೆಂಬರ್‌ನಲ್ಲಿ ಹೈಕೋರ್ಟ್‌ನಿಂದ ಆರೋಪಿಗಳು ಜಾಮೀನು ಪಡೆದಿದ್ದರು. ಪೊಲೀಸರು ಮೇಲ್ಮನವಿ ಸಲ್ಲಿಸಿರುವುದರಿಂದ ಏಳು ಆರೋಪಿಗಳಿಗೆ ಮತ್ತೆ ಕಂಟಕ ಶುರುವಾಗಿದೆ. ಸುಪ್ರೀಂ ಕೋರ್ಟ್‌ನಲ್ಲಿ ದರ್ಶನ್ ಆಂಡ್ ಗ್ಯಾಂಗ್‌ಗೆ ರಿಲೀಫ್ ಸಿಗುತ್ತಾ ನೋಡಬೇಕಿದೆ. ಹೈಕೋರ್ಟ್‌ನಲ್ಲಿ ಈ ಮೊದಲು ಸರ್ಕಾರಿ ಪರ ವಕೀಲರಾಗಿ ಪ್ರಸನ್ನ ಕುಮಾರ್ ಅವರು ವಾದ ಮಂಡನೆ ಮಾಡಿದ್ದರು. ಸುಪ್ರೀಂ ಕೋರ್ಟ್‌ಗೆ ವಕೀಲರಾಗಿ ಅನಿಲ್ ಸಿ. ನಿಶಾನಿ ನೇಮಕ ಮಾಡಿ, ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಅವರು ದರ್ಶನ್ ವಿರುದ್ಧ ವಾದ ಮಂಡನೆ ಮಾಡಲಿದ್ದಾರೆ.

# ಬಿಬಿಎಂಪಿ: ಮುಂದುವರಿದ ಲೋಕಾ ದಾಳಿ

• **ಉದಯವಾಹಿನಿ ಬೆಂಗಳೂರು**



ಬಿಬಿಎಂಪಿಯ ಸಹಾಯಕ ಕಂದಾಯ ಅಧಿಕಾರಿ ಮತ್ತು ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿಗಳ ಮೇಲೆ ಲೋಕಾಯುಕ್ತ ದಾಳಿಯು ಗುರುವಾರವೂ ಮುಂದುವರೆದಿದ್ದು. ನಗರದ ವಿವಿಧ ಭಾಗದಲ್ಲಿರುವ 12 ಕಚೇರಿಗಳಿಗೆ ದಿಢೀರ್ ಭೇಟಿ ನೀಡಿ ಶೋಧ ನಡೆಸಲಾಗಿದೆ.

ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ಡಾ.ಟಿಸಿಎಂ ರಾಯನ್ ರಸ್ತೆಯಲ್ಲಿರುವ ಗಾಂಧಿನಗರ ಉಪ ವಿಭಾಗದ ಎಆರ್‌ಒ ಕಚೇರಿ, ವಸಂತನಗರದ ತಿಮ್ಮಯ್ಯ ರಸ್ತೆಯಲ್ಲಿರುವ ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿ, ವಿಜಯನಗರದ ಎಂ.ಸಿ ಬಡಾವಣೆಯಲ್ಲಿರುವ ಗೋವಿಂದರಾಜನಗರ ಉಪ ವಿಭಾಗದ ಎಆರ್‌ಒ ಕಚೇರಿ ಮತ್ತು ತಿಮ್ಮಯ್ಯ ರಸ್ತೆಯಲ್ಲಿರುವ ವಸಂತನಗರ ಉಪ ವಿಭಾಗದ ಎಆರ್‌ಒ ಕಚೇರಿಗಳಿಗೆ ಭೇಟಿ ನೀಡಿ ಪರಿಶೀಲಿಸಿದರು' ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.

'ಸಿಬ್ಬಂದಿ ಕಚೇರಿಯಲ್ಲಿ ಇಲ್ಲದೇ ಇರುವುದು, ಹಾಜರಾತಿ ಪುಸ್ತಕ, ನಗದು ವಹಿ, ಸಿಬ್ಬಂದಿ ಚಲನ ವಲನ ವಹಿಗಳನ್ನು ನಿರ್ವಹಣೆ ಮಾಡದಿರುವುದು ಪತ್ತೆಯಾಯಿತು. ಈ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದ ಉಪ ಲೋಕಾಯುಕ್ತರು, ಲಿಖಿತ ವಿವರಣೆ ನೀಡುವಂತೆ ಸೂಚಿಸಿದರು. ಲೋಪಕ್ಕೆ ಕಾರಣವಾದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು' ಎಂದು ಮಾಹಿತಿ ನೀಡಿವೆ.

# ಬಸ್ ಟಿಕೆಟ್ ಬೆನ್ನಲ್ಲೇ ಮತ್ತೊಂದು ದರ ಏರಿಕೆ ಶಾಕ್

• **ಉದಯವಾಹಿನಿ ಬೆಂಗಳೂರು**



ನಗರದಲ್ಲಿ ದಿನದಿಂದ ದಿನಕ್ಕೆ ಮೆಟ್ರೋ ಜಾಲ ವಿಸ್ತರಣೆ ಆಗುತ್ತಿದೆ. ಮೆಟ್ರೋದಲ್ಲಿ ಸಂಚಾರ ಮಾಡುವವರ ಸಂಖ್ಯೆ ಕೂಡ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಹಾಗಾಗಿ ಟಿಕೆಟ್ ದರ ಹೆಚ್ಚಳ ಮಾಡಲು ಬಿಎಂಆರ್‌ಸಿಎಂ ಮುಂದಾಗಿತ್ತು. ಇದೀಗ ಕೊನೆಗೂ ಬಿಎಂಆರ್ ಸಿಎಲ್ ಬೋರ್ಡ್ ದರ ಏರಿಕೆಗೆ ಅಸ್ತು ಎಂದಿದೆ. ಅಧಿಕೃತ ಘೋಷಣೆ ಮಾಡಲಿದೆ. ಆ ಮೂಲಕ ನಮ್ಮ ಮೆಟ್ರೋ ಪ್ರಯಾಣಿಕರಿಗೆ ಶಾಕ್ ನೀಡಿದೆ.

ಜೊತೆಗೆ ಯಾವತ್ತಿನಿಂದ ದರ ಜಾಸ್ತಿ ಮಾಡಬೇಕು ಎನ್ನುವ ಸಿದ್ದತೆಗೆ ಬಿಎಂಆರ್‌ಸಿಎಲ್‌ಗೆ ಬೋರ್ಡ್ ಸೂಚಿಸಿದ್ದು, ಅದರಂತೆ ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಎಷ್ಟಾಗಬೇಕು, ಎಷ್ಟು ದರ ನಿಗದಿ ಎನ್ನುವ ಬಗ್ಗೆ ನಾಳೆ ನಿರ್ಧಾರ ಮಾಡಿ ಬಿಎಂಆರ್‌ಸಿಎಲ್ ಮಾಹಿತಿ ನೀಡಲಿದೆ. 105% ರಷ್ಟು ಟಿಕೆಟ್ ದರ ಹೆಚ್ಚಳಕ್ಕೆ ಬಿಎಂಆರ್ ಸಿಎಲ್ ಮನವಿ ಮಾಡಿತ್ತು. ಆದರೆ ಬಹುತೇಕ 40% ರಿಂದ 45% ಟಿಕೆಟ್ ದರ ಹೆಚ್ಚಳವಾಗುವ ಸಾಧ್ಯತೆ ಇದೆ. ಮೆಟ್ರೋದಲ್ಲಿ ಟಿಕೆಟ್ ದರ ಕನಿಷ್ಠ 10 ರೂ. ಇದೆ. ಅದರಲ್ಲಿ ಯಾವುದೇ ಹೆಚ್ಚಳವಾಗಲ್ಲ. ಗರಿಷ್ಠ 60 ರೂ ಇರುವ ದರದಲ್ಲಿ 90 ರೂ. ವರೆಗೆ ಹೆಚ್ಚಳವಾಗಲಿದೆ. ಪ್ರತಿ ಎರಡು ಕಿ.ಮೀ ನಂತರ ಹತ್ತು ರೂಪಾಯಿಯಷ್ಟು ಹೆಚ್ಚಳ ಮಾಡಲು ಪ್ಲಾನ್ ಮಾಡಿರುವುದಾಗಿ ನಮ್ಮ ಮೆಟ್ರೋ ಉನ್ನತ ಮೂಲಗಳಿಂದ ಮಾಹಿತಿ ನೀಡಲಾಗಿದೆ. ಕಳೆದ ಏಳು ವರ್ಷಗಳಿಂದ ನಮ್ಮ ಮೆಟ್ರೋ ಟಿಕೆಟ್ ದರ ಏರಿಕೆ ಮಾಡಿರಲಿಲ್ಲ. ಹಾಗಾಗಿ ಟಿಕೆಟ್ ದರ ಹೆಚ್ಚಳ ಮಾಡಲು ನಮ್ಮ ಮೆಟ್ರೋ ಇತ್ತೀಚೆಗೆ ಕಮಿಟಿ ಕೂಡ ರಚನೆ ಮಾಡಿತ್ತು. ಆ ಮೂಲಕ ಅಕ್ಟೋಬರ್ 3 ರಿಂದ 28ರ ವರೆಗೆ ಪ್ರಯಾಣಿಕರ ಅಭಿಪ್ರಾಯ ತಿಳಿಸಲು ಅವಕಾಶ ನೀಡಲಾಗಿತ್ತು.

**ಶಾಂತಿನಗರದ ಬಿಎಂಆರ್‌ಸಿಎಲ್ ಮುಖ್ಯ ಕಚೇರಿಯಲ್ಲಿ ದರ ಏರಿಕೆ ಸಂಬಂಧ ಸಭೆ ಮಾಡಲಾಯಿತು. ಸಭೆ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಬಿಎಂಆರ್‌ಸಿಎಲ್ ಹಿರಿಯ ಸಾರ್ವಜನಿಕ ಸಂಪರ್ಕಾಧಿಕಾರಿ ಯಶ್ವಂತ್ ಚೌವ್ಹಾಣ್, ಸಭೆ ಯಲ್ಲಿ ದರ ಏರಿಕೆಗೆ ಒಪ್ಪಿಗೆ ಸೂಚಿಸಲಾಗಿದೆ. ಸುದ್ದಿಗೋಷ್ಠಿ ಮಾಡಲಿರುವ ಬಿಎಂಆರ್‌ಸಿಎಲ್, ಅಧಿಕೃತ ಘೋಷಣೆ ಮಾಡಲಿದೆ ಎಂದು ತಿಳಿಸಿದರು.**

# ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಯಾವುದೇ ನೋಟೀಸ್ ನೀಡಿಲ್ಲ

## ಬಿಜೆಪಿ ಪ್ರಾಯೋಜಿತ ವದಂತಿಗಳನ್ನು ಯಾರೂ ನಂಬಬಾರದು ಎಂದು ಮನವಿ, ಸತೀಶ್ ಜಾರಕಿಹೊಳಿ ಕೂಡ ಖಾರವಾಗಿಯೇ ತಿರುಗೇಟು

• **ಉದಯವಾಹಿನಿ ಬೆಂಗಳೂರು**

**ಕೆಪಿಸಿಸಿ ಅಧ್ಯಕ್ಷರ ಬದಲಾವಣೆ**

ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯ ವದಂತಿಗಳನ್ನು ಸ್ಪಷ್ಟವಾಗಿ ಅಲ್ಲಗಳೆದಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಸಚಿವ ಸತೀಶ್ ಜಾರಕಿಹೊಳಿ ಅವರಿಗೂ ಯಾವುದೇ ನೋಟೀಸ್ ನೀಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಬೆಳಗಾವಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎರಡು ಪ್ರಮುಖ ವದಂತಿಗಳನ್ನು ತಳ್ಳಿ ಹಾಕುವ ಮೂಲಕ ರಾಜ್ಯ ಕಾಂಗ್ರೆಸ್‌ನಲ್ಲಿ ಸೃಷ್ಟಿಯಾಗಿದ್ದ ಅಲ್ಲೋಲಕಲ್ಲೋಲವನ್ನು ತಣ್ಣಗಾಗಿಸುವ ಯತ್ನ ನಡೆಸಿದ್ದಾರೆ.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ನೋಟೀಸ್ ನೀಡಲಾಗಿದೆ ಎಂಬ ವದಂತಿಗೆ ಪ್ರತಿಕ್ರಿಯಿಸಿದ ಸುರ್ಜೇವಾಲ, ಇಂತಹ ವಿಕಲ್ಪ ಸುದ್ದಿಗಳು ಎಲ್ಲಿಂದ ಹರಡುತ್ತವೆ ಎಂದು ನನಗೆ ಗೊತ್ತಿಲ್ಲ. ಮಾಧ್ಯಮಗಳು ಜವಾಬ್ದಾರಿಯುತ ಹಾಗೂ ಸಂಯಮದಿಂದ ವರ್ತಿಸಬೇಕು. ಸಚಿವರು ಅಥವಾ ಯಾವುದೇ ವ್ಯಕ್ತಿಗೆ ವಿನಾಕಾರಣ ನೋಟೀಸ್ ನೀಡಲಾಗುವುದಿಲ್ಲ. ಬಿಜೆಪಿ ಪ್ರಾಯೋಜಿತ ವದಂತಿಗಳನ್ನು ಯಾರು ನಂಬಬಾರದು ಎಂದು ಮನವಿ ಮಾಡಿದ್ದಾರೆ.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯಾಗುವುದಾದರೆ ಡಿ.ಕೆ.ಶಿವಕುಮಾರ್ ಅವರು ಗಾಂಧಿ ಭಾರತ ಕಾರ್ಯಕ್ರಮದ ಸಿದ್ಧತೆಗಾಗಿ ಇಂದಿನ ಪೂರ್ವ ಭಾವಿ ಸಭೆಗೆ ಏಕೆ ಬರುತ್ತಿದ್ದರು ಎಂದು ಮರು ಪ್ರಶ್ನಿಸುವ ಮೂಲಕ ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯೂ ಇಲ್ಲ ಎಂದಿದ್ದಾರೆ. ಸತೀಶ್ ಜಾರಕಿಹೊಳಿ ಬೆಳಗ್ಗೆ ನೋಟೀಸ್ ಕೊಟ್ಟರೆ ಸಂಜೆ ವೇಳೆಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ್ ಭಂಡಾರಿ ಸಚಿವರು ಬಹಿರಂಗ ಹೇಳಿಕೆ ನೀಡುವುದು ಸರಿಯಲ್ಲ. ಸಚಿವರು ತಮ ಇಲಾಖೆ ಯಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡುವಂತೆ ಪತ್ರ ಬರೆದಿದ್ದರು.

ಇದನ್ನು ನೋಟೀಸ್ ಎಂದು ಪರಿಭಾವಿಸಲಾಗಿತ್ತು. ನೋಟೀಸ್ ಕೊಟ್ಟರೆ ಅನಾವುತವೇನೂ ಆಗುವುದಿಲ್ಲ. ಅದಕ್ಕೆ ಉತ್ತರ ಕೊಡುತ್ತೇನೆ ಎಂದು ಸತೀಶ್ ಜಾರಕಿಹೊಳಿ ಕೂಡ ಖಾರವಾಗಿಯೇ ತಿರುಗೇಟು ನೀಡಿದ್ದರು.

ಇದಕ್ಕೆಲ್ಲಾ ತೆರೆ ಎಳೆದಿರುವ ರಣದೀಪ್ ಸಿಂಗ್ ಸುರ್ಜೇವಾಲ ಯಾರಿಗೂ ನೋಟೀಸ್ ನೀಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಅದೇ ಸಮಯದಲ್ಲಿ ಕೆಪಿಸಿಸಿ ಅಧ್ಯಕ್ಷರಾಗಿರುವ ಡಿ.ಕೆ.ಶಿವಕುಮಾರ್ ಅವರನ್ನು ಬದಲಾವಣೆ ಮಾಡುವುದಿಲ್ಲ ಎಂದು ಹೇಳುವ ಮೂಲಕ ಕಾಂಗ್ರೆಸ್‌ನಲ್ಲಿರುವ ಎರಡೂ ಬಣಗಳಿಗೆ ಚಾಟಿ ಬೀಸಿದ್ದಾರೆ.



ಎಲ್ಲರೂ ತಮಗೆ ನೀಡಿರುವ ಜವಾಬ್ದಾರಿ ನಿಭಾಯಿಸುವತ್ತ ಗಮನ ಹರಿಸಬೇಕು. ಅದನ್ನು ಬಿಟ್ಟು ಅನಗತ್ಯವಾಗಿ ಎಲ್ಲದಕ್ಕೂ ಮೂಗು ತೂರಿಸಬೇಡಿ, ಪಕ್ಷಕ್ಕೆ ಹಾನಿಯಾಗುವಂತಹ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಡಿ ಎಂದು ಎಚ್ಚರಿಕೆ ನೀಡಿದಂತಿದೆ.

ಇನ್ನೂ ಮುಂದಾದರೂ ಆಡಳಿತಾ ರೂಢ ಕಾಂಗ್ರೆಸ್‌ನಲ್ಲಿ ಗುಂಪುಗಾರಿಕೆ ತಣ್ಣಗಾಗಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ.

### ಎರಡು ಬಣಗಳಿಗೂ ಬ್ರೇಕ್

**ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯಾಗಬೇಕು ಎಂದು ಸಚಿವರಾದ ಕೆ.ಎನ್.ರಾಜಣ್ಣ, ಸತೀಶ್ ಜಾರಕಿಹೊಳಿ ಸೇರಿದಂತೆ ಅನೇಕರು ಬಹಿರಂಗ ಹೇಳಿಕೆ ನೀಡಿದ್ದರು. ಒಂದು ಹೆಜ್ಜೆ ಮುಂದೆ ಹೋಗಿದ್ದ ಸತೀಶ್ ಜಾರಕಿಹೊಳಿ, ವಿಧಾನಸಭೆ ಚುನಾವಣೆ ಬಳಿಕ ಪಕ್ಷ ಸಂಘಟನೆ ಸೊರಗಿದೆ. ಮುಂದಿನ ದಿನಗಳಲ್ಲಿ ಪಕ್ಷಕ್ಕೆ ಮತ ತಂದು ಕೊಡುವ ಪೂರ್ಣಾವಧಿ ಅಧ್ಯಕ್ಷರು ಬೇಕು ಎಂದು ಹೇಳಿದ್ದರು. ಇದು ಭಾರೀ ಸಂಚಲನ ಮೂಡಿಸಿತ್ತು.**

# ಚೂಡಾದಿಂದ 236 ನಿವೇಶನ ಹಂಚಿಕೆಗೆ ಸಾರ್ವಜನಿಕರಿಂದ ಅರ್ಜಿ

## ಪ್ರಾಧಿಕಾರದ ಶೇ. 50ರಷ್ಟು ಪಾಲಿನ ವಿವಿಧ ಅಳತೆಯ ನಿವೇಶನಗಳನ್ನು ವಿವಿಧ ಪ್ರವರ್ಗಗಳ ಅಡಿಯಲ್ಲಿ ಕಡಿಮೆ ದರದಲ್ಲಿ ಹಂಚಿಕೆ

• **ಉದಯವಾಹಿನಿ ಚಾಮರಾಜನಗರ**

ಚಾಮರಾಜನಗರ-ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರವು (ಚೂಡಾ) ನಗರಕ್ಕೆ ಸಮೀಪದ ಚಾಮರಾಜನಗರ-ಟಿ.ನರಸೀಪುರದ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಚಾಮರಾಜನಗರ ಹಾಗೂ ಮಸಗಾಪುರದ ಬಳಿ 14.24 ಎಕರೆ ಭೂಮಿಯಲ್ಲಿ ನಿರ್ಮಾಣ ಮಾಡಲಾಗುತ್ತಿರುವ ವಸತಿ ಬಡಾವಣೆಯಲ್ಲಿ ವಿವಿಧ ಅಳತೆಯ ನಿವೇಶನಗಳನ್ನು ಹಂಚಿಕೆ ಮಾಡಲು ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಿದೆ ಎಂದು ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ (ಮುನ್ನಾ) ಅವರು ತಿಳಿಸಿದರು.

**ನಗರದ ಬೆಳವಣಿಗೆಗೆ ಸಹಕರಿಸಬೇಕು**

ನಗರದ ಚೂಡಾ ಕಚೇರಿ ಸಭಾಂಗಣದಲ್ಲಿಂದು ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು ಪ್ರಾಧಿಕಾರದ ಶೇ. 50ರಷ್ಟು ಪಾಲಿನ ವಿವಿಧ ಅಳತೆಯ ನಿವೇಶನಗಳನ್ನು ವಿವಿಧ ಪ್ರವರ್ಗಗಳ ಅಡಿಯಲ್ಲಿ ಕಡಿಮೆ ದರದಲ್ಲಿ ನೀಡಲಿದ್ದು, ಇಂದಿನಿಂದಲೇ (ಜ.16) ಸಾರ್ವಜನಿಕರು ಅರ್ಜಿ ಸಲ್ಲಿಸಬಹುದು ಎಂದರು. 6.0 ಮೀ x 8.3 ಮೀ ಅಳತೆಯ ನಿವೇಶನಕ್ಕೆ 6,69,810 ರೂ. ಮೌಲ್ಯ ನಿಗದಿ ಮಾಡಿದ್ದು ಶೇ. 10ರಷ್ಟು ಅಂದರೆ 66,980 ರೂ. ಗಳ ಪ್ರಾರಂಭಿಕ ಠೇವಣಿ, ನೊಂದಣಿ ಶುಲ್ಕವಾಗಿ 100 ರೂ. ಗಳನ್ನು ಪಾವತಿಸಬೇಕಿದೆ. 9.0 ಮೀ x 15.0 ಮೀ ಅಳತೆಯ ನಿವೇಶನಕ್ಕೆ 18,15,750 ರೂ. ಮೌಲ್ಯ ನಿಗದಿ ಮಾಡಿದ್ದು ಶೇ. 10ರಷ್ಟು ಅಂದರೆ 1,81,575 ರೂ. ಗಳ ಪ್ರಾರಂಭಿಕ ಠೇವಣಿ, ನೊಂದಣಿ ಶುಲ್ಕವಾಗಿ 250 ರೂ. ಗಳನ್ನು ಪಾವತಿಸಬೇಕಿದೆ.

12.0 ಮೀ x 18.0 ಮೀ ಅಳತೆಯ ನಿವೇಶನಕ್ಕೆ 29,05,200 ರೂ. ಮೌಲ್ಯ ನಿಗದಿ ಮಾಡಿದ್ದು ಶೇ. 10ರಷ್ಟು ಅಂದರೆ 2,90,520 ರೂ. ಗಳ ಪ್ರಾರಂಭಿಕ ಠೇವಣಿ, ನೊಂದಣಿ ಶುಲ್ಕವಾಗಿ 500 ರೂ. ಗಳನ್ನು ಪಾವತಿಸಬೇಕಿದೆ. ಅರ್ಜಿ ಶುಲ್ಕ 500 ರೂ.ಗಳಾಗಿದೆ ಎಂದು ಅವರು ತಿಳಿಸಿದರು.

ಪ್ರಾಧಿಕಾರದಿಂದ ನಿವೇಶನಗಳಿಗೆ ನಿಗದಿಪಡಿಸಿರುವ ದರ ಪ್ರತೀ ಚ.ಮೀ ಗೆ 13,450 ರೂ. ಗಳಾಗಿವೆ (ಚ. ಅಡಿಗೆ 1250 ರೂ.) ಆಗಿದ್ದು, ನಿವೇಶನಾಕಾಂಕ್ಷಿಗಳು



☛ ಉದಯವಾಹಿನಿ ಚಿತ್ರ

ಚಾಮರಾಜನಗರದ ಇಂಡಿಯನ್ ಬ್ಯಾಂಕಿನಲ್ಲಿ ಅರ್ಜಿ ಪಡೆದು ಶೇ. 10ರಷ್ಟು ಶುಲ್ಕ ಮತ್ತು ನೊಂದಣಿ ಶುಲವನ್ನು ಫೆಬ್ರವರಿ 28ರೊಳಗೆ ಪಾವತಿಸಬೇಕಾಗುತ್ತದೆ. ಒಟ್ಟು 236 ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದೆ ಎಂದರು.

ಚೂಡಾ ವ್ಯಾಪ್ತಿಯ ವಿಸ್ತಾರ ಈ ಹಿಂದಿಗಿಂತಲೂ ಹನ್ನೊಂದು ಪಟ್ಟು ಹೆಚ್ಚಾಗಿದೆ. ಹರದನಹಳ್ಳಿ, ಚಂದಕವಾಡಿ, ಕೂಡ್ಲೂರು, ಮಾದಾಪುರ ಮತ್ತು ಭೋಗಾಪುರ, ಬದನಗುಪ್ಪೆಯ ಸ್ವಲ್ಪ ಭಾಗ ವ್ಯಾಪ್ತಿಗೆ ಒಳಪಡುತ್ತಿದೆ. ಚೂಡಾ ಮಾಸ್ಟರ್ ಪ್ಲಾನ್ ಅನುಷ್ಠಾನಕ್ಕೂ ಮುಂದಾಗಿದೆ. ನಗರ ಪ್ರಾಧಿಕಾರ ವ್ಯಾಪ್ತಿಯಲ್ಲಿ 14 ಮಹಡಿಗಳವರೆಗೂ ಕಟ್ಟಡ ಕಟ್ಟಲು ಸಹ ಅವಕಾಶ ನೀಡಲಾಗುತ್ತದೆ ಎಂದು ಚೂಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ (ಮುನ್ನಾ) ಅವರು ತಿಳಿಸಿದರು. ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಪುಟ್ಟಸ್ವಾಮಿ, ಎಸ್. ರಾಜು, ರಾಜೇಂದ್ರ, ಅಂಬಿಕಾ, ಆಯುಕ್ತ ಹೆಚ್.ವಿ. ಸೀಮಾ, ಸಹಾಯಕ ನಿರ್ದೇಶಕ ರಿತೇಶ್, ಎಂಜಿನಿಯರ್ ಐಶ್ವರ್ಯ ಸುದ್ದಿಗೋಷ್ಠಿಯಲ್ಲಿ ಇದ್ದರು.

**ಯೋಜನೆ ಸದ್ಬಳಕೆಗೆ ಮನವಿ**

ಹಂಚಿಕೆಯಲ್ಲಿ ರೋಸ್ಟರ್ ಪದ್ಧತಿ ಪಾಲಿಸಲಾಗುತ್ತಿದ್ದು ಪರಿಶಿಷ್ಟಜಾತಿ, ಪರಿಶಿಷ್ಟವರ್ಗ, ಹಿಂದುಳಿದವರ್ಗ, ವಿಶೇಷಚೇತನರು, ಸೈನಿಕರು, ಇನ್ನಿತರ ವರ್ಗಗಳು, ಸಾಮಾನ್ಯ ವರ್ಗದವರಿಗೆ ನಿವೇಶನಗಳನ್ನು ನೀಡಲಾಗುತ್ತದೆ. ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ವಸತಿ ಬಡಾವಣೆ ನಿರ್ಮಿಸಲಾಗುತ್ತಿದ್ದು, ನಿವೇಶನಗಳನ್ನು 3ರಿಂದ 4 ತಿಂಗಳೊಳಗೆ ನೀಡಲಿದ್ದೇವೆ. ಸಾರ್ವಜನಿಕರು ನಗರಾಭಿವೃದ್ಧಿ ಪ್ರಾಧಿಕಾರದ ಈ ಯೋಜನೆಯನ್ನು ಸದ್ಬಳಕೆ ಮಾಡಿಕೊಂಡು ನಗರದ ಬೆಳವಣಿಗೆಗೆ ಸಹಕರಿಸಬೇಕು ಎಂದು ಚೂಡಾ ಅಧ್ಯಕ್ಷರು ತಿಳಿಸಿದರು.

> **ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಜಿಲ್ಲಾಧಿಕಾರಿಗಳ ಸಹಕಾರ ಮಾರ್ಗದರ್ಶನ ಹಾಗೂ ಉತ್ತೇಜನದಿಂದ ಚೂಡಾ ನಿವೇಶನ ಹಂಚಿಕೆ ಪ್ರಕ್ರಿಯೆಗೆ ಮುಂದಾಗಿದೆ. ಪ್ರಾಧಿಕಾರವು ಚಾಮರಾಜನಗರಕ್ಕೆ ಹೊಂದಿಕೊಂಡಿರುವ ಕೋಡಿಮೋಳೆ ಕೆರೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಚಟುವಟಿಕೆಗಳಿಗಾಗಿ 4.25 ಕೋಟಿ ರೂ. ವೆಚ್ಚದಲ್ಲಿ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಿದೆ. ಪ್ರಾಧಿಕಾರದ ವ್ಯಾಪ್ತಿಯ ಉದ್ಯಾನವನಗಳ ಅಭಿವೃದ್ಧಿಗೂ ಮುಂದಾಗಿದ್ದೇವೆ**
> -ಮಹಮ್ಮದ್ ಅಸ್ಗರ್

## ಆನೆ ದಂತ ಸಾಗಾಣಿಕೆ: ಇಬ್ಬರ ಬಂಧನ

• **ಉದಯವಾಹಿನಿ ಹನೂರು**

ಜಿಲ್ಲೆಯಲ್ಲಿನ ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ 2 ಲಕ್ಷ ರೂ ಮೌಲ್ಯದ 1 ಆನೆ ದಂತವನ್ನು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ರಾಮಾಪುರ ಪೊಲೀಸ್ ಠಾಣೆ ಅಧಿಕಾರಿಗಳು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ತಮಿಳುನಾಡಿನ ಮಲ್ಲಸಮುದ್ರಂ ಗ್ರಾಮದ ನಿವಾಸಿ ಶಕ್ತಿವೇಲ್ ಅಲಿಯಾಸ್ ರಾಸ ಮತ್ತು ಹನೂರು ಪಟ್ಟಣದ ನಿವಾಸಿ ನಾಗೇಂದ್ರ ಬಾಬು ಅಲಿಯಾಸ್ ಬಾಬು ಬಂಧಿತ ಆರೋಪಿಗಳು. ಜಿಲ್ಲೆಯಲ್ಲಿ ಅಕ್ರಮವಾಗಿ ಕಾನೂನು ಬಾಹಿರ ಚಟುವಟಿಕೆಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಪೊಲೀಸ್ ವರಿಷ್ಠಾಧಿಕಾರಿಗಳು ನಿರ್ದೇಶನ ನೀಡಿದ್ದು ಈ ಮೇರೆಗೆ ಕೊಳ್ಳೇಗಾಲ ಉಪ ವಿಭಾಗದ ಪೊಲೀಸ್ ಉಪ ಅಧೀಕ್ಷಕರಾದ ಧರ್ಮೇಂದ್ರರವರ ಮಾರ್ಗದರ್ಶನದಲ್ಲಿ ರಾಮಾಪುರ ಪೊಲೀಸ್ ಠಾಣೆಯ



☛ ಉದಯವಾಹಿನಿ ಚಿತ್ರ

ಪೊಲೀಸ್ ನಿರೀಕ್ಷಕರಾದ .ಪಿ.ಎನ್.ಶೇಷಾದ್ರಿ ರವರು ತಮಗೆ ದೊರೆತ ಮಾಹಿತಿ ಪಡೆದು.

ಅಪರಾಧ ವಿಭಾಗದ ಆರಕ್ಷಕ ಉಪನಿರೀಕ್ಷಕರಾದ ಲೋಕೇಶ್ ಮತ್ತು ಸಿಬ್ಬಂದಿಯವರಾದ ಗಿರೀಶ್, ಲಿಯಾಖತ್ ಅಲಿಖಾನ್, ಮಹೇಂದ್ರ, ಪರಶುರಾಮ್, ಶೆಹನ್‌ಷಾ ಮಕನ್ದಾರ್ ರವರುಗಳೊಡನೆ ದಿನಾಂಕ: 15-01-2025 ರಂದು ಬೆಳಿಗ್ಗೆ 8-30 ಗಂಟೆಯಲ್ಲಿ ಕೌದಳ್ಳಿ ಗ್ರಾಮದ ಹತ್ತಿರ ದಾಳಿ ನಡೆಸಿದ್ದಾರೆ

ಕೌದಳ್ಳಿ ಗ್ರಾಮದ ಕೊಳ್ಳೇಗಾಲ -ಮಲೈ ಮಹದೇಶ್ವರ ಬೆಟ್ಟ ಮುಖ್ಯ ರಸ್ತೆಯಲ್ಲಿ ಬಜಾಜ್ ಪ್ಲಾಟಿನ ಮೋಟಾರ್ಬೈಕ್‌ನಲ್ಲಿ ತಮಿಳುನಾಡಿನ ಕಡೆಯಿಂದ ಹನೂರಿನ ಕಡೆಗೆ ಬರುತ್ತಿದ್ದ ತಮಿಳುನಾಡು ನಾಮಕಲ್ ಜಿಲ್ಲೆ, ತಿರುಚಂಗೋಡ್ ತಾಲ್ಲೂಕಿನ ಮಲ್ಲಸಮುದ್ರಂ ಗ್ರಾಮದ ಶಕ್ತಿವೇಲ್ ರಾಸ (45) ಬಿನ್ ಆರ್ ಪೆರುಮಾಳ್ ಮತ್ತು ಹನೂರು ಪಟ್ಟಣದ ನಾಗೇಂದ್ರ ಬಾಬು ಬಾಬು (63) ಬಿನ್ ಆರ್ ಶಂಕರ್ ನಾರಾಯಣ್ ಶೆಟ್ಟಿ, ಇವರು ಸಾಗಾಣಿಕೆ ಮಾಡುತ್ತಿದ್ದ 987 ಗ್ರಾಂ ತೂಕದ ಒಂದು ಆನೆದಂತ (ಸುಮಾರು 2 ಲಕ್ಷ ರೂ. ಮೌಲ್ಯ) ವನ್ನು ಹಾಗೂ ಆರೋಪಿತರ ಬಾಬು ಎರಡು ಮೊಬೈಲ್‌ಗಳು ಹಾಗೂ ಬಜಾಜ್ ಪ್ಲಾಟಿನ ಮೋಟಾರ್ ಬೈಕ್‌ನ್ನು ವಶಪಡಿಸಿಕೊಂಡು ಆರೋಪಿತರನ್ನು ದಾಸ್ತಗಿರಿ ಮಾಡಿ ವನ್ಯಜೀವಿ ಸಂರಕ್ಷಣಾ ರೀತ್ಯಾ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ.

## 'ಯಂತ್ರಶ್ರೀ' ಯೋಜನೆ ರೈತರಿಗೆ ಅನುಕೂಲ

• **ಉದಯವಾಹಿನಿ, ಮಂಡ್ಯ**

ಯಂತ್ರಶ್ರೀ' ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ಉತ್ತಮ ರೀತಿಯಲ್ಲಿ ಅನುಷ್ಠಾನ ಮಾಡುತ್ತಾ ಬಂದಿದ್ದು, ಇದರಿಂದ ರೈತರಿಗೆ ಅನುಕೂಲವಾಗಿದೆ ಎಂದು ಕೇಂದ್ರ ಕೃಷಿ ಪ್ರಾದೇಶಿಕ ನಿರ್ದೇಶಕ ಮನೋಜ್ ಹೇಳಿದರು.

**ನಾಟಿ ಯಂತ್ರ ಚಾಲಕರ ತರಬೇತಿ**

ತಾಲ್ಲೂಕಿನ ಬಸರಾಳು ಗ್ರಾಮದಲ್ಲಿನ ಮೇಲುಕೋಟೆ ರಸ್ತೆಯ ದಕ್ಷ ಯಂತ್ರ ನಾಟಿ ನರ್ಸರಿ ಕೇಂದ್ರದಲ್ಲಿ ಇತ್ತೀಚೆಗೆ ನಡೆದ ನಾಟಿ ಯಂತ್ರ ಚಾಲಕರ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ದಕ್ಷ ಯಂತ್ರ ನಾಟಿಯ ಬಗ್ಗೆ ಚಾಲಕರಿಗೆ ತರಬೇತಿ ನೀಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಈ ತರಬೇತಿಯಲ್ಲಿ ಸಿಗುವ ಮಾಹಿತಿಯನ್ನು ನೂತನ ಚಾಲಕರು ತಮ್ಮ ವೃತ್ತಿ ಜೀವನಕ್ಕೆ ಅಳವಡಿಸಿಕೊಂಡು ಸಕಾಲದಲ್ಲಿ ರೈತರಿಗೆ ಸೇವೆ ಸಲ್ಲಿಸಬೇಕು ಎಂದು ಮನವಿ ಮಾಡಿದರು. ವಲಯ ಕೃಷಿ ಸಂಶೋಧನಾ ಕೇಂದ್ರದ ಭತ್ತದ ವಿಭಾಗದ ಹಿರಿಯ ವಿಜ್ಞಾನಿ ದೀಪಕ್ ಮಾತನಾಡಿ, ಧರ್ಮಸ್ಥಳ ಸಂಸ್ಥೆಯು ನಮ್ಮ ಜಿಲ್ಲೆಯಲ್ಲಿ ಯಂತ್ರ ಶ್ರೀ ಕಾರ್ಯಕ್ರಮ ಅನುಷ್ಠಾನ ಮಾಡಿದೆ. ಇದರ ಪ್ರಯೋಜನವನ್ನು ರೈತರು ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಮೈಸೂರು ವಲಯದ ಕೃಷಿ ಯಂತ್ರಧಾರೆ ನಿರ್ದೇಶಕ ಚಿದಾನಂದ ಮಾತನಾಡಿದರು. ಕೇಂದ್ರ ಕಛೇರಿಯ ಕೃಷಿ ವಿಭಾಗದ ಯೋಜನಾಧಿಕಾರಿ ಉಮೇಶ್ ಶೆಟ್ಟಿ, ವಿಜ್ಞಾನಿಗಳಾದ ಸನತ್ ಕುಮಾರ್, ದಿನೇಶ್, ಕೃಷಿ ಮೇಲ್ವಿಚಾರಕ ಲೋಕೇಶಪ್ಪ ಇದ್ದರು.

## ಫಲಾನುಭವಿಗಳು ಸದ್ಬಳಕೆ ಮಾಡಿಕೊಳ್ಳಿ: ಮಂಜು

• **ಉದಯವಾಹಿನಿ, ಕೆ.ಆರ್.ಪೇಟೆ.**

ಕೃಷಿ ಚಟುವಟಿಕೆಗೆ ಸಂಬಂಧಿಸಿದ ಮೋಟರ್ ಪಂಪ್ ಹಾಗೂ ಪರಿಕರಗಳನ್ನು ಪಡೆದಿರುವ ಫಲಾನುಭವಿಗಳು ಅವುಗಳನ್ನು ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸಬಲರಾಗಿ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ಶಾಸಕ ಹೆಚ್.ಟಿ ಮಂಜು ಹೇಳಿದರು.

ಅವರು ಪಟ್ಟಣದ ಪ್ರವಾಸಿಮಂದಿರದ ಆವರಣದಲ್ಲಿ ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಆಯ್ಕೆಯಾದ 20 ಅರ್ಹ ಫಲಾನುಭವಿಗಳಿಗೆ ಕೃಷಿ ಪರಿಕರಗಳನ್ನು ವಿತರಿಸಿ ಮಾತನಾಡಿದರು.

ಹಲವಾರು ವರ್ಷಗಳಿಂದ ಈ ಸೌಲಭ್ಯವನ್ನು ಹಿಂದುಳಿದ ವರ್ಗಗಳ ಫಲಾನುಭವಿಗಳಿಗೆ ಗಂಗಾಕಲ್ಯಾಣ ಯೋಜನೆಯಡಿ ವಿತರಣೆ ಮಾಡಲಾಗುತ್ತಿದೆ. ಪ್ರತಿವರ್ಷವೂ ಸಹ ಅರ್ಹ ರೈತ ಫಲಾನುಭವಿಗಳು ಸರ್ಕಾರದ ಈ ಸೌಲಭ್ಯವನ್ನು ಪಡೆಯುತ್ತಿದ್ದಾರೆ.ಈ ಹಿಂದೆ 300 ರಿಂದ 400 ಅಡಿಗಳಿಗೆ ಭೂಮಿಯಲ್ಲಿ ನೀರು ಸಿಗುತ್ತಿತ್ತು. ಆದರೆ ಕೆಲವು ವರ್ಷಗಳಿಂದ ಅಂತರ್ಜಲ ಮಟ್ಟ ಕುಸಿದು 800 ಅಡಿಗಳಷ್ಟು ಕೊರೆದರೂ ನೀರು ಸಿಗುತ್ತಿಲ್ಲ ಎಂದು ವಿಷಾದಿಸಿ, ರೈತರು ಇರುವ ನೀರನ್ನು ವಿನಾಕಾರಣ



☛ ಉದಯವಾಹಿನಿ ಚಿತ್ರ

ಪೋಲು ಮಾಡದೆ ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಬೇಕು, ಜೊತೆಗೆ ಹನಿ ನೀರಾವರಿ ಪದ್ಧತಿ ಅಳವಡಿಸಿಕೊಳ್ಳುವ ಮೂಲಕ ಕೃಷಿ ಚಟುವಟಿಕೆ ಮಾಡುವಂತೆ ಸಲಹೆ ಮಾಡಿದರು. ಫಲಾನುಭವಿಗಳಿಗೆ ಲಕ್ಷಾಂತರ ಬೆಲೆಬಾಳುವ ಕೃಷಿ ಪಂಪ್‌ಸೆಟ್ ಮತ್ತು ಇತರೆ ಸಲಕರಣೆಗಳನ್ನು ನೀಡಲಾಗಿದ್ದು, ರೈತ ಸಮುದಾಯ ಇದರ ಪೂರ್ಣ ಪ್ರಮಾಣದ ಉಪಯೋಗವನ್ನು ಪಡೆದುಕೊಳ್ಳಬೇಕು. ಸರ್ಕಾರ ನೀಡುವ ಸವಲತ್ತು ದುರ್ಬಳಕೆಯಾಗದಂತೆ ಎಚ್ಚರಿಕೆ ವಹಿಸಬೇಕು ಎಂದರು.

ಡಾ ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕಿ ಸುಧಾಮಣಿ, ಇಂಜಿನಿಯರ್ ಮನೋಹರ್, ತಾ.ಸಹಾಯಕ ಅಧಿಕಾರಿ ದರ್ಶನ್ ಪಟೇಲ್, ಗ್ರಾ.ಪಂ ಸದಸ್ಯ ಬಲ್ಲೇನಹಳ್ಳಿ ಯೋಗೇಶ್, ಮುಖಂಡ ಬಂಡಿಹೊಳೆ ಕೃಷ್ಣಮೂರ್ತಿ, ಹಲವರಿದ್ದರು.

## ಅಕ್ರಮ ಅಂಗಡಿ ತೆರವಿಗೆ ಅಧಿಕಾರಿಗಳ ಮೀನಮೇಷ

• **ಉದಯವಾಹಿನಿ, ಕೊಳ್ಳೇಗಾಲ**

ಹೋಲಿ ಕ್ರಾಸ್ ಆಸ್ಪತ್ರೆಯ ಮುಂಭಾಗ ಬಸ್ ನಿಲ್ದಾಣದ ಪುಟ್ ಬಾತ್ ರಸ್ತೆ ಆವರಿಸಿಕೊಂಡಂತೆ ಸಾರ್ವಜನಿಕ ತಂಗುದಾಣ ನಿರ್ಮಿಸಲು ಗುರುತು ಮಾಡಲಾಗಿರುವ ಜಾಗದಲ್ಲಿ ಅಕ್ರಮವಾಗಿ ಅಂಗಡಿಯನ್ನು ನಿರ್ಮಾಣ ಮಾಡಿ ಕೊಂಡಿದ್ದು ತೆರವು ಮಾಡಲು ಯಾವುದೇ ಕ್ರಮ ಕೈಗೊಳ್ಳದೆ ಇರುವುದು ಜನಪ್ರತಿನಿಧಿಗಳು ಅಧಿಕಾರಿಗಳ ಇಚ್ಛಾಶಕ್ತಿ ಕೊರತೆ ಎದ್ದು ಕಾಣುತ್ತಿದೆ.

ತಾಲ್ಲೂಕಿನ ಕಾಮಗೆರೆ ಗ್ರಾಮದ ಹೋಲಿ ಕ್ರಾಸ್ ಆಸ್ಪತ್ರೆಯ ಮುಂಭಾಗ ಸಾರ್ವಜನಿಕ ತಂಗುದಾಣ ಇಲ್ಲದೆ. ದಿನನಿತ್ಯ ಆಸ್ಪತ್ರೆಗೆ ಬಂದು ಹೋಗುವ ರೋಗಿಗಳು. ಶಾಲಾ ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳು, ವಯೋವೃದ್ಧರು ಸಾರ್ವಜನಿಕರು ಬಿರು ಬಿಸಿಲಿನಲ್ಲಿ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ.

ಕೊಳ್ಳೇಗಾಲದ ಕಡೆಗೆ ತೆರಳುವ ಸಾರ್ವಜನಿಕ ಪ್ರಯಾಣಿಕರು ರಸ್ತೆ ಮಧ್ಯದಲ್ಲಿ ನಿಲ್ಲಿಸುವುದರಿಂದ ಅಪಾಘಾತಗಳಿಗೆ ಎಡೆಮಾಡಿಕೊಟ್ಟಂತೆ ಇದ್ದರು ಇಲಾಖೆ ಅಧಿಕಾರಿಗಳು ಕಂಡರೂ ಕಾಣದಂತೆ ಕಣ್ಮುಚ್ಚಿ ಕುಳಿತಿರುವುದು ಆಡಳಿತ ವರ್ಗದ ಕಾರ್ಯ ವೈಖರಿಗೆ ಹಿಡಿದ ಕನ್ನಡಿಯಾಗಿದೆ.

ಕೊಳ್ಳೇಗಾಲದಿಂದ ಹನೂರಿನವರೆಗೆ ಕೈಗೊಂಡಿರುವ ಕೆ- ಶಿಫ್ ರಸ್ತೆ ಅಭಿವೃದ್ಧಿ ಕಾಮಗಾರಿಯು



☛ ಉದಯವಾಹಿನಿ ಚಿತ್ರ

ಬಹುತೇಕ ಮುಗಿಯುವ ಹಂತಕ್ಕೆ ಬಂದಿದ್ದು ಕಾಮಗೆರೆ ಗ್ರಾಮದಲ್ಲಿ ಮುಖ್ಯ ರಸ್ತೆ ಹಾಗೂ ಪುಟ್ ಬಾತ್ ರಸ್ತೆ ಅಭಿವೃದ್ಧಿ ಕಾಮಗಾರಿಯು ಬಹುತೇಕ ಮುಗಿಯುವ ಹಂತಕ್ಕೆ ಬಂದಿದೆ. ಆದರೆ ಹೋಲಿ ಕ್ರಾಸ್ ಆಸ್ಪತ್ರೆಯ ಮುಂಭಾಗ ಸಾರ್ವಜನಿಕ ತಂಗುದಾಣ ನಿರ್ಮಾಣ ಮಾಡುವ ಕಾಮಗಾರಿ ವಿಳಂಬ ಮಾಡುತ್ತಿರುವ ಬಗ್ಗೆ ಕೆ-ಶಿಫ್ ರಸ್ತೆ ಇಲಾಖೆ ಅಧಿಕಾರಿಗಳ ವಿಳಂಬ ನೀತಿಗೆ ಸಾರ್ವಜನಿರು ಆರೋಪ ಮಾಡುತ್ತಿದ್ದಾರೆ.

ದಿನನಿತ್ಯ ಬರುವ ರೋಗಿಗಳು ಸಾರ್ವಜನಿಕರ ಹಿತದೃಷ್ಟಯಿಂದ ಅಂಗಡಿಯನ್ನು ತೆರವು ಮಾಡುವಂತೆ ಹೋಲಿ ಕ್ರಾಸ್ ಆಸ್ಪತ್ರೆ ಆಡಳಿತ ಮಂಡಳಿ ಹಾಗೂ ಸ್ಥಳೀಯ ಯುವಕರು ಪೊಲೀಸ್ ಇಲಾಖೆ, ಕೆ-ಶಿಫ್ ಇಲಾಖೆಗೆ ದೂರು ನೀಡಿ ಸಾರ್ವಜನಿಕ ತಂಗುದಾಣ ನಿರ್ಮಾಣಕ್ಕೆ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಮನವಿಯನ್ನು ಸಲ್ಲಿಸಿದ್ದರು. ಹೋಲಿ ಕ್ರಾಸ್ ಆಸ್ಪತ್ರೆಯ ಗೇಟ್ ಮುಂಭಾಗ ಎಡಗಡೆ ಮತ್ತು ಬಲಗಡೆ ಇರುವ ಅಂಗಡಿಗಳಿಗೆ ತೆರವು ಮಾಡಲು ಕೆ-ಶಿಫ್ ಇಲಾಖೆಯಿಂದ ಹೆಚ್ಚು ಕಡಿಮೆ ಎರಡು ಲಕ್ಷದವರೆಗೆ ಪರಿಹಾರ ನೀಡಲಾಗಿದೆ. ಆದರೂ ಅಂಗಡಿಗಳನ್ನು ತೆರವು ಮಾಡದೆ ಮತ್ತೆ ಅದೇ ಜಾಗಗಳಲ್ಲಿ ಅಂಗಡಿಗಳನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಅಂಗಡಿಯನ್ನು ತೆರವು ಮಾಡಲು ನೋಟಿಸ್ ನೀಡಲಾಗಿದೆ. ಆದರೂ ಅಂಗಡಿಗಳನ್ನು ತೆರವು ಮಾಡಲು ಮೀನಾಮೇಷ ಎಣಿಸುತ್ತಿದ್ದಾರೆ.

**ವಿದ್ಯಾರ್ಥಿಗಳು ಬಿರು ಬಿಸಿಲಿನಲ್ಲಿ ನಿಲ್ಲುವ ಪರಿಸ್ಥಿತಿ**

**ಸಾರ್ವಜನಿಕ ತಂಗುದಾಣ ನಿರ್ಮಾಣಕ್ಕೆ ಗುರುತು ಮಾಡಿರುವ ಜಾಗದಲ್ಲಿ ಅಕ್ರಮವಾಗಿ ಅಂಗಡಿಯನ್ನು ನಿರ್ಮಾಣ ಮಾಡಿ ಕೊಂಡಿದ್ದಾರೆ. ಆಸ್ಪತ್ರೆಗೆ ಬಂದು ಹೋಗುವ ರೋಗಿಗಳು ವಯೋವೃದ್ಧರು, ಶಾಲಾ ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳು ದಿನನಿತ್ಯದ ಕೆಲಸ ಕಾರ್ಯಗಳಿಗೆ ತೆರಳುವ ಸಾರ್ವಜನಿಕರಿಗೆ ತಂಗುದಾಣ ವ್ಯವಸ್ಥೆ ಇಲ್ಲದೆ ಬಿರು ಬಿಸಿಲಿನಲ್ಲಿ ರಸ್ತೆಯಲ್ಲಿ ನಿಲ್ಲಬೇಕಾದ ಪರಿಸ್ಥಿತಿಯಾಗಿದೆ.**

## ಸಿಎಂ ಸಿದ್ದರಾಮಯ್ಯ ತಾಲಿಬಾನಿ ಸರ್ಕಾರ ತರುವುದು ಸ್ಪಷ್ಟ

• **ಉದಯವಾಹಿನಿ, ಮೈಸೂರು**

ಕೆಚ್ಚಲು ಕತ್ತರಿಸಿದ, ದನ ತಿನ್ನುವ ಆ ವ್ಯಕ್ತಿಯನ್ನು ಮಾನಸಿಕ ಅಸ್ವಸ್ಥ ಎಂದು ಹೇಳುತ್ತೀರಲ್ಲ. ಇಂತಹ ಹಲಾಲ್ ಕೋರರಿಗೆ ಬೆಂಬಲ ಮಾಡುವುದನ್ನು ನಿಲ್ಲಿಸಿ ಸಿದ್ದರಾಮಯ್ಯರವರೇ. ಈ ರೀತಿಯ ಓಲೈಕೆ ನಿಮಗೆ ಶೋಭೆ ತರುವುದಿಲ್ಲ. ಆ ಹಸುವಿನ ಜೀವಕ್ಕೆ ಬೆಲೆಯಿಲ್ವಾ? ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಪ್ರಶ್ನಿಸಿದರು.

**ಹಸುವಿನ ಜೀವಕ್ಕೆ ಬೆಲೆಯಿಲ್ವಾ?**

ಮೈಸೂರಿನಲ್ಲಿ ಮಾತನಾಡಿದ ಅವರು, ಸಂಕ್ರಾಂತಿ ಸಂದರ್ಭದಲ್ಲಿ ಹಿಂದೂಗಳು ಎರಡನೇ ತಾಯಿ ಎಂದು ಪೂಜಿಸುವಂತಹ ಗೋಮಾತೆಯ ಕೆಚ್ಚಲನ್ನು ಕೊಯ್ದು ವಿಕೃತಿ ಮೆರೆದಿರುವ ಘಟನೆ ಬೆಂಗಳೂರಿನ ಚಾಮರಾಜಪೇಟೆಯಲ್ಲಿ ನಡೆದಿದೆ. ನಂಜನಗೂಡಿನಲ್ಲಿ ಗೋವು ಕಳ್ಳತನ ಮಾಡಲು ಬಂದಾಗ, ಗೋವು ಬೆದರಿದ್ದಕ್ಕೆ, ಅದರ ಬಾಲವನ್ನು ತುಂಡು ಮಾಡಿ ಹೋಗಿದ್ದಾರೆ. ಇಂತಹ ಕಟುಕರಿಗೆ ತಕ್ಕ ಶಾಸ್ತಿಯಾಗಬೇಕು ಎಂದು ಆಗ್ರಹಿಸಿದರು.

ಸಿದ್ದರಾಮಯ್ಯ ಮೊದಲ ಅವಧಿಯಲ್ಲಿ ಆಗಿದ್ದೆಲ್ಲ ರಾಜ್ಯ ನೋಡಿದೆ. ಸಿದ್ದರಾಮಯ್ಯ ಅವರು ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಏನೆಲ್ಲಾ ಘಟನೆಗಳು ನಡೆದವು ಎಂದು ನೀವೆಲ್ಲ ನೋಡಿದ್ದೀರಿ. ಈಗ ಅದೇ ಪರಿಸ್ಥಿತಿ ಮುಂದುವರೆದಿದೆ. ಕಾಂಗ್ರೆಸ್ ಪಕ್ಷ ಸ್ವಾತಂತ್ರ್ಯ ನಂತರ ಜೋಡೆತ್ತಿನ ಗುರುತಿನ ಚಿಹ್ನೆಯಿಟ್ಟುಕೊಂಡು ಆಡಳಿತ ನಡೆಸಿದರು.

ಈಗಿನ ಸೋನಿಯಾ ಗಾಂಧಿ ನೇತೃತ್ವದಲ್ಲಿ ಆ ಚಿಹ್ನೆಯನ್ನು ತೆಗೆದು, ಮುಸಲ್ಮಾನರ ಓಲೈಕೆ ಮಾಡಲು ಪ್ರಾರಂಭ ಮಾಡಿದ್ದಾರೆ ಎಂದರು.

ಸಿದ್ದರಾಮಯ್ಯ ಏನಾದರೂ ಎಐಸಿಸಿ ಅಧ್ಯಕ್ಷರಾದರೆ ಕಾಂಗ್ರೆಸ್ ಪಕ್ಷವನ್ನು ಇಬ್ಭಾಗ ಮಾಡುವುದರಲ್ಲಿ ಸಂದೇಹವೇ ಇಲ್ಲ.



ಮುಂದೆ ಈ ರಾಜ್ಯದಲ್ಲಿ ನಿಮ್ಮ ತಾಲಿಬಾನಿ ಸರ್ಕಾರ ತರುವುದು ಸ್ಪಷ್ಟವಾಗಿದೆ. ಸ್ಟೇಷನ್ ಬೇಲ್ ಕೊಟ್ಟಿದ್ದಾರಲ್ಲ, ಆ ಹಸುವಿನ ಜೀವಕ್ಕೆ ಬೆಲೆಯಿಲ್ವಾ. ಹಿಂದೂಗಳಿಗಾಗಲಿ, ಅಧಿಕಾರಿಗಳಿಗಾಗಲಿ ಈ ಸರ್ಕಾರದಲ್ಲಿ ರಕ್ಷಣೆ ಇಲ್ಲ ಎಂಬುದು ಎಲ್ಲರಿಗೂ ಅರ್ಥವಾಗುತ್ತಿದೆ.

ತಕ್ಷಣ ಈ ಸರ್ಕಾರ ತೊಲಗಬೇಕು ಎಂದು ವಾಗ್ದಾಳಿ ನಡೆಸಿದರು.

ಸಿದ್ದರಾಮಯ್ಯ ಅವರ ಮೊದಲ ಅವಧಿಯಲ್ಲಿ ಎಷ್ಟು ಅಧಿಕಾರಿಗಳು ಸತ್ತರು ಎಂಬುದು ಎಲ್ಲರಿಗೂ ತಿಳಿದಿದೆ. ಒಬ್ಬ ಜಿಲ್ಲಾಧಿಕಾರಿಗೆ ವೇದಿಕೆ ಮೇಲೆ ಅವಮಾನ ಮಾಡುತ್ತೀರಲ್ಲ, ಯಾವುದೇ ಜಿಲ್ಲೆಗೆ ಹೋದಾಗ ನಿಮ್ಮನ್ನು ಸ್ವಾಗತ ಮಾಡಲು ಜಿಲ್ಲಾಧಿ ಕಾರಿಗಳು ಬರಲ್ವ ಅಂಥವರನ್ನು ಸರ್ವಜನಿಕವಾಗಿ ಅವಮಾನ ಮಾಡುತ್ತೀರಲ್ಲ. ಇದು ನಿಮಗೆ ಶೋಭೆ ತೋರುವುದಿಲ್ಲ ಎಂದು ಹೇಳಿದರು. ಕಿಶೋರ್ ಚಂದ್ರ ಸೇರಿದಂತೆ ಲಿಂಗಾಯತ ಮತ್ತು ಒಕ್ಕಲಿಗ ಅಧಿಕಾರಿಗಳಿಗೆ ಅಧಿಕಾರ ತಪ್ಪಿಸಿದ್ದಿರಿ ಎಂದರು.

> **ಗಾಂಧಿ ಅನುಯಾಯಿಗಳೇ ನೀವೇನು ಮಾಡುತ್ತಿದ್ದೀರಿ, ಗಾಂಧಿ ಅನುಯಾಯಿಗಳು ಎಂದು ಹೇಳಿಕೊಂಡು ಓಡಾಡುತ್ತೀರಿ, ಗಾಂಧೀಜಿ ಗೋವನ್ನು ಪೂಜ್ಯ ಭಾವನೆಯಲ್ಲಿ ನೋಡುತ್ತಿದ್ದರು. ಆದರೆ, ನೀವು ಏನು ಮಾಡುತ್ತಿದ್ದೀರಿ. ಆ ಹಸುವಿಗೆ ಆದ ಪರಿಸ್ಥಿತಿ ಕೆಚ್ಚಲನ್ನು ಕೊಯ್ದವನಿಗೂ ಆಗಬೇಕು**
> -ಪ್ರತಾಪ್ ಸಿಂಹ, ಮಾಜಿ ಸಂಸದ

# ಮೈಕ್ರೋ ಫೈನಾನ್ಸ್‌ಗಳ ಕಿರುಕುಳ ತಪ್ಪಿಸಲು ಒತ್ತಾಯ

## ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ, ಗೃಹ ಇಲಾಖೆ ವೈಫಲ್ಯವೇ ಕಾರಣ: ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ

• **ಉದಯವಾಹಿನಿ, ಮೈಸೂರು**

ರಾಜ್ಯದಲ್ಲಿ ಸಾವಿರಾರು ಕುಟುಂಬಗಳು ಮೈಕ್ರೋ ಫೈನಾನ್ಸ್‌ಗಳ ಕಿರುಕುಳಕ್ಕೆ ಬೇಸತ್ತು ಮನೆ ತೊರೆದಿರುವ, ಆತ್ಮಹತ್ಯೆ ಮಾಡಿಕೊಂಡಿರುವ ಘಟನೆಗಳು ವರದಿ ಆಗುತ್ತಿವೆ. ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ, ಗೃಹ ಇಲಾಖೆ ವೈಫಲ್ಯವೇ ಕಾರಣ ಎಂದು ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಆರೋಪಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಜನರ ಬದುಕಿನ ಜೊತೆ ಮೈಕ್ರೋ ಫೈನಾನ್ಸ್ ಗಳು ಚೆಲ್ಲಾಟವಾಡುತ್ತಿವೆ. ಮೈಕ್ರೋ ಫೈನಾನ್ಸ್ ಗಳ ಕಿರುಕುಳಕ್ಕೆ ಜನ ಊರುಗಳನ್ನ ತೊರೆಯುತ್ತಿದ್ದಾರೆ. ಮೀಟರ್ ಬಡ್ಡಿಗಿನ್ನ ಅಧಿಕ ಬಡ್ಡಿಯನ್ನು ಮೈಕ್ರೋ ಫೈನಾನ್ಸ್ ಗಳು ಪಡೆಯುತ್ತಿವೆ.

ರಾಜ್ಯ ಸರ್ಕಾರ ಹಾಗೂ ಪೊಲೀಸರು ಕೂಡ ಮೈಕ್ರೋ ಫೈನಾನ್ಸ್ ಗಳಿಗೆ ಕಡಿವಾಣ ಹಾಕುತ್ತಿಲ್ಲ. ಆರ್ ಬಿಐನ ಎಲ್ಲಾ ನಿಯಮಗಳನ್ನ ಗಾಳಿಗೆ ತೂರಲಾಗಿದೆ. ಇದನ್ನ ವಿಶೇಷ ಪ್ರಕರಣವಾಗಿ ಜಿಲ್ಲಾಡಳಿತ, ರಾಜ್ಯ ಸರ್ಕಾರ, ಗೃಹ ಇಲಾಖೆ ಪರಿಗಣಿಸಬೇಕು. ಮೈಕ್ರೋ ಫೈನಾನ್ಸ್‌ಗಳ ಕಿರುಕುಳದಿಂದ ಜನರನ್ನ ರಕ್ಷಣೆ ಮಾಡಬೇಕು ಎಂದು ಆಗ್ರಹಿಸಿದರು.

ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಂದ ಸಾಲಗಳಿಗೆ

**ಮೂಗುದಾರ ಹಾಕುವ ಕೆಲಸ**

**ರಾಜ್ಯದ ಗೃಹ ಇಲಾಖೆ ಹಣಕಾಸು ಇಲಾಖೆ ಹಾಗೂ ಕಾನೂನು ಇಲಾಖೆ ಜಂಟಿಯಾಗಿ ಒಂದು ಸಮಿತಿಯನ್ನು ರಚಿಸಿ ಮೈಕ್ರೋ ಫೈನಾನ್ಸ್‌ಗಳ ಹಾವಳಿಗೆ ಮೂಗುದಾರ ಹಾಕುವ ಕೆಲಸ ಜರೂರಾಗಿ ಕೈಗೊಳ್ಳಬೇಕಿದೆ. ಆ ಮೂಲಕ ಅಮಾಯಕ ಕುಟುಂಬಗಳಿಗೆ ನೆಮ್ಮದಿ ನೀಡಬೇಕಿದೆ. ಈ ನಿಟ್ಟಿನಲ್ಲಿ ಆರ್‌ಬಿಐ ಅಧಿಕಾರಿಗಳೊಂದಿಗೆ ಸರ್ಕಾರ ತುರ್ತು ಸಭೆ ನಡೆಸಿ ಕಾನೂನಾತ್ಮಕ ತೀರ್ಮಾನ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತಿದ್ದೇವೆ ಎಂದು ಹೇಳಿದರು.**



☛ ಉದಯವಾಹಿನಿ ಚಿತ್ರ

ವಾರ್ಷಿಕ ಶೇ.21.50 ರಿಂದ ಶೇ.25ರಷ್ಟು ಬಡ್ಡಿ ವಿಧಿಸಲಾಗುತ್ತಿದ್ದು, ಪ್ರೊಸೆಸಿಂಗ್ ಫೀ ಶೇ.1 ಹಾಗೂ ಇನ್ಸೂರೆನ್ಸ್ ಫೀ 1ರಷ್ಟು ವಿಧಿಸಲಾಗುತ್ತಿದೆ. ಆರ್ಬಿಐ ಹಾಗೂ ಮಾನವ ಹಕ್ಕುಗಳ ನಿಯಮಗಳನ್ನು ಉಲ್ಲಂಘಿಸಿ ಸಾಲಗಾರರನ್ನು ಬೆದರಿಸಿ ಅವರು ಆತ್ಮಹತ್ಯೆಗೆ ಶರಣಾಗುವಂತೆ ಅಥವಾ ಮನೆ ಬಿಟ್ಟು ಹೋಗುವಂತೆ ಪರಿಸ್ಥಿತಿ ನಿರ್ಮಾಣ ಮಾಡುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಅನೇಕ ಕುಟುಂಬಗಳ ಮನೆ ಜಪ್ತಿ ಕಾರ್ಯಗಳೂ ಸಹ ಆರಂಭವಾಗಿದೆ. ಮೈಕ್ರೋ ಫೈನಾನ್ಸ್ ಹೆಸರಿನಲ್ಲಿ ಸಾಲದ ಕೂಪಕ್ಕೆ ತಳ್ಳಲ್ಪಡುತ್ತಿರುವ ಜನರ ಬದುಕನ್ನು ಹೀರುವ ಮಾಫಿಯಾಗಳು ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದ್ದು, ಸಾಲ ಕಟ್ಟಲು ವಿಫಲರಾದ ಸ್ಥಿತಿ ಹೇಳುವವರು, ಕೇಳುವವರು ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

> **ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಂದ ಸಾಲ ಪಡೆದುಕೊಳ್ಳುತ್ತಿರುವವರು ಸಂಕಷ್ಟದಲ್ಲಿರುವ ಬಡವರು, ಕೂಲಿ, ಕಾರ್ಮಿಕರು, ಸಣ್ಣ ವ್ಯಾಪಾರಿಗಳು, ಸಣ್ಣ ಹಿಡುವಳಿದಾರ ರೈತ ಕುಟುಂಬಗಳನ್ನಷ್ಟೇ ಕೇಂದ್ರೀಕರಿಸಿ ಕಿರು ಸಾಲ ನೀಡುವ ಈ ಸಂಸ್ಥೆಗಳು ಕೆಲವೊಮ್ಮೆ ಆರ್ ಬಿಐ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ವಿಪರೀತ ಬಡ್ಡಿ, ಕಂತುಗಳನ್ನು ಸಕಾಲದಲ್ಲಿ ಕಟ್ಟಲಾಗದಿದ್ದರೆ ಅದಕ್ಕೆ ಇತರ ದಂಡರೂಪದ ಶುಲ್ಕಗಳನ್ನು ವಿಧಿಸಿ ಜನರನ್ನು ಸಾಲದ ಕೂಪದಲ್ಲಿ ನರಳಿಸುತ್ತಿದ್ದಾರೆ ಎಂದು ಹೇಳಿದರು**
> -ರಘು ಕೌಟಿಲ್ಯ, ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ

**ಬದುಕಿನ ಜೊತೆ ಚೆಲ್ಲಾಟ**

ಪೊಲೀಸ್ ಅಥವಾ ನ್ಯಾಯಾಲಯದ ಮೂಲಕ ರಕ್ಷಣೆ ಪಡೆಯುವ ಜಾಗೃತಿ ಹಾಗೂ ಶಕ್ತಿಯಿಲ್ಲದ ಈ ಜನರು ಮಾನಕ್ಕಾಗಿ ಹೆದರಿ ಊರು ಬಿಡುತ್ತಿದ್ದಾರೆ. ಮೀಟರ್ ಬಡ್ಡಿ ದಂಧೆಯವರ ಕಿರುಕುಳವನ್ನೂ ಮೀರಿಸಿದ ಯಾತನೆ ಅನುಭವಿಸುತ್ತಿರುವ ಮುಗ್ಧ ಜನರ ನೆರವಿಗೆ ಸರಕಾರ ಮಧ್ಯ ಪ್ರವೇಶಿಸಬೇಕಿದೆ. ಮುಗ್ಧ ಜನರ ರಕ್ಷಣೆಗೆ ನಿಲ್ಲಬೇಕಿದೆ ಎಂದು ಒತ್ತಾಯಿಸಿದರು.

ಇಷ್ಟೆಲ್ಲ ಪ್ರಕರಣಗಳು ವರದಿಯಾಗುತ್ತಿದ್ದರೂ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರ ತನಗೆ ಸಂಬಂಧವೇ ಇಲ್ಲದಂತೆ ನಡೆದುಕೊಳ್ಳುತ್ತಿರುವುದು ಸರ್ಕಾರ ಮೈಕ್ರೋ ಫೈನಾನ್ಸ್‌ಗಳ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡಿರುವ ಬಗ್ಗೆ ಅನುಮಾನ ಮೂಡಿಸುತ್ತಿದೆ ಎಂದು ಕಿಡಿಕಾರಿದರು.

## ಮಿನಿ ನ್ಯೂಸ್

### ಆಸ್ಪತ್ರೆಗೆ ಲೋಕಾಯುಕ್ತ ಪೊಲೀಸರ ಭೇಟಿ, ಪರಿಶೀಲನೆ

• **ಉದಯವಾಹಿನಿ, ಮಳವಳ್ಳಿ**

ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಲೋಕಾಯುಕ್ತ ಅಧಿಕಾರಿಗಳು ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸಾರ್ವಜನಿಕರ ದೂರಿನ ಹಿನ್ನಲೆಯಲ್ಲಿ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಸುರೇಶ್ ಬಾಬು, ಡಿವೈಎಸ್‌ಪಿ ಟಿ.ಸುನೀಲ್ ಕುಮಾರ್, ಇನ್ಸ್‌ಪೆಕ್ಟರ್ ಜಯರತ್ನ ತಂಡ ಶುಕ್ರವಾರ ದಿಢೀರ್ ಭೇಟಿ ನೀಡಿ ಪರಿಶೀದರು. ಆಸ್ಪತ್ರೆಗೆ ಹೆರಿಗೆ ವಾರ್ಡ್, ಡಯಾಲೀಸ್ ಸೆಂಟರ್, ಅಪರೇಷನ್ ಕೊಠಡಿ, ಔಷಧ ಉಗ್ರಾಣ ಸೇರಿದಂತೆ ವಿವಿಧೆಡೆಗೆ ತೆರಳಿ ಪರಿಶೀಲನೆ ನಡೆಸಿದರು. ಇದೇ ವೇಳೆ ಸಾರ್ವಜನಿಕರು ಹಾಗೂ ರೋಗಿಗಳಿಂದ ಆಸ್ಪತ್ರೆಗೆ ಸೌಲಭ್ಯಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಸಾರ್ವಜನಿಕ ದೂರಿನ ಬಗ್ಗೆ ವೈದ್ಯರಿಗೆ ಕೆಲ ಸಲಹೆ ಸೂಚನೆ ನೀಡಿದರು. ಸಾರ್ವಜನಿಕ ಆಸ್ಪತ್ರೆಯ ಅಧಿಕಾರಿ ಶ್ರೀಲತಾ ಅವರಿಂದ ಆಸ್ಪತ್ರೆಯಲ್ಲಿ ಸಿಗುವ ಸವಲತ್ತು ಬಗ್ಗೆ ಮಾಹಿತಿ ಪಡೆದರು.

### ಡೈರಿ ಸಿಬ್ಬಂದಿಯಿಂದಲೇ ಹಾಲಿಗೆ ನೀರು ಬೆರಸಿ ವಂಚನೆ

• **ಉದಯವಾಹಿನಿ ಚಿಕ್ಕಬಳ್ಳಾಪುರ**

ರೈತರು ಹಗಲು ರಾತ್ರಿ ಕಷ್ಟಪಟ್ಟು ಹೈನೋದ್ಯಮದ ಮೂಲಕ ಹಾಲಿನ ಡೈರಿಗಳಿಗೆ ಪರಿಶುದ್ಧ ಹಾಲು ಸರಬರಾಜು ಮಾಡ್ತಿದ್ದಾರೆ. ಆದರಿಲ್ಲಿ ಸ್ವತಃ ಡೈರಿ ಸಿಬ್ಬಂದಿಯೇ ಶುದ್ಧ ಹಾಲಿಗೆ ನೀರು ಬೆರಸಿ ವಂಚನೆ ಮಾಡಿರುವ ಪ್ರಕರಣ ಚಿಕ್ಕಬಳ್ಳಾಪುರದಲ್ಲಿ ಬೆಳಕಿಗೆ ಬಂದಿದೆ.

ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಮಾಡಿಕೆರೆ ಹಾಲಿನ ಡೈರಿ ಬಿಎಂಸಿ ಕೇಂದ್ರದಲ್ಲಿ ಈ ಘಟನೆ ಬೆಳಕಿಗೆ ಬಂದಿದೆ. ಅಂದಹಾಗೆ ಮಾಡಿಕೆರೆ ಹಾಲಿನ ಡೈರಿಯಲ್ಲಿ ಕೆಲಸ ಮಾಡುವ ಸಿಬ್ಬಂದಿ ಹಾಲಿನ ಡಂಪ್ ಟ್ಯಾಂಕ್‌ಗೆ ನೀರು ಕಲಬೆರಕೆ ಮಾಡಿ, ಚಿಕ್ಕಬಳ್ಳಾಪುರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತದ ಮೆಗಾ ಡೈರಿಗೆ ಸರಬರಾಜು ಮಾಡಿ ಈಗ ಸಿಕ್ಕಿ ಬಿದ್ದಿದ್ದಾರೆ. ಸ್ವತಃ ಡೈರಿ ಸಿಬ್ಬಂದಿ ಕಳ್ಳಾಟವನ್ನ ಮತ್ತೊರ್ವ ಸಿಬ್ಬಂದಿ ತಮ್ಮ ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿ, ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಹಾಲಿನ ಡೈರಿ ಬಿಎಂಸಿ ಕೇಂದ್ರದಲ್ಲಿ ನಡೆದಿದೆ ಎನ್ನಲಾದ ಹಾಲಿನ ಮಿಶ್ರಣ ಅಕ್ರಮ ವಿಚಾರ ಬಯಲಾಗ್ತಿದ್ದಂತೆ ಸ್ವತಃ ಚಿಮುಲ್ ಎಂ.ಡಿ ಶ್ರೀನಿವಾಸಗೌಡ ಅಲರ್ಟ್ ಆಗಿದ್ದಾರೆ. ಡೈರಿಯ ಸಹಾಯಕ ಚೇತನ್‌ನನ್ನ ಕೆಲಸದಿಂದ ವಜಾ ಮಾಡಿದ್ದಾರೆ. ಹಾಲಿನ ಟ್ಯಾಂಕರ್‌ನ ಚಾಲಕನ ಮಾರ್ಗ ಬದಲಾವಣೆ ಮಾಡಿ, ಹಾಲಿಗೆ ನೀರು ಮಿಶ್ರಣ ಕಳ್ಳಾಟ ತನಿಖೆಗೆ ಸಮಿತಿಯೊಂದನ್ನ ರಚಿಸಿದ್ದು ಅಕ್ರಮ ತಡೆಯುವ ಭರವಸೆ ನೀಡಿದ್ದಾರೆ.

### ಬಾಣಂತಿಯರಿಗೆ ಕೊಡಗು ಸೇಫ್

• **ಉದಯವಾಹಿನಿ ಮಡಿಕೇರಿ**

ಬಳ್ಳಾರಿ, ರಾಯಚೂರು ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ಇತ್ತೀಚೆಗೆ ಸಂಭವಿಸಿದ ಬಾಣಂತಿಯರ ಸರಣಿ ಸಾವಿನ ಪ್ರಕರಣ ಇಡೀ ರಾಜ್ಯದಲ್ಲಿ ಬಾಣಂತಿಯರ ಆತಂಕಕ್ಕೆ ಕಾರಣವಾಗಿತ್ತು. ಈ ನಡುವೆ 2024ರ ವರ್ಷದಲ್ಲಿ ಬಾಣಂತಿಯರ ಸಾವಿನ ಸಂಖ್ಯೆ ಶೂನ್ಯವಾಗಿದ್ದು, ಇಡೀ ರಾಜ್ಯಕ್ಕೆ ಕೊಡಗು ಮಾದರಿಯಾಗಿದೆ.

ಕರ್ನಾಟಕದ ಕಾಶ್ಮೀರ ಎಂದೇ ಕರೆಯುವ ಕೊಡಗು ಜಿಲ್ಲೆಯಲ್ಲಿ 2024ರ ಏಪ್ರಿಲ್‌ನಿಂದ ಅಕ್ಟೋಬರ್ ವರೆಗೆ 3,462 ಮಹಿಳೆಯರು ಹೆರಿಗೆ ಮಾಡಿಸಿಕೊಂಡಿದ್ದು, ಯಾವುದೇ ಸಾವಿನ ಪ್ರಕರಣ ದಾಖಲಾಗಿಲ್ಲ. ಅಲ್ಲದೇ ಇತರೆ ಜಿಲ್ಲೆಗಳಿಗೆ ಹೋಲಿಸುವಾಗ ಕೊಡಗು ಜಿಲ್ಲೆಯಲ್ಲಿ ಶಿಶುಗಳ ಮರಣ ಪ್ರಮಾಣ ಸಹ ಅತಿ ಕಡಿಮೆ ಇದೆ. ಈ ಮೂಲಕ ಬಾಣಂತಿಯರ ರಕ್ಷಣೆ ಹಾಗೂ ಶಿಶುಮರಣ ತಡೆಯುವಲ್ಲಿ ಕೊಡಗು ಜಿಲ್ಲೆ ಇಡೀ ರಾಜ್ಯಕ್ಕೆ ಮಾದರಿಯಾಗಿದೆ. ಕೊಡಗಿನಲ್ಲಿ ಯಾವುದೇ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳಿಲ್ಲ. ಹೀಗಿದ್ದರೂ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಕೊಡಗು ವೈದ್ಯಕೀಯ ಕಾಲೇಜಿನಲ್ಲಿ ಬಾಣಂತಿಯರಿಗೆ ಹೆರಿಗೆ ಸಂದರ್ಭದಲ್ಲಿ ಉತ್ತಮ ಚಿಕಿತ್ಸೆ ನೀಡಲಾಗುತ್ತದೆ. ಅಲ್ಲದೇ ಪೌಷ್ಟಿಕ ಆಹಾರ ನೀಡಿ ಆರೈಕೆ ಮಾಡುವಲ್ಲಿ ಆರೋಗ್ಯ ಕಾರ್ಯಕರ್ತರೂ ಸಫಲರಾಗಿದ್ದು, ಜಿಲ್ಲೆಯಲ್ಲಿ ಬಾಣಂತಿಯರ ಸಾವಿನ ಸಂಖ್ಯೆ ಶೂನ್ಯಕ್ಕೆ ತಲುಪಲು ಕಾರಣವಾಗಿದೆ.

### ಆನ್‌ಲೈನ್ ಗೇಮ್‌ನಲ್ಲಿ 20 ಸಾವಿರ ರೂ. ನಷ್ಟ : ಬುದ್ಧಿ ಹೇಳಿದ್ದಕ್ಕೆ ಯುವಕ ಆತ್ಮಹತ್ಯೆ

• **ಉದಯವಾಹಿನಿ ತುಮಕೂರು**

ಆನ್‌ಲೈನ್ ಗೇಮ್ ಆಡಬೇಡ ಎಂದು ಬುದ್ಧಿ ಹೇಳಿದ್ದಕ್ಕೆ ಯುವಕನೊಬ್ಬ ನೇಣಿಗೆ ಶರಣಾದ ಘಟನೆ ತುಮಕೂರು ನಗರದ ಹೊರಪೇಟೆಯಲ್ಲಿ ನಡೆದಿದೆ. ನೇಣಿಗೆ ಶರಣಾದ ಯುವಕನನ್ನು ಟಿ.ಎಸ್.ಭರತ್ (24) ಎಂದು ಗುರುತಿಸಲಾಗಿದೆ. ಯುವಕ ಇತ್ತೀಚೆಗೆ ಆನ್‌ಲೈನ್ ಗೇಮ್‌ನಲ್ಲಿ 20 ಸಾವಿರ ರೂ. ಹಣ ಕಳೆದುಕೊಂಡಿದ್ದ. ಈ ವಿಚಾರ ಆತನ ತಾಯಿಗೆ ಗೊತ್ತಾಗಿ ಇನ್ನೂ ಆನ್‌ಲೈನ್ ಗೇಮ್ ಆಡಬೇಡ ಎಂದು ಬುದ್ಧಿ ಹೇಳಿದ್ದರು. ಇದೇ ವಿಚಾರಕ್ಕೆ ಯುವಕ ತನ್ನ ಮನೆ ಬಳಿಯ ಹಳೆ ಹೆಂಚಿನ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

### ಸಂಸದ ಡಾ.ಮಂಜುನಾಥ್ ನೇತೃತ್ವದಲ್ಲಿ ದಿಶಾ ಸಭೆ: ಅಧಿಕಾರಿಗಳಿಗೆ ಶಿಸ್ತಿನ ಪಾಠ

• **ಉದಯವಾಹಿನಿ ರಾಮನಗರ**

ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಡಾ.ಮಂಜುನಾಥ್ ನೇತೃತ್ವದಲ್ಲಿ ದಿಶಾ ಕಮಿಟಿ ಸಭೆ ನಡೆಸಲಾಯಿತು. ರಾಮನಗರದ ಜಿ.ಪಂ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಲಾಯಿತು.

ಜಿಲ್ಲಾಮಟ್ಟದ ಅಧಿಕಾರಿಗಳಿಂದ ಅಭಿವೃದ್ಧಿ ಕುರಿತು ಡಾ.ಮಂಜುನಾಥ್ ಮಾಹಿತಿ ಸಂಗ್ರಹ ಮಾಡಿದರು. ಆಸ್ಪತ್ರೆಗಳಲ್ಲಿ ವೈದ್ಯರ ಸಮಸ್ಯೆ, ನಗರ ವ್ಯಾಪ್ತಿಯ ಕಸದ ಸಮಸ್ಯೆ, ರಸ್ತೆ ಅಪಘಾತ ತಡೆಗಟ್ಟುವ ನಿಟ್ಟಿನಲ್ಲಿ ಸುರಕ್ಷತಾ ಅಭಿಯಾನ, ಸ್ಮಶಾನ ಅಭಿವೃದ್ಧಿ, ತೋಟಗಾರಿಕೆ ಬೆಳೆಗಳಿಗೆ ಉತ್ತೇಜನ ನೀಡುವ ಬಗ್ಗೆ ಚರ್ಚೆ ನಡೆಸಿದರು.



☛ ಉದಯವಾಹಿನಿ ಚಿತ್ರ

ಅಂತರಾಳದಿಂದ..
EDITORIAL

# ಜಾತಿಗಣತಿ: ಗಣಪತಿ ಮದುವೆ ಎಂದು?

ಭಾರತದಲ್ಲೇ ಮೊತ್ತ ಮೊದಲು ಜಾತಿಗಣತಿ ಆರಂಭಿಸಿದ್ದು ಸಿದ್ದರಾಮಯ್ಯ ನೇತೃತ್ವದ ಕರ್ನಾಟಕ ಸರಕಾರ. ಆದರೆ ವರದಿಯನ್ನು ಮೊದಲು ಬಹಿರಂಗಗೊಳಿಸಿದ್ದು ಬಿಹಾರ ರಾಜ್ಯದಲ್ಲಿ ಜಾತಿ ಗಣತಿ ವರದಿ ಸಿದ್ದಗೊಂಡು ಹಲವು ವರ್ಷಗಳು ಉರುಳಿವೆಯಾದರೂ, ಅದನ್ನು ಸಂಪುಟ ಸಭೆಯಲ್ಲಿ ಬಹಿರಂಗ ಗೊಳಿಸುವುದು ಸರಕಾರಕ್ಕೆ ಅಸಾಧ್ಯವಾಗಿದೆ. ಈ ಹಿಂದೆ ಬಿಜೆಪಿ ಸರಕಾರ ಉದ್ದೇಶ ಪೂರ್ವಕವಾಗಿ ಜಾತಿ ಗಣತಿಯನ್ನು ಜಾರಿಗೊಳಿಸಲು ಮುಂದಾಗಲಿಲ್ಲ. ಯಾಕೆಂದರೆ ಆರಂಭದಿಂದಲೂ ಬಿಜೆಪಿ ಜಾತಿಗಣತಿಯನ್ನು ವಿರೋಧಿಸುತ್ತಾ ಬಂದಿತ್ತು. ಆದರೆ ಈ ಗಣತಿಗೆ ಚಾಲನೆ ನೀಡಿದ ಕಾಂಗ್ರೆಸ್ ಪಕ್ಷವೂ ವರದಿ ಮಂಡನೆಗೆ ಹಿಂದೇಟು ಹಾಕುತ್ತಿರುವುದು ವಿಪರ್ಯಾಸವಾಗಿದೆ. ಜೆಡಿಎಸ್ ಜೊತೆಗೆ ಮೈತ್ರಿ ಮಾಡಿಕೊಂಡು ಸರಕಾರ ರಚನೆ ಮಾಡಿದ ಸಂದರ್ಭದಲ್ಲಿ ಕಾಂಗ್ರೆಸ್‌ಗೆ ವರದಿ ಮಂಡಿಸಲು ಕುಮಾರಸ್ವಾಮಿ ಅಡ್ಡಿಯಾಗಿದ್ದರು ಎಂದು ಭಾವಿಸೋಣ. ಆದರೆ ಇದೀಗ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ರಾಜ್ಯದಲ್ಲಿ ಅಸ್ತಿತ್ವದಲ್ಲಿದೆ ದಲಿತರು, ಹಿಂದುಳಿದವರ್ಗ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿಯನ್ನೇ ಕೇಂದ್ರವಾಗಿಟ್ಟುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಆಡಳಿತ ನಡೆಸುತ್ತಿದ್ದಾರೆ. ಜಾತಿ ಗಣತಿ ವರದಿಯನ್ನು ಮಂಡಿಸಿ, ಅದರಲ್ಲಿರುವ ವಿವರಗಳನ್ನು ಬಹಿರಂಗಗೊಳಿಸಲು ಇದಕ್ಕಿಂತ ಒಳ್ಳೆಯ ಸಮಯ ಇನ್ನೊಂದಿಲ್ಲ. ಆದರೂ, ಸರಕಾರ ವರದಿಯನ್ನು ಬಹಿರಂಗ ಪಡಿಸಲು ಹಿಂಜರಿಯುತ್ತಿದೆ. ಈ ಹಿಂದೆ ಭರವಸೆ ನೀಡಿದಂತೆ, ಗುರುವಾರ ನಡೆದ ಸಂಪುಟ ಸಭೆಯಲ್ಲಿ ವರದಿ ಮಂಡನೆಯಾಗಿ ಚರ್ಚೆಗೆ ಬರಬೇಕಾಗಿತ್ತು ವರದಿ ಚರ್ಚೆಯಾಗಲಿ ಎಂದು ಗೃಹ ಸಚಿವ ಪರಮೇಶ್ವರ್ ಕೂಡ ಮಾಧ್ಯಮಗಳ ಮುಂದೆ ಹೇಳಿಕೆಯನ್ನು ನೀಡಿದ್ದರು. ವರದಿ ಜಾರಿಗೊಳ್ಳುತ್ತದೆ ಎನ್ನುವ ಭರವಸೆಯನ್ನು ಸಿದ್ದರಾಮಯ್ಯ ಅವರು ಹಲವು ಬಾರಿ ಮಾಧ್ಯಮಗಳಿಗೆ ಸ್ಪಷ್ಟಪಡಿಸಿದ್ದಾರೆ. ಇಷ್ಟಾದರೂ, ಕೊನೆಯ ಕ್ಷಣದಲ್ಲಿ ಜಾತಿ ಗಣತಿ ವರದಿ ಮಂಡನೆಯನ್ನು ಸರಕಾರ ಮುಂದಕ್ಕೆ ಹಾಕಿದೆ.ಸಿದ್ದರಾಮಯ್ಯ ನೇತೃತ್ವದ ಸರಕಾರ ಜಾತಿ ಗಣತಿಯನ್ನು ತನ್ನ ಸಾಧನೆಯಾಗಿ ರಾಜ್ಯದ ಮುಂದೆ ಬಿಂಬಿಸಬೇಕಾಗಿತ್ತು. ಇಂದು ಇಡೀ ದೇಶ ಜಾತಿ ಗಣತಿಯ ಬಗ್ಗೆ ಚರ್ಚಿಸುತ್ತಿದೆ. ಆರಂಭದಲ್ಲಿ ಜಾತಿಗಣತಿಯ ವಿರುದ್ಧ ಹೇಳಿಕೆ ನೀಡುತ್ತಿದ್ದ ಬಿಜೆಪಿ ಕೂಡ ಜಾತಿಗಣತಿಯ ಪರ ಮಾತನಾಡುವಷ್ಟು ಸುಧಾರಿಸಿದೆ. ಬಿಹಾರದಲ್ಲಿ ಜಾತಿ ಗಣತಿ ವರದಿ ಮಂಡನೆಯಾದ ಬಳಿಕ ಉಳಿದ: ರಾಜ್ಯಗಳು ಒಂದೊಂದಾಗಿ ಜಾತಿಗಣತಿಯ ಬಗ್ಗೆ ಆಸಕ್ತಿಯನ್ನು ತೋರಿಸುತ್ತಿವೆ.ಕಾಂಗ್ರೆಸ್‌ಸರಕಾರಕ್ಕೆ ಜಾತಿ ಗಣತಿ ವರದಿ ಮಂಡನೆಗೆ ವಿರೋಧ ಪಕ್ಷಕ್ಕಿಂತ ಸ್ವಪಕ್ಷೀಯರೇ ಅಡ್ಡಿಯಾಗಿದ್ದಾರೆ. ಈಗಾಗಲೇ ಪಕ್ಷದಲ್ಲಿ ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ಕೇಂದ್ರವಾಗಿಟ್ಟುಕೊಂಡು ಭಿನ್ನಧ್ವನಿಗಳು ಎದ್ದಿವೆ. ಉಪಮುಖ್ಯಮಂತ್ರಿ ಸ್ಥಾನ ಮತ್ತು ಕೆಪಿಸಿಸಿ ಅಧ್ಯಕ್ಷ ಸ್ಥಾನಗಳೆರಡನ್ನು ಒಕ್ಕಲಿಗ ಸಮುದಾಯಕ್ಕೆ ಬಿಟ್ಟುಕೊಟ್ಟಿರುವುದು ಎಷ್ಟು ಸರಿ ಎನ್ನುವ ಪ್ರಶ್ನೆಯನ್ನು ದಲಿತ ಮತ್ತು ಹಿಂದುಳಿದ ವರ್ಗಗಳ ನಾಯಕರು ಕೇಳುತ್ತಿದ್ದಾರೆ. ಹಾಗೆ ಕೇಳಿದವರಿಗೆಕಾಂಗ್ರೆಸ್‌ವರಿಷ್ಠರು 'ತ್ಯಾಗ, ಬಲಿದಾನದ ಸಲಹೆಯನ್ನು ನೀಡಿ' ಬಾಯಿ ಮುಚ್ಚಿಸುತ್ತಿದ್ದಾರೆ. ಒಂದೋ ಉಪಮುಖ್ಯಮಂತ್ರಿ ಸ್ಥಾನವನ್ನು ನೀಡಿ ಅಥವಾ ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ನಮಗೆ ಬಿಟ್ಟುಕೊಡಿ ಎಂದು ದಲಿತ ಸಮುದಾಯದ ಕಾಂಗ್ರೆಸ್ ನಾಯಕರು ವರಿಷ್ಠರಿಗೆ ಒತ್ತಡ ಹಾಕುತ್ತಿದ್ದಾರೆ. ಆದರೆ ಅವೆರಡನ್ನೂ ಬಿಟ್ಟುಕೊಡಲು ಡಿ.ಕೆ.ಶಿವಕುಮಾರ್ ಒಪ್ಪುತ್ತಿಲ್ಲ. ಬಲವಂತವಾಗಿ ಅವರನ್ನು ಇಳಿಸುವಂತಹ ಧೈರ್ಯ ಕಾಂಗ್ರೆಸ್ ವರಿಷ್ಠರಿಗೂ ಇದ್ದಂತಿಲ್ಲ. ಯಾಕೆಂದರೆ, ಒಕ್ಕಲಿಗ ಸಮುದಾಯವನ್ನು ಡಿಕೆಶಿ ಕಾಂಗ್ರೆಸ್‌ನೊಳಗೆ ಪ್ರತಿನಿಧಿಸುತ್ತಿದ್ದಾರೆ. ಅವರೇನಾದರೂ ಮುಖ್ಯಮಂತ್ರಿ ಸ್ಥಾನದ ಬೇಡಿಕೆಯಿಟ್ಟರೆ ಕಾಂಗ್ರೆಸ್‌ನ ಸ್ಥಿತಿ ಇನ್ನಷ್ಟು ಬಿಗಡಾಯಿಸುತ್ತದೆ. ಜಾತಿ ಗಣತಿಯ ವಿರುದ್ಧ ಈಗಾಗಲೇ ಒಕ್ಕಲಿಗರು ಮತ್ತು ಲಿಂಗಾಯತರನ್ನು ಎತ್ತಿಕಟ್ಟುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಲಿಂಗಾಯತ ಮತ್ತು ಒಕ್ಕಲಿಗ ಸಂಘಟನೆಗಳು ಪತ್ರಿಕಾಗೋಷ್ಠಿಯನ್ನು ಕರೆದು ಜಾತಿ ಗಣತಿಯ ವಿರುದ್ಧ ಹೇಳಿಕೆಯನ್ನು ನೀಡಿವೆ. ಇಂತಹ ಹೊತ್ತಿನಲ್ಲಿ ವರದಿ ಮಂಡನೆ ಮಾಡಿದರೆ ಪಕ್ಷದೊಳಗೆ ಬಿರುಕು ಇನ್ನಷ್ಟು ಹೆಚ್ಚಬಹುದು ಎನ್ನುವ ಭೀತಿ ಕಾಂಗ್ರೆಸ್ ನಾಯಕರನ್ನು ಕಾಡುವಂತಿದೆ.ರಾಹುಲ್ ಗಾಂಧಿಯವರು ಇಡೀ ದೇಶದಲ್ಲಿ ಜಾತಿ ಗಣತಿ ನಡೆಸಿ, ದುರ್ಬಲ ಜಾತಿಗಳನ್ನು ಮೇಲೆತ್ತುವ ಕನಸು ಕಾಣುತ್ತಿರುವ ಹೊತ್ತಿನಲ್ಲಿ ಅದನ್ನು ಸಾಕಾರಗೊಳಿಸುವ ಭಾಗವಾಗಿ ಮೊತ್ತ ಮೊದಲು ರಾಜ್ಯಕಾಂಗ್ರೆಸ್‌ತಾನು ನಡೆಸಿದ ಜಾತಿ ಗಣತಿ ವರದಿಯ ಬಗ್ಗೆಗಿರುವ ಕೀಳರಿಮೆಯನ್ನು ಬಿಟ್ಟು ಅದನ್ನು ಸಾಧನೆಯಾಗಿ ಬಿಂಬಿಸುವುದಕ್ಕೆ ಮುಂದಾಗಬೇಕು. ಅದಕ್ಕಾಗಿ ಕಾಂಗ್ರೆಸ್‌ನೊಳಗಿರುವ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯದ ನಾಯಕರಿಗೆ ಆ ಗಣತಿಯ ಅಗತ್ಯವನ್ನು ಮಹತ್ವವನ್ನು ಮನವರಿಕೆ ಮಾಡಿಕೊಡಬೇಕು. ಬಿಜೆಪಿ ತೋಡಿದ ಖೆಡ್ಡದಲ್ಲಿ ಬೀಳದಂತೆ ಅವರನ್ನು ತಡೆಯಬೇಕು. ಈ ನಿಟ್ಟಿನಲ್ಲಿ ಅದಕ್ಕಾಗಿ ವಿಶೇಷ ತರಗತಿಗಳನ್ನು ಕಾಂಗ್ರೆಸ್ ನಾಯಕರಿಗಾಗಿಯೇ ತೆಗೆದುಕೊಳ್ಳುವ ಅಗತ್ಯವಿದೆ ಎಂದು ಕಾಣುತ್ತದೆ. ಆ ತರಗತಿಯ ನೇತೃತ್ವವನ್ನು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಕೆಶಿಯವರೇ ವಹಿಸಿಕೊಳ್ಳಬೇಕಾಗಿದೆ. ಜಾತಿಗಣತಿ ವರದಿ ಬಿಡುಗಡೆಗೊಳ್ಳುವ ಮೊದಲೇ ಅದರ ಬಗ್ಗೆ ವ್ಯಕ್ತವಾಗುತ್ತಿರುವ ಆಕ್ಷೇಪಗಳಿಗೆ ಯಾವ ಬೆಲೆಯೂ ಇಲ್ಲ. ವಿರೋಧ ವ್ಯಕ್ತಪಡಿಸುವವರು ಜಾತಿ ಗಣತಿ ವರದಿ ಸರಿಯಿಲ್ಲ ಎನ್ನುವ ಕಾರಣಕ್ಕೆ ವಿರೋಧಿಸುತ್ತಿದ್ದಾರೆಯೇ ಅಥವಾ ಜಾತಿಗಣತಿ ವರದಿಯ ಅಗತ್ಯವೇ ಇಲ್ಲ ಎಂದು ಹೇಳುತ್ತಿದ್ದಾರೆಯೇ ಎನ್ನುವುದನ್ನು ಸ್ಪಷ್ಟಪಡಿಸಬೇಕು.

**ಜಾತಿ ಗಣತಿಯ ಬಗ್ಗೆ ದುರ್ಬಲ ಜಾತಿಗಳು ಆಸಕ್ತಿ ತೋರಿಸುತ್ತಿರುವುದರಿಂದಾಗಿ ಅದನ್ನು ಸಂಪೂರ್ಣವಾಗಿ ನಿರಾಕರಿಸುವಂತಹ ಸ್ಥಿತಿಯಲ್ಲಿ ಬಿಜೆಪಿ ಇಲ್ಲ. ಆರ್‌ಎಸ್‌ಎಸ್ ಕೂಡ ಜಾತಿ ಗಣತಿಯ ಬಗ್ಗೆ ಮೃದು ಮಾತುಗಳನ್ನು ಆಡಿವೆ. ಒಳಗಿಂದೊಳಗೆ ಜಾತಿಗಣತಿಯ ಬಗ್ಗೆ ಮಸಲತ್ತು ಮಾಡುತ್ತಿದೆಯಾದರೂ, ಬಹಿರಂಗವಾಗಿ ಅದರ ವಿರುದ್ಧ ಮಾತನಾಡುವ ಧೈರ್ಯ ಆರ್‌ಎಸ್‌ಎಸ್‌ಗೆ ಇಲ್ಲವಾಗಿದೆ. ಇಂತಹ ಸಂದರ್ಭದಲ್ಲಿ ಇಡೀ ದೇಶಕ್ಕೆ ಮಾದರಿಯಾಗುವಂತೆ ಕರ್ನಾಟಕ ಜಾತಿ ಗಣತಿಯನ್ನು ಹಲವು ವರ್ಷಗಳ ಹಿಂದೆಯೇ ಪೂರ್ತಿಗೊಳಿಸಿದೆ. ಇದಕ್ಕೆ ಚಾಲನೆಯನ್ನು ನೀಡಿದ್ದು ಕಾಂಗ್ರೆಸ್ ಸರಕಾರವಾಗಿರುವುದರಿಂದ, ಅದನ್ನು ತನ್ನ ಸಾಧನೆಯಾಗಿ ಹೆಮ್ಮೆಯಿಂದ ಮಂಡನೆ ಮಾಡಬೇಕಾಗಿರುವುದು ಕೂಡಕಾಂಗ್ರೆಸ್ ಸರಕಾರವಾಗಿದೆ ವಿಪರ್ಯಾಸವೆಂದರೆ, ತಾನೇ ಚಾಲನೆ ನೀಡಿದ ಕಾರ್ಯಕ್ಕೆ ಇದೀಗ ತಾನೇ ಕೀಳರಿಮೆ ಪಟ್ಟುಕೊಳ್ಳುತ್ತಿದೆ ಕಾಂಗ್ರೆಸ್‌ಸರಕಾರ ವರದಿಯನ್ನು ಅದಾವುದೋ ಅಪಾಯಕಾರಿ ಸ್ಫೋಟಕವೆಂಬಂತೆ, ಅದರ ಮಂಡನೆಯನ್ನು ಮುಂದೆ ಹಾಕುತ್ತಲೇ ಬರುತ್ತಿದೆ.**




• ಹಿಂದಿನ ಸಂಚಿಕೆಯಿಂದ **76 ನೆಯ ಅಧ್ಯಾಯ**

ಆ ಸಮಯದಲ್ಲಿ ಮಹಾಪರಾಕ್ರಮವುಳ್ಳ ಈಶ್ವರನ ಕೈಯಲ್ಲಿದ್ದ ಧನುಸ್ಸು ಸಿಡಿದು ಬಿತ್ತು. ಆಗ ಪರಮೇಶ್ವರನು ಅತ್ಯಂತ ಕೋಪಯುಕ್ತನಾಗಲು ನಾರಾಯಣನು ತನ್ನ ಹುಂಕಾರದಿಂದ ಆತನ ಕೋಪವನ್ನು ನಿಲ್ಲಿಸಿದನು. ಈ ಪ್ರಕಾರದಲ್ಲಿ ನಾರಾಯಣನಿಗೂ ಪರಮೇಶ್ವರನಿಗೂ ಅತಿಭಯಂಕರವಾದ ಯುದ್ಧವಾಗುತ್ತಿರಲು ದೇವತೆಗಳೂ ಋಷಿಗಳೂ ಸಿದ್ಧ ಚಾರಣರೂ ಕೂಡಿಕೊಂಡು ಅವರಿಬ್ಬರನ್ನೂ ಕುರಿತು ' ನಿಮ್ಮಿಬ್ಬರ ಯುದ್ಧದಿಂದ ಸಮಸ್ತ ಲೋಕಗಳು ಕಂಗೆಡುತ್ತಿವೆ. ಈ ಯುದ್ಧವನ್ನು ಸಾಕುಮಾಡಬೇಕು' ಎಂದು ಪ್ರಾರ್ಥಿಸಿದರು. ಆ ಮಾತನ್ನು ಕೇಳಿ ನಾರಾಯಣನೂ ಪರಮೇಶ್ವರನೂ ಯುದ್ಧವನ್ನು ನಿಲ್ಲಿಸಿದರು. ಆಮೇಲೆ ಇಂದ್ರಾದಿ ದೇವತೆಗಳು ಪರಮೇಶ್ವರನ ಬಿಲ್ಲು ಸಿಡಿದದ್ದನ್ನು ಕಂಡು ನಾರಾಯಣನೇ ಅಧಿಕನೆಂದು ತಿಳಿದು ನಾರಾಯಣವನ್ನೂ ಪರಮೇಶ್ವರನನ್ನೂ ಪೂಜಿಸಿ ಅಭಿನಂದಿಸಿ ಅವರಿಂದ ಬೀಳ್ಕೊಂಡು ಬ್ರಹ್ಮದೇವನನ್ನು ಕೂಡಿಕೊಂಡು ತಮ್ಮ ತಮ್ಮ ಲೋಕಗಳಿಗೆ ಹೋದರು. ದೇವತೆಗಳಲ್ಲಿ ಶ್ರೇಷ್ಠನಾದ ಪರಮೇಶ್ವರನು ತನ್ನ ಧನುಸ್ಸನ್ನು ವಿದೇಹದೇಶದ ರಾಯರ ವಂಶದಲ್ಲಿ ಜನಿಸಿದ ದೇವರಾತನೆಂಬ ರಾಜಷಿಗೆ ಶರಸಹಿತವಾಗಿ ಕೊಟ್ಟನು. ದೇವರಾತನು ಪರಮೇಶ್ವರನು ಕೊಟ್ಟ ಬಿಲ್ಲನ್ನು ಶಿರಸಾವಹಿಸಿ ಮಹಾಪ್ರಸಾದವೆಂದು ತೆಗೆದುಕೊಂಡು ಪೂಜೆಮಾಡಿಕೊಂಡಿದ್ದನು. ಆ ಬಿಲ್ಲನ್ನು ನೀನು ಮುರಿದೆ. ಅದು ಹಾಗಿರಲಿ. ಈ ವೈಷ್ಣವಧನುಸ್ಸು ನನ್ನ ಕೈಗೆ ಬಂದ ವೃತ್ತಾಂತವನ್ನು ಹೇಳುತ್ತೇನೆ ಕೇಳು ಪೂರ್ವದಲ್ಲಿ ನಾರಾಯಣನು ನಮ್ಮ ವಂಶದಲ್ಲಿ ಜನಿಸಿದ ಋಚೀಕನೆಂಬ ಮುನೀಶ್ವರನಿಗೆ ಇದನ್ನು ಅಸ್ತ್ರೋಪಸಂಹಾರಪೂರ್ವಕವಾಗಿ ಕೊಟ್ಟನು. ಋಚೀಕ ಮುನೀಶ್ವರನು ತನ್ನ ಮಗನಾದ ಪ್ರತಿಕರ್ಮನಿಗೆ ಕೊಟ್ಟನು. ಪ್ರತಿಕರ್ಮನು ತನ್ನ ಮಗನಾದ ಜಮದಗ್ನಿ ಮುನೀಶ್ವರನಿಗೆ ಕೊಟ್ಟನು. ನನ್ನ ತಂದೆಯಾದ ಜಮದಗ್ನಿ ಮುನೀಶ್ವರನು ಶಸ್ತ್ರಸಂನ್ಯಾಸ ದನ್ನು ಮಾಡಿ ತವಸ್ಸು ಮಾಡುತ್ತಿದ್ದನು. ಆಗ ಕಾರ್ತವೀರ್ಯನು ಆತನ ವಶದಲ್ಲಿ ಒಂದು ಕಾಮಧೇನುವು ಇದ್ದುದನ್ನು ಕೇಳಿ ಆತನ ಸಮೀಪಕ್ಕೆ ಬಂದು ಆ ಕಾಮಧೇನುವನ್ನು ಕೇಳಿದನು. ಆ ಮುನೀಶ್ವರನು ಅದನ್ನು ಕೊಡದಿರಲು ಹೀನಬುದ್ಧಿಯಿಂದ ಆತನನ್ನು ಕೊಂದು ಆ ಧನವನ್ನು ಅವಹರಿಸಿಕೊಂಡು ಹೋದನು, ಆಮೇಲೆ ನನ್ನ ತಾಯಿಯಾದ ರೇಣುಕಾದೇವಿಯು ಪತಿವಿಯೋಗ ದಿಂದುಂಟಾದ ದುಃಖದಿಂದ ನನ್ನ ಇದಿರಾಗಿ ಎದೆಯನ್ನು ಬಡಿದುಕೊಂಡು ಬರುತ್ತಿದ್ದಳು. ನಾನು ಆಕೆಯ ಉರಸ್ತಾಡನಗಳನ್ನು ಇಪ್ಪತ್ತೊಂದುಸಾರಿ ಎಣಿಸಿ ನಿಲ್ಲು ಇಪ್ಪತ್ತೊಂದುಸಾರಿ ಕ್ಷತ್ರಿಯವಂಶ ವನ್ನು ಸಂಹಾರಮಾಡುತ್ತೇನೆ ಎಂದು ಪ್ರತಿಜ್ಞೆಯನ್ನು ಮಾಡಿ ನನ್ನ ತಾಯಿಯನ್ನು ಸಂತವಿಟ್ಟು ಅತಿಕೋಪದಿಂದ ಈ ಬಿಲ್ಲನ್ನು ತೆಗೆದುಕೊಂಡು ಕ್ಷತ್ರಿಯರೆಲ್ಲರನ್ನೂ ಇಪ್ಪತ್ತೊಂಮಸಾರಿ ಸಂಹರಿಸಿದೆನು. ಹೀಗೆ ಸಮಸ್ತ ಭೂಮಂಡಲವನ್ನೂ ಕಶ್ಯಪನಿಗೆ ಕೊಟ್ಟು ಸಮಸ್ತ ದೇವ ಋಷಿಗಳಿಂದಲೂ ಸೇವಿಸಲ್ಪಟ್ಟ ಮಹೇಂದ್ರಪರ್ವತದಲ್ಲಿ ಆಶ್ರಮವನ್ನು ಮಾಡಿಕೊಂಡು ತಪಸ್ಸನ್ನು ಮಾಡುತ್ತಿದ್ದೆನು.

**ಮುಂದುವರಿಯುವುದು...**

# ತೋಟದಲ್ಲಿ ಲಾಭದಾಯಕ ಕೃಷಿ



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಪುಷ್ಟೀಕರಿಸಿದ ಕಾಂಪೋಸ್ಟ್ ಅನ್ನು ಹೆಚ್ಚು ಆದ್ಯತೆಯಾಗಿ ಫಾಸ್ಫೇಟ್ ಸಮೃದ್ಧ ಜೈವಿಕ ಕಾಂಪೋಸ್ಟ್ ಬಳಸಿ.

ಮಣ್ಣಿನ ಮೇಲಿನ ಜೀವ ರಾಶಿಯ ಶೇಷದೊಂದಿಗೆ ಮಲ್ಚಿಂಗ್ ಮಣ್ಣಿನಲ್ಲಿರುವ ಎಲ್ಲಾ ಜೀವ ರೂಪಗಳಿಗೆ ರಕ್ಷಣೆ ನೀಡುತ್ತದೆ. ಪ್ರಯೋಜನಕಾರಿ ಸೂಕ್ಷ್ಮ ಜೀವಿಗಳ ಆಗಾಗ್ಗೆ ಬಳಕೆಯು ಮಣ್ಣಿನ ಪೋಷಕಾಂಶಗಳ ಉತ್ತಮ ಬಳಕೆ, ಸಾರಜನಕ ಸ್ಥಿರೀಕರಣ, ಫಾಸ್ಫೇಟ್ ಕರಗುವಿಕೆ ಮತ್ತು ದ್ಯುತಿಸಂಶ್ಲೇಷಣೆ ಚಟುವಟಿಕೆಯಲ್ಲಿ ಸಹಾಯ ಮಾಡುತ್ತದೆ. ಸಸ್ಯ ಅಥವಾ ಪ್ರಾಣಿ ಮೂಲದ ಮತ್ತು ಸುಲಭವಾಗಿ ಕೊಳೆಯುವ ತ್ಯಾಜ್ಯ ವಸ್ತುಗಳನ್ನು ತಿನ್ನುವ ಎರೆಹುಳುಗಳ ಸಹಾಯದಿಂದ ತಯಾರಿಸಿದ ವರ್ಮಿಕಾಂಪೋಸ್ಟ್ ಅನ್ನು ತಯಾರಿಸಿ ಬಳಸಿ. ವರ್ಮಿವಾಶ್ ತಯಾರಿಸಿ ಮತ್ತು ಬಳಸಿ. ಇದು ಸಸ್ಯಗಳ ಬೆಳವಣಿಗೆಯನ್ನು ಉತ್ತೇಜಿಸುತ್ತದೆ

ಸಾವಯವವಾಗಿ ತಯಾರಿಸಿದ ಕೃಷಿ ಒಳಹರಿವಿನಷ್ಟು ಬಳಸಿ - ಮಣ್ಣಿನಲ್ಲಿರುವ ಸೂಕ್ಷ್ಮ ಜೀವಿಗಳಿಗೆ ಆಹಾರಕ್ಕಾಗಿ ಬಳಸಲಾಗುತ್ತದೆ. ಸೂಕ್ಷ್ಮ ಜೀವಿಗಳಿಂದ ಸಮೃದ್ಧವಾಗಿರುವ ಮಣ್ಣು ಬೆಳೆ ಪೋಷಕಾಂಶದ ಅಗತ್ಯವನ್ನು ನೋಡಿಕೊಳ್ಳುತ್ತದೆ. ಏಕಬೆಳೆ ಪದ್ಧತಿಯನ್ನು ಅಭ್ಯಾಸ ಮಾಡುವ ಬದಲು ಏಕದಳ ಬೆಳೆಗಳು ಮತ್ತು ದ್ವಿದಳ ಧಾನ್ಯಗಳ ಬೆಳೆಗಳು ಮತ್ತು ಇತರ ಬೆಳೆಗಳನ್ನು ಸರದಿಯಲ್ಲಿ ಬೆಳೆಯಿರಿ. ರೈಜೋಬಿಯಂ, ಅಜೋಟೋಬ್ಯಾಕ್ಟರ್, ಅಜೋಸ್ಪಿರಿಲಮ್, ಫಾಸ್ಫೇಟ್ ಕರಗಿಸುವ ಬ್ಯಾಕ್ಟೀರಿಯಾ, ಪೊಟ್ಯಾಶ್ ಮೊಬಿಲೈಸಿಂಗ್ ಬ್ಯಾಕ್ಟೀರಿಯಾ, ಸ್ಯೂಡೋ ಮೊನಾಸ್ ಬಳಸಿ - ಮಣ್ಣಿನಲ್ಲಿ ಜೈವಿಕ ಪೋಷಕಾಂಶಗಳ ಕ್ರೋಢೀಕರಣಕ್ಕೆ ಪರಿಣಾಮಕಾರಿ ಸಾಧನಗಳಾಗಿವೆ. ಜೀವಾಮೃತ್ - 200ಲೀಟರ್ ನೀರಿನಲ್ಲಿ ಹಸುವಿನ ಸಗಣಿ 10 ಕೆಜಿ, ಗೋಮೂತ್ರ 10 ಲೀಟರ್, ಬೆಲ್ಲ 2 ಕೆಜಿ, ಯಾವುದೇ ಬೇಳೆಕಾಳು ಹಿಟ್ಟು 2 ಕೆಜಿ ಮತ್ತು ಅರಣ್ಯ ಮಣ್ಣು 1 ಕೆಜಿ ಮಿಶ್ರಣ ಮಾಡಿ. 2 ದಿನಗಳವರೆಗೆ ಹುದುಗಿಸಿ.



ದಿನಕ್ಕೆ ಎರಡು ಬಾರಿ ದ್ರಾವಣವನ್ನು ಬೆರೆಸಿ. ನೀರಾವರಿ ನೀರಿನಿಂದ ಒಂದು ಎಕರೆಗೆ ಬಳಸಿ. ಅಥವಾ ಎಲೆಗಳ ಸ್ಪ್ರೇ 10% ದ್ರಾವಣವಾಗಿ ಬಳಸಿ ನೈಸರ್ಗಿಕ ಬೆಳವಣಿಗೆಯ ಮತ್ತು ಸಸ್ಯ ಸಂರಕ್ಷಣಾ ಸಾಮಗ್ರಿಗಳನ್ನು ತಯಾರಿಸಿ ಮತ್ತು ಬಳಸಿ. ಬೇವಿನ ಉತ್ಪನ್ನಗಳನ್ನು ಬೇವಿನ ಬೀಜದ ಸಾರ, ಬೇವಿನ ಕಾಳು ಸಾರ, ಬೇವಿನ ಎಣ್ಣೆ ಮತ್ತು ಬೇವಿನ ಕೇಕ್ ಅನ್ನು ಬೇಸಾಯ ಮಟ್ಟದಲ್ಲಿ ಅಗತ್ಯವಿದ್ದಾಗ ಬಳಸಿ. ಮಲ್ಚಿಂಗ್ಗಾಗಿ ಹೊಂಗೆ ಎಲೆಗಳಂತಹ ಹೊಂಗೆ ಮರದ ಉತ್ಪನ್ನಗಳನ್ನು ಬಳಸಿ ಮತ್ತು ಹೊಲದ ಮಟ್ಟದಲ್ಲಿ ಅಗತ್ಯವಿದ್ದಾಗ ಹೊಂಗೆ ಕೇಕ್ ಬಳಸಿ.

ಜಮೀನಿನ ಗಡಿಯಲ್ಲಿ ಗ್ಲಿರಿಸಿಡಿಯಾ ಮತ್ತು ನೇಪಿಯರ್ ಹುಲ್ಲು ನೆಡುವುದು. ಈ ಎಲೆಗಳನ್ನು ಪ್ರತಿ 3 ತಿಂಗಳಿಗೊಮ್ಮೆ ಕತ್ತರಿಸಿ ಮೇಲ್ಮೈ ಮಣ್ಣಿಗೆ ಸೇರಿಸಬಹುದು. ನೇಪಿಯರ್ ಹುಲ್ಲನ್ನು ಹಸಿರು ಮೇವಾಗಿ ಬಳಸಬಹುದು. ಮಣ್ಣಿನಲ್ಲಿ ಸಾಕಷ್ಟು ತೇವಾಂಶ ಮಟ್ಟವನ್ನು ಖಚಿತಪಡಿಸಿಕೊಳ್ಳಿ, ವಿಶೇಷವಾಗಿ ಕೇಂದ್ರೀಕೃತ ರಸಗೊಬ್ಬರಗಳನ್ನು ಅನ್ವಯಿಸುವ ಮೊದಲು. ಬ್ರಹ್ಮಾಸ್ತ್ರ, ನೀಮಾಸ್ತ್ರ, ಅಗ್ನಿ ಅಸ್ತ್ರ, ಪಶು ಪತಾಸ್ತ್ರ ಮುಂತಾದ ನಿಮ್ಮ ಸಿದ್ಧಪಡಿಸಿದ ನೈಸರ್ಗಿಕ ಸಿದ್ಧತೆಗಳನ್ನು ಬಳಸಿ. ಅವು ನಿಮ್ಮ ಬೆಳೆಯನ್ನು ರಕ್ಷಿಸುತ್ತವೆ.

ಟ್ರೈಕೋಡರ್ಮಾ ವೈರಿಡೆ, ಟ್ರೈಕೋಡರ್ಮಾ ಹಾರ್ಜಿಯಾನಮ್, ಸ್ಯೂಡೋಮೊನಾಸ್ ಫ್ಲೋರೆಸೆನ್ಸ್ ಮತ್ತು ಬ್ಯಾಸಿಲಸ್ ಸಬ್ಟಿಲಿಸ್ ಅನ್ನು ಮಣ್ಣಿನ ರೋಗಕಾರಕ ಕ್ರಿಮಿನಾಶಕ ಮತ್ತು ಚಿಕಿತ್ಸೆಗಾಗಿ ಬಳಸಬಹುದು. ಹಿತ್ತಲಿನ ಕಿಚನ್ ಗಾರ್ಡನ್ ಮೂಲಕ ನಿಮ್ಮ ಸ್ವಂತ ಆಹಾರವನ್ನು ಬೆಳೆಸಿಕೊಳ್ಳಿ ಮತ್ತು ಸ್ವ-ಕುಟುಂಬದ ಆಹಾರವನ್ನು ಸಮರ್ಥಿಸಿಕೊಳ್ಳಿ ವಾರ್ಷಿಕ ಮಣ್ಣು ಪರೀಕ್ಷೆಯನ್ನು ಕೈಗೊಳ್ಳಿ ಮತ್ತು ಮಣ್ಣಿನ ಪರೀಕ್ಷೆಯ ಫಲಿತಾಂಶಗಳನ್ನು ಪಡೆದ ನಂತರ ಅದಕ್ಕೆ ಅನುಗುಣವಾಗಿ ರಸಗೊಬ್ಬರಗಳನ್ನು ಬಳಸಿ. ನಿಯಮಿತ ಮತ್ತು ಉಪಯುಕ್ತ ಕೃಷಿ ಮಾಹಿತಿಗಾಗಿ ಫೇಸ್‌ಬುಕ್‌ನಲ್ಲಿ ಮತ್ತು ಸಾಮಾಜಿಕ ಮಾಧ್ಯಮದಲ್ಲಿ ಓನಿಕ ಪ್ರಾಜೆಕ್ಟ್ ಮತ್ತು ಕೃಷಿಕೈಪಿಡಿಯನ್ನು ಅನುಸರಿಸಿ

**ಯಶಸ್ವಿ ಕೃಷಿಗೆ ಗ್ಯಾರಂಟಿ ಅಲ್ಲ**

ಕೃಷಿ ಲಾಭವನ್ನು ಹೆಚ್ಚಿಸಲು ಮಿಶ್ರ ಬೇಸಾಯ, ಸಮಗ್ರ ಕೃಷಿ ಮತ್ತು ಬಹು ಹಂತದ ಬೆಳೆ ಪದ್ಧತಿಗಳನ್ನು ಅಭ್ಯಾಸ ಮಾಡಿ ಫಾರ್ಮ್‌ನಲ್ಲಿ ಜೇನು ಪೆಟ್ಟಿಗೆಯನ್ನು ಖರೀದಿಸಿ ಮತ್ತು ಸ್ಥಾಪಿಸಿ ಅದು ಹೆಚ್ಚುವರಿ ಆದಾಯದ ಮೂಲವನ್ನು ತರಬಹುದು ಮತ್ತು ಕೃಷಿ ಉತ್ಪಾದಕತೆಯನ್ನು ಸುಧಾರಿಸಬಹುದು. ನಿಮ್ಮ ಜಮೀನಿನಲ್ಲಿ ಸರಿಯಾದ ರೀತಿಯ ಮಣ್ಣು ಮತ್ತು ನೀರಿನ ಸಂರಕ್ಷಣೆ ಕ್ರಮಗಳನ್ನು ಅಳವಡಿಸಿಕೊಳ್ಳಿ. ಹೂ ಬಿಡುವ ಮುನ್ನ ಜಮೀನಿನಲ್ಲಿನ ಕಳೆ ತೆಗೆದು ಮಲ್ಚ್ ವಸ್ತುವಾಗಿ ಬಳಸಿ. ಕ್ಯಾಸ್ಟರ್ ಮತ್ತು ಮಾರಿಗೋಲ್ಡ್ ನಂತಹ ಕೀಟ ನಿವಾರಕಗಳು ಮತ್ತು ಕೀಟ ಬಲೆಯ ಬೆಳೆಗಳನ್ನು ನೆಡುವುದು ಮತ್ತು ಬಳಸುವುದು. ಮುಖ್ಯ ಋತುಗಳಲ್ಲಿ ಎಂದಿಗೂ ಅತಿಯಾದ, ಅನವಶ್ಯಕ ಗಮನಹರಿಸಬೇಡಿ; ಹೆಚ್ಚಿನ ಋತುಗಳು ತಮ್ಮದೇ ಆದ ಸವಾಲುಗಳೊಂದಿಗೆ ಬರುತ್ತವೆ. ಮೊದಲು ರೈತನಾಗು, ಜೂಜುಕೋರನಲ್ಲ. ಕನಿಷ್ಠ ಎರಡು ಮುಖ್ಯ ಬೆಳೆಗಳನ್ನು ಮತ್ತು ಬೆಳೆ ಸರದಿ ಯೋಜನೆಯನ್ನು ಆಯ್ಕೆಮಾಡಿ. ಒಂದು ಬೆಳೆಯಿಂದ ಇನ್ನೊಂದಕ್ಕೆ ಬದಲಾಯಿಸುವುದು ನೇರವಾಗಿ ನಿಮ್ಮ ಜೇಬಿನಲ್ಲಿಲ್ಲ. ನಿಮ್ಮ ಫಾರ್ಮ್ ಅನ್ನು ಯೋಜಿಸಿ ಮತ್ತು ನಿರಂತರ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಬೆಳವಣಿಗೆಯ ವಿವಿಧ ಹಂತಗಳಲ್ಲಿ ಯಾವಾಗಲೂ ಬೆಳೆಗಳನ್ನು ಹೊಂದಿರಿ. ಯಾವುದೇ ಬೆಳೆ ಸ್ವತಃ ಹೆಚ್ಚು ಲಾಭದಾಯಕವಲ್ಲ; ಪ್ರತಿಯೊಂದು ನಿರ್ದಿಷ್ಟ ಬೆಳೆಗಳ ಅನುಕೂಲಗಳು ಮತ್ತು ಅನಾನುಕೂಲಗಳನ್ನು ಕರಗತ ಮಾಡಿಕೊಳ್ಳಿ. ದೊಡ್ಡ ಫಾರ್ಮ್ ಅನ್ನು ಹೊಂದಿರುವುದು ಯಶಸ್ವಿ ಕೃಷಿಗೆ ಗ್ಯಾರಂಟಿ ಅಲ್ಲ. ಸಿಂಪರಣೆ ಮತ್ತು ಗೊಬ್ಬರ ಹಾಕುವ ಯೋಜನೆಯನ್ನು ಹೊಂದಿರಿ ಮತ್ತು ಅದಕ್ಕೆ ಅಂಟಿಕೊಳ್ಳಿ. ಕೃಷಿ-ಪಶುವೈದ್ಯರು ಮತ್ತು ಕೃಷಿ ರಾಸಾಯನಿಕ ಮಾರಾಟ ಏಜೆಂಟ್‌ಗಳ ಸಲಹೆಯನ್ನು ಎಂದಿಗೂ ಕುರುಡಾಗಿ ಅನುಸರಿಸಬೇಡಿ. ಅವರಲ್ಲಿ ಕೆಲವರು ಕೇವಲ ಮಾರಾಟಗಾರರು ಮತ್ತು ಕೃಷಿಶಾಸ್ತ್ರಜ್ಞರಲ್ಲ.

ಉತ್ಪನ್ನಗಳ ಗುಣಮಟ್ಟಕ್ಕೆ ಧಕ್ಕೆಯಾಗದಂತೆ ಕೃಷಿ ವೆಚ್ಚವನ್ನು ಕಡಿಮೆ ಮಾಡಲು ಸಾಧ್ಯವಾದಷ್ಟು ಪ್ರಯತ್ನಿಸಿ.

ಉತ್ಪನ್ನವು ಹಾಳಾಗುವಂತಿದ್ದರೆ ಅದನ್ನು ಎಂದಿಗೂ ಹಿಡಿದುಕೊಳ್ಳಬೇಡಿ. ಅದನ್ನು ಚಾಲ್ತಿಯಲ್ಲಿರುವ ಬೆಲೆಗೆ ಮಾರಾಟ ಮಾಡಿ. ಹೊಸ ತಳಿ ಅಥವಾ ನೂತನ ಬೆಳೆಯ ಬೀಜವನ್ನು ಪರೀಕ್ಷಿಸುವ ಮೊದಲು, ನೀವು ಅದನ್ನು ಎಲ್ಲೋ ನೋಡದಿದ್ದರೆ ಅದನ್ನು ದೊಡ್ಡ ಪ್ರಮಾಣದಲ್ಲಿ ನೆಡಬೇಡಿ.

**ಬಹಳಷ್ಟು ಹ್ಯೂಮಿಕ್ ಆಮ್ಲಗಳನ್ನು ಬಳಸಿ - ಹ್ಯೂಮಿಕ್ ಆಮ್ಲವು ಹೆಚ್ಚಿನ ಪ್ರಮಾಣದ ಪೋಷಕಾಂಶಗಳನ್ನು ಸಂಗ್ರಹಿಸುತ್ತದೆ ಮತ್ತು ಗೊಬ್ಬರದ ವೆಚ್ಚವನ್ನು ಉಳಿಸುತ್ತದೆ. ಇದು ಮಣ್ಣಿನ ವಿಷತ್ವವನ್ನು ತೆಗೆದುಹಾಕುತ್ತದೆ. ಇದು ಆರಂಭಿಕ ಬೇರಿನ ಬೆಳವಣಿಗೆಯನ್ನು ಉತ್ತೇಜಿಸುತ್ತದೆ.**


..ಮುಂದುವರೆಯುತ್ತದೆ

## ದಿನಕ್ಕೊಂದು ಮುಕ್ತಕ :72




ಸಾಮಾಜಿಕ ಕಳಕಳಿ
ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ

• ಉದಯವಾಹಿನಿ, ವಿಶೇಷ



ನೆನಪಿನೆದೆ ಅಂಗಳದಿ ಕುಳಿತಿರಲು ಸಂತಸದಿ
ಮನದಲ್ಲಿ ಹಲವುಬಗೆ ಚಿಂತೆಯಿರಲು
ಸನಿಹದಲಿ ಪ್ರೀತಿಮಾತುಗಳನ್ನು ಕೇಳುತಿರೆ
ಹನಿಯದುವೆ ಮಂಜಿನದು ಲಕ್ಷ್ಮಿ ದೇವಿ

ಮೇಲಿನ ಮುಕ್ತಕದಂತೆ ನೆನಪಿನ ಅಂಗಳದಲ್ಲಿ ಸಂತಸದಲ್ಲಿ ಕುಳಿತಿರುವಾಗ ಬಹಳಷ್ಟು ನೆನಪುಗಳು ಕಾಡುತ್ತ ಇರುತ್ತವೆ. ಅದೇ ಸಮಯದಲ್ಲಿ ಹಲವಾರು ಚಿಂತೆಗಳು ಕಾಡುತ್ತಿದ್ದರೂ ಸಹ ಒಮ್ಮೊಮ್ಮೆ ಮನಸ್ಸಿಗೆ ಸಂತಸದ ವಿಷಯಗಳು ಬರುತ್ತವೆ. ಕೆಲವರು ಪ್ರೀತಿಯಿಂದ ಮಾತನಾಡಿದಾಗ ಸಂತೋಷವಾಗುತ್ತದೆ. ಮಂಜಿನ ಹನಿಗಳು ಮೈ ಮೇಲೆ ಬಿದ್ದ ಭಾಸವಾಗುತ್ತವೆ. ಜೀವನದಲ್ಲಿ ಕಷ್ಟವೇ ಎಂದು ಕುಳಿತಾಗ ಬದುಕಲು ಬಹಳ ಕಷ್ಟವೇ ಆಗುತ್ತದೆಯೇ ಹೊರತು. ಜೀವಿಸಲು ಕಷ್ಟಕ್ಕಿಂತ ಇಷ್ಟ ಪಡಬೇಕು. ಏನೇ ಮಾಡಿದರು ಸಮಸ್ಯೆಗಳೇ ಎದುರಾಗುತ್ತವೆ ಎನ್ನುವವರು ಎಷ್ಟೇ ಕಷ್ಟಗಳು ಬಂದರೂ ಸಹ ಯಾವುದಕ್ಕೂ ಹೆದರದಂತೆ ಅದನ್ನು ಹೆದರಿಸಿ ಬಾಳುವುದೇ ಒಂದು ಕಲೆ. ಅಂತಹ ಕಲೆಯನ್ನು ಯಾರು ಸಿದ್ಧಿಸಿಕೊಂಡಿರುತ್ತಾರೋ ಅವರ ಮುಖದಲ್ಲಿ ಯಾವಾಗಲೂ ನಗುವೆ ಇರುತ್ತದೆ. ಸಮಸ್ಯೆ ಬಂದರು ಸಹ ಆ ಸಮಸ್ಯೆಯನ್ನು ಸಂತೋಷದಿಂದ ಬಗೆಹರಿಸುತ್ತಾರೆ.



# ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವ

• ಉದಯವಾಹಿನಿ ಬೆಂಗಳೂರು

ಶ್ರೀ ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಜನವರಿ 20 ರಿಂದ 29ರ ವರೆಗೆ ಕರ್ನಾಟಕ ಸಂಗೀತ ಪಿತಾಮಹ ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದು ಅವುಗಳ ವಿವರಗಳು ಈ ರೀತಿ ಇವೆ

ಕಾರ್ಯಕ್ರಮಗಳು : (ಪ್ರತಿದಿನ ಸಂಜೆ 6-30ಕ್ಕೆ)

ಜನವರಿ 20, ಸೋಮವಾರ : ಉಡುಪಿ ಭಂಡಾರಕೇರಿ ಮಠಾಧೀಶರಾದ ಶ್ರೀ ಶ್ರೀ 1008 ಶ್ರೀ ವಿದ್ಯೇಶತೀರ್ಥ ಶ್ರೀಪಾದಂಗಳವರಿಂದ ಕಾರ್ಯಕ್ರಮದ ಉದ್ಘಾಟನೆ ಮತ್ತು ಅನುಗ್ರಹ ಸಂದೇಶ.

ಜನವರಿ 21, ಮಂಗಳವಾರ : ಶ್ರೀ ವೇಣುಗೋಪಾಲ ಭಂಡಾರಿ ಮತ್ತು ಸಂಗಡಿಗರಿಂದ ಕೊಳಲು ವಾದನ

ಜನವರಿ 22, ಬುಧವಾರ : ವಿ|| ಶಾಂಭವಿ ಎ.ಹೆಚ್. ಮತ್ತು ಸಂಗಡಿಗರಿಂದ ಹರಿದಾಸ ವಾಣಿ

ಜನವರಿ 23, ಗುರುವಾರ : ಕು|| ಅಹಿಕಾ ನಾಗದೀಪ್ ಮತ್ತು ಸಂಗಡಿಗರಿಂದ ವೀಣಾ ವಾದನ ಜನವರಿ 24, ಶುಕ್ರವಾರ : ಕು|| ದಿವ್ಯ ಶ್ರೀ ರಂಗನಾಥನ್ ಮತ್ತು ಸಂಗಡಿಗರಿಂದ ಸ್ಯಾಕ್ಸೋಫೋನ್ ವಾದನ

ಜನವರಿ 25, ಶನಿವಾರ : ಶ್ರೀ ಗುಲ್ಬರ್ಗ ಗುರುರಾಜದಾಸರು ಮತ್ತು ಸಂಗಡಿಗರಿಂದ ಹರಿ ಭಜನೆ

ಜನವರಿ 26, ಭಾನುವಾರ : ಕು|| ಅಭಿಜ್ಞಾ ಪಿ. ಕಶ್ಯಪ್ ಮತ್ತು ಸಂಗಡಿಗರಿಂದ ಹರಿನಾಮ ಸಂಕೀರ್ತನೆ

ಜನವರಿ 27, ಸೋಮವಾರ : ಕು|| ಸುಶ್ರಾವ್ಯ ಆಚಾರ್ಯ ಮತ್ತು ಸಂಗಡಿಗರಿಂದ ಹರಿದಾಸ ಮಂಜರಿ

ಜನವರಿ 28, ಮಂಗಳವಾರ : ಕು|| ಹಂಸ ಬಿ.ಎನ್. ಮತ್ತು ಸಂಗಡಿಗರಿಂದ ಹರಿದಾಸ ಝೇಂಕಾರ

ಜನವರಿ 29, ಬುಧವಾರ : ಮ||ಶಾ||ಸಂ|| ಶ್ರೀ ಕಲ್ಲಾಪುರ ಪವಮಾ ನಾಚಾರ್ಯರಿಂದ ಶ್ರೀ ಪುರಂದರದಾಸರು ವಿಷಯವಾಗಿ ಧಾರ್ಮಿಕ ಪ್ರವಚನ. ಕಾರ್ಯಕ್ರಮಗಳು ನಡೆಯುವ ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರಂ, ಬೆಂಗಳೂರು-560003

# 30 ವರ್ಷದ ಬಳಿಕ ತ್ರಿಗ್ರಾಹಿ ಯೋಗ

• ಉದಯವಾಹಿನಿ ಬೆಂಗಳೂರು

2025ರಲ್ಲಿ ಹಲವು ಯೋಗಗಳು ರೂಪುಗೊಳ್ಳುತ್ತಿವೆ. ಅಂತಹ ಹಲವು ಅಪರೂಪದ ಯೋಗಗಳಲ್ಲಿ ತ್ರಿಗ್ರಾಹಿ ಯೋಗ ಕೂಡ ಒಂದಾಗಿದೆ.

ಈ ಯೋಗ ಅಪರೂಪದಲ್ಲಿ ಅಪರೂಪದ ಗ್ರಹಗಳ ಚಲನೆಯ ಕಾರಣಕ್ಕೆ ರೂಪುಗೊಳ್ಳುತ್ತದೆ. ಸಾಮಾನ್ಯವಾಗಿ ಒಂದೇ ರಾಶಿಯಲ್ಲಿರುವ ಎರಡು ಗ್ರಹಗಳ ಚಲನೆಯಿಂದಾಗಿ ಯೋಗಗಳು ರೂಪುಗಳುತ್ತವೆ.

ಈ ಯೋಗಗಳು 12 ರಾಶಿ ಚಕ್ರದ ಮೇಲೂ ಪರಿಣಾಮ ಬೀರುತ್ತವೆ. ಮಾರ್ಚ್ ತಿಂಗಳಲ್ಲಿ ಸೂರ್ಯ, ಶನಿ ಮತ್ತು ಶುಕ್ರ ಮೂರು ಗ್ರಹಗಳ ಸಂಯೋಗವಾಗುತ್ತದೆ. ಈ ಗ್ರಹಗಳ ಸಂಯೋಜನೆಯು ಸುಮಾರು 30 ವರ್ಷಗಳ ನಂತರ ಉಂಟಾಗುತ್ತಿದೆ. ಈ ಬಾರಿ ಮೀನ ರಾಶಿಯಲ್ಲಿ ಈ ಮೂರು ಗ್ರಹಗಳು ಚಲಿಸಲಿದ್ದು, ಅಪರೂಪದ ತ್ರಿಗ್ರಾಹಿ ಯೋಗ ರೂಪುಗೊಳ್ಳುತ್ತಿದೆ.

ಜನವರಿ 13, ದಿನ ಭವಿಷ್ಯ ದ್ವಾದಶ ರಾಶಿಗಳಲ್ಲಿ ಯಾರಿಗೆ ಶುಭ, ಯಾರು ಜಾಗ್ರತೆವಹಿಸಬೇಕುಜನವರಿ 13, ದಿನ ಭವಿಷ್ಯ ದ್ವಾದಶ ರಾಶಿಗಳಲ್ಲಿ ಯಾರಿಗೆ ಶುಭ, ಯಾರು ಜಾಗ್ರತೆವಹಿಸಬೇಕು

ಹಾಗಾದ್ರೆ ನಾವಿಂದು ಈ ತ್ರಿಗ್ರಾಹಿ ಯೋಗದಿಂದಾಗಿ



ಯಾವೆಲ್ಲಾ ರಾಶಿಯವರಿಗೆ ಲಾಭವಾಗಲಿದೆ ಎಂಬುದನ್ನು ತಿಳಿದುಕೊಳ್ಳೋಣ.

**ಕರ್ಕ ರಾಶಿ:** ಕರ್ಕ ರಾಶಿಯವರಿಗೆ ತ್ರಿಗ್ರಾಹಿ ಯೋಗವು ಹಲವು ರೀತಿಯ ಲಾಭಗಳಿಗೆ ಕಾರಣವಾಗುತ್ತಿದೆ. ಈ ಸಮಯದಲ್ಲಿ ನಿಮ್ಮ ಬಯಕೆಗಳು ಈಡೇರಲಿದೆ. ಹಾಗೆ ಕುಟುಂಬದಲ್ಲಿ ಶುಭ ಕಾರ್ಯಗಳು ನಡೆಯುವ ಸಾಧ್ಯತೆ ಅಧಿಕವಾಗಿದೆ. ಹಾಗೆ ನಿಮ್ಮ ಎಲ್ಲಾ ಕೆಲಸಗಳಲ್ಲಿ ಯಶಸ್ಸು ಸಿಗಲಿದೆ. ದೂರ ಪ್ರಯಾಣದಂತಹ ಕೆಲಸದಲ್ಲಿ ನೀವು ತೊಡಗಬೇಕಾಗಬಹುದು. ನಿಮ್ಮ ಬಹುದಿನದ ಕೆಲಸ ಯಾವುದೇ ಅಡೆತಡೆಯಿಲ್ಲದೆ ಈ ಸಮಯದಲ್ಲಿ ಮುಗಿಯಬಹುದು. ಉದ್ಯೋಗದಲ್ಲಿ ನಿಮ್ಮ ಬಡ್ತಿ ವಿಚಾರವಾಗಿ ಯಶಸ್ಸು, ದಾಂಪತ್ಯದಲ್ಲಿ ಸುಖ, ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು. ಹಾಗೆ ಆರ್ಥಿಕವಾಗಿಯೂ ನಿಮಗೆ ಅತ್ಯುತ್ತಮ ದಿನಗಳು ಮುಂದಿವೆ. ವ್ಯಾಪಾರ, ವ್ಯವಹಾರದಲ್ಲಿ ಲಾಭಗಳಿಸಲಿದ್ದೀರಿ. ನಿಮ್ಮಲ್ಲಿ ಧನಾತ್ಮಕ ಯೋಚನೆಗಳು ಇರಲಿದೆ. ನಿಮ್ಮ ಪ್ರಯತ್ನಗಳು ಮತ್ತು ಕೌಶಲ್ಯಗಳನ್ನು ಕಚೇರಿಯಲ್ಲಿ ಗುರುತಿಸುವ ಸಾಧ್ಯತೆಯಿದೆ.

**ಧನು ರಾಶಿ:** ಧನು ರಾಶಿಯ ನಾಲ್ಕನೇ ಮನೆಯಲ್ಲಿ ತ್ರಿಗ್ರಾಹಿ ಯೋಗ ರೂಪುಗೊಳ್ಳುತ್ತಿದೆ. ತ್ರಿಗ್ರಾಹಿ ಯೋಗವು ಧನು ರಾಶಿಯವರಿಗೆ ತುಂಬಾ ಪ್ರಯೋಜನಕಾರಿಯಾಗಿದೆ. ನೀವು ವ್ಯಾಪಾರ, ವ್ಯವಹಾರದಲ್ಲಿದ್ದರೆ ಅನೇಕ ರೀತಿಯ ಲಾಭವಿದೆ. ನಿಮ್ಮಲ್ಲಿ ಅನೇಕ ಮೂಲದಿಂದ ಆದಾಯ ಹರಿದುಬರಬಹುದು. ಕುಟುಂಬದಲ್ಲಿ ನಿಮ್ಮ ಪರವಾದ ಬೆಂಬಲ ಇರಲಿದೆ. ಹಲವು ಕಾಲದಿಂದ ಬಾಕಿ ಉಳಿದ ಕೆಲಸಗಳಿಗೆ ನೀವು ಮುಕ್ತಿ ನೀಡಲಿದ್ದೀರಿ. ವಿದ್ಯಾರ್ಥಿಗಳಿಗೆ ಇದು ಶುಭ ಕಾಲವಾಗಲಿದೆ. ಸರ್ಕಾರಿ ನೌಕರರು ಬಡ್ತಿ ಪಡೆಯುವ ಸಾಧ್ಯತೆ ಇರಲಿದೆ. ಅವಿವಾಹಿತರಿಗೆ ಶುಭವಾಗುತ್ತದೆ. ನೀವು ಸಾಲ ಮಾಡಿದ್ದರೆ ಈ ಎಲ್ಲಾ ಸಾಲಗಳು ಮುಗಿಯಬಹುದು. ಹಾಗೆ ಮನೆಯಲ್ಲಿ ಹೊಸ ವಸ್ತುವಿನ ಆಗಮನವಾಗಬಹುದು. ನಿಮ್ಮ ಆಸ್ತಿ ಹಾಗೂ ವಾಹನ ಸಂಬಂಧಿ ಕೆಲಸಗಳು ಸುಲಭವಾಗಿ ನಡೆಯುತ್ತವೆ.

**ಮೀನ ರಾಶಿ ಜನವರಿ 12 ದಿನ ಭವಿಷ್ಯ:** ಜನವರಿ 12 ದಿನ ಭವಿಷ್ಯ ಯಾವ ರಾಶಿಯವರಿಗೆ ಈ ದಿನ ಶುಭ ನೋಡಿ! ತ್ರಿಗ್ರಾಹಿ ಯೋಗವು ಮೀನ ರಾಶಿಯವರಿಗೆ ತುಂಬಾ ಅನುಕೂಲಕರವಾಗಿರುತ್ತದೆ. ಈ ಸಮಯದಲ್ಲಿ ನಿಮ್ಮ ವ್ಯಾಪಾರದಲ್ಲಿ ಏಕಾಏಕಿ ಲಾಭ ನೋಡಬಹುದು. ನಿಮ್ಮ ದಾಂಪತ್ಯ ಜೀವನದಲ್ಲಿ ಸಂತೋಷ ಇರಲಿದೆ. ಎಲ್ಲಾ ಕ್ಷೇತ್ರದಲ್ಲೂ ಯಶಸ್ಸು ಪಡೆಯುತ್ತೀರಿ. ನೀವು ಉದ್ಯೋಗದ ನಿರೀಕ್ಷೆಯಲ್ಲಿದ್ದರೆ ನಿಮಗೆ ಶುಭ ಸುದ್ದಿ ಕೇಳಲಿದ್ದೀರಿ. ಸಮಾಜದಲ್ಲಿ ಗೌರವ, ಯಶಸ್ಸು ಮತ್ತು ಕೀರ್ತಿ ಹೆಚ್ಚಾಗುತ್ತದೆ. ಈ ಸಮಯದಲ್ಲಿ ನೀವು ಧನಾತ್ಮಕ ಯೋಚನೆಗಳು ನಿಮ್ಮಲ್ಲಿರಲಿದೆ. ಮನೆಯಲ್ಲಿ ಶಾಂತಿ ನೆಲೆಸಲಿದೆ. ಈ ಸಮಯವು ನಿಮ್ಮ ದಾಂಪತ್ಯ ಜೀವನದ ಯಶಸ್ಸಿಗೆ ಕಾರಣವಾಗುತ್ತದೆ. ಹಾಗೆ ನೀವು ಮಕ್ಕಳ ಹಾಗೂ ನಿಮ್ಮ ಭವಿಷ್ಯದ ದೃಷ್ಟಿಯಿಂದ ತೆಗೆದುಕೊಳ್ಳುವ ಹಲವು ನಿರ್ಧಾರಗಳು ನಿಮಗೆ ಶುಭತರಲಿದೆ.

# ಸನಾತನ ಸಂಸ್ಥೆಯ ವತಿಯಿಂದ ಸನಾತನ ಸಂಸ್ಕೃತಿ ಪ್ರದರ್ಶನ ಆಯೋಜನೆ

## ಕುಂಭಮೇಳದಲ್ಲಿ ಸನಾತನ ಧರ್ಮವನ್ನು ಸುಲಭ ಭಾಷೆಯಲ್ಲಿ ಅರ್ಥಮಾಡಿಕೊಳ್ಳಲು ಭಕ್ತರಿಗೆ ಅಮೂಲ್ಯ ಅವಕಾಶ

• ಉದಯವಾಹಿನಿ ಬೆಂಗಳೂರು

**ಪ್ರಯಾಗರಾಜ:** ಪ್ರಯಾಗರಾಜದಲ್ಲಿ ನಡೆಯುವ ಕುಂಭ ಮೇಳದಲ್ಲಿ ಸನಾತನ ಧರ್ಮ, ಸಂಸ್ಕೃತಿ ಮತ್ತು ಪರಂಪರೆಯ ವೈಜ್ಞಾನಿಕ ಮತ್ತು ಆಧ್ಯಾತ್ಮಿಕ ಆಧಾರವನ್ನು ವಿವರಿಸುವ 'ಸನಾತನ ಸಂಸ್ಕೃತಿ ಪ್ರದರ್ಶನವನ್ನು ಆಯೋಜಿಸಲಾಗಿದೆ. ಈ ಪ್ರದರ್ಶನ 12 ಜನವರಿ 2025 ರಿಂದ 15 ಫೆಬ್ರುವರಿ 2025ರ ವರೆಗೆ ಸನಾತನ ಸಂಸ್ಥೆ ಶಿಬಿರ, ಸೆಕ್ಟರ್ 9, ಗಂಗೇಶ್ವರ ಮಹಾದೇವ ಮಾರ್ಗ, ಪ್ರಯಾಗರಾಜದಲ್ಲಿ ಬೆಳಿಗ್ಗೆ 9 ರಿಂದ ರಾತ್ರಿ 9ರ ವರೆಗೆ ತೆರೆದಿರುತ್ತದೆ. ಸನಾತನ ಧರ್ಮದ ಕುರಿತು ಸುಲಭ ಭಾಷೆಯಲ್ಲಿ ಮಾಹಿತಿ ನೀಡುವ ಈ ಪ್ರದರ್ಶನಕ್ಕೆ ಕುಂಭಮೇಳದ ಭಕ್ತರು ಭೇಟಿ ನೀಡಬೇಕು ಎಂದು ಸನಾತನ ಸಂಸ್ಥೆಯ ರಾಷ್ಟ್ರೀಯ ವಕ್ತಾರ ಶ್ರೀ. ಚೇತನ ರಾಜಹಂಸ ಇವರು ಪತ್ರಿಕಾಗೋಷ್ಠಿಯಲ್ಲಿ ಕರೆ ನೀಡಿದ್ದಾರೆ.

ಹಿಂದೂ ರಾಷ್ಟ್ರದ ಬಗ್ಗೆ ಜಾಗೃತಿಯ ಅವಶ್ಯಕತೆ

ಈ ಸಂದರ್ಭದಲ್ಲಿ ಶ್ರೀ. ರಾಜಹಂಸ ಅವರು ಮುಂದಿನಂತೆ ಹೇಳಿದರು, ''ಕುಂಭಮೇಳವು ಕೋಟ್ಯಾಂತರ ಭಕ್ತರ ಭಕ್ತಿಯ ಮಹಾಸಂಗಮವಾಗಿದೆ. ಆದರೆ, ಅನೇಕ ಭಕ್ತರಿಗೆ ಸನಾತನ




ಧರ್ಮ, ಸಂಸ್ಕೃತಿ ಮತ್ತು ಪರಂಪರೆಗಳ ಹಿಂದೆ ಇರುವ ಶಾಸ್ತ್ರದ ಅರಿವು ಇಲ್ಲ. ಇದರಿಂದ ಅವರಿಗೆ ಅಪೇಕ್ಷಿತವಿರುವಷ್ಟು ಆಧ್ಯಾತ್ಮಿಕ ಲಾಭ ಪಡೆಯಲು ಸಾಧ್ಯವಾಗುತ್ತಿಲ್ಲ. ಪ್ರಸ್ತುತ ಕಾನ್ವೆಂಟ್ ಶಾಲೆಗಳಲ್ಲಿ ಬೈಬಲ್ ಮತ್ತು ಮದರಸಗಳಲ್ಲಿ ಕುರಾನ್ ಕಲಿಸಲಾಗುತ್ತದೆ; ಆದರೆ ಸಾಮಾನ್ಯ ಹಿಂದೂಗಳಿಗೆ ತಮ್ಮ ಧರ್ಮವನ್ನು ಕಲಿಸುವಂತಹ ಯಾವುದೇ ವ್ಯವಸ್ಥೆ ಇಲ್ಲ. ಈ ಕಾರಣದಿಂದ, ಸನಾತನ ಧರ್ಮ ಎಂದರೆ ಏನು?, ಅದನ್ನು ಹೇಗೆ ಪಾಲಿಸಬೇಕು ಎಂಬುದು ಹಿಂದೂಗಳಿಗೆ ಗೊತ್ತಿಲ್ಲ. ಧಾರ್ಮಿಕ ಕಾರ್ಯಗಳನ್ನು ಭಕ್ತಿಯಿಂದ ಮತ್ತು ಶ್ರದ್ಧೆಯಿಂದ ಮಾಡಿದರೆ ಅದರಿಂದ ಹೆಚ್ಚು ಆಧ್ಯಾತ್ಮಿಕ ಲಾಭವಾಗುತ್ತದೆ. ಭಾರತ ಸ್ವಾಭಾವಿಕವಾಗಿ ಹಿಂದೂ ರಾಷ್ಟ್ರವಾಗಿದೆ ಮತ್ತು ಸನಾತನ ಧರ್ಮೀಯರ ಹಿಂದೂ ರಾಷ್ಟ್ರದ ಕಲ್ಪನೆ ವಿಶ್ವಶಾಂತಿಗಾಗಿ ಇದೆ. ಈ ಉದ್ದೇಶಕದಿಂದ 'ಸನಾತನ ಸಂಸ್ಕೃತಿ ಪ್ರದರ್ಶನ'ವನ್ನು ಆಯೋಜಿಸಲಾಗಿದೆ. ಗ್ರಂಥಪ್ರದರ್ಶನ ಮತ್ತು ಮಾಹಿತಿ ಪುಸ್ತಕಗಳ ಸಮಾವೇಶ ಸನಾತನ ಧರ್ಮ, ಅಧ್ಯಾತ್ಮ ಸಾಧನೆ ಮತ್ತು ರಾಷ್ಟ್ರಹಿತ ಇವುಗಳ ಮೇಲಾಧಾರಿತ ಸನಾತನ ಸಂಸ್ಥೆಯ ಹಲವು ಗ್ರಂಥಗಳ ಪ್ರದರ್ಶನ ಕೂಡ ಇರಲಿದೆ. ಧರ್ಮಶಾಸ್ತ್ರವನ್ನು ವಿವರಿಸಲು ವಿಶೇಷ ಗ್ರಂಥ, ಫಲಕಗಳು ಮತ್ತು ವಿಡಿಯೋಗಳ ಮೂಲಕ ಮಾಹಿತಿ ನೀಡಲಾಗುವುದು. ಸನಾತನ ಸಂಸ್ಥೆಯ ಸಾಧಕಿ ಸೌ. ಧನಶ್ರೀ ಕೇಳಶೀಕರ್ ಅವರು, ಭಕ್ತರಿಗೆ ಸನಾತನ ಧರ್ಮದ ಮಹತ್ವ, ಆಧ್ಯಾತ್ಮಿಕ ಲಾಭ ಮತ್ತು ಪರಂಪರೆಯ ವೈಜ್ಞಾನಿಕ ಆಧಾರವನ್ನು ಅರ್ಥಮಾಡಿಕೊಳ್ಳಲು ಈ ಪ್ರದರ್ಶನ ಬಹಳ ಉಪಯುಕ್ತವಾಗುತ್ತದೆ. ಭಕ್ತರು ಈ ಪ್ರದರ್ಶನಕ್ಕೆ ಭೇಟಿ ನೀಡಿ ಇದರ ಲಾಭ ಪಡೆಯಬೇಕು ಎಂದು ಹೇಳಿದರು.

### ತೀರ್ಥಮಹಿಮೆ ಕಕ್ಷೆ ಮತ್ತು ಹಿಂದೂ ರಾಷ್ಟ್ರ ಬೋಧ ಕಕ್ಷೆ

**ಸನಾತನ ಸಂಸ್ಥೆಯ ಸಾಧಕ ಶ್ರೀ. ಸಂಜಯ್ ಸಿಂಗ್ ಅವರು ಪ್ರದರ್ಶನದ ವೈಶಿಷ್ಟ್ಯಗಳನ್ನು ವಿವರಿಸುತ್ತಾ ಮುಂದಿನಂತೆ ಹೇಳಿದರು, ಸನಾತನ ಸಂಸ್ಥೆಯು 2001ರ ಕುಂಭಮೇಳದಿಂದ ಈ ರೀತಿಯ ಪ್ರದರ್ಶನಗಳ ಮೂಲಕ ಜಾಗೃತಿಯನ್ನು ಹೆಚ್ಚಿಸುತ್ತಿದೆ. 'ತೀರ್ಥಮಹಿಮೆ ಕಕ್ಷೆ': ಮತ್ತು ಹಿಂದೂ ರಾಷ್ಟ್ರ ಬೋಧ ಕಕ್ಷೆ ಎಂಬ 2 ಸ್ವತಂತ್ರ ಕಕ್ಷೆಗಳ ಮೂಲಕ ಭಕ್ತರಿಗೆ ಮಾರ್ಗದರ್ಶನ ಮಾಡಲಾಗುವುದು. ಇಲ್ಲಿ 2 ಶ್ರಾದ್ಧ ಕ್ಷೇತ್ರಗಳು, 3 ತ್ರಿಸ್ಥಳಿ ಯಾತ್ರಾ ಸ್ಥಳಗಳು, 4 ಕುಂಭಕ್ಷೇತ್ರಗಳು ಮತ್ತು 7 ಮೋಕ್ಷಪುರಿಗಳ ಮಹತ್ವದ ಮಾಹಿತಿ ನೀಡಲಾಗುತವುದು. 'ಹಿಂದೂ ರಾಷ್ಟ್ರ ಬೋಧ ಕಕ್ಷೆ': ಇಲ್ಲಿ ಹಿಂದೂ ರಾಷ್ಟ್ರ ಸಂಕಲ್ಪನೆಗೆ ಸಂಬಂಧಿಸಿದ ಆಕ್ಷೇಪಗಳು ಮತ್ತು ಶಾಸ್ತ್ರಸಮ್ಮತ ಉತ್ತರಗಳನ್ನು ನೀಡಲಾಗುವುದು.**

# ಕಲಬುರಗಿಯಿಂದ ನೇಪಾಳಕ್ಕೆ ಶ್ರೀಯಾಜ್ಞವಲ್ಕ್ಯರ ವಿಗ್ರಹ

## ಪ್ರತಿಮೆಯನ್ನು ಸುಂದರವಾಗಿ ಕೆತ್ತನೆ ಮಾಡಿ ಶ್ರೀಯಾಜ್ಞವಲ್ಕ್ಯರ ವಿಗ್ರಹವನ್ನು ಬಿಹಾರದ ಮೂಲಕ ನೇಪಾಳಕ್ಕೆ ರವಾನೆ

• **ಉದಯವಾಹಿನಿ, ಕಲಬುರಗಿ**


ಉದಯವಾಹಿನಿ ಚಿತ್ರ


ಉದಯವಾಹಿನಿ ಚಿತ್ರ

ಶ್ರೀಯಾಜ್ಞವಲ್ಕ್ಯರ ತಪೋಭೂಮಿ ನೇಪಾಳದ ಜನಕಪುರದಲ್ಲಿ ನಿರ್ಮಿಸುತ್ತಿರುವ ಶ್ರೀಯಾಜ್ಞವಲ್ಕ್ಯರ ಮಂದಿರದಲ್ಲಿ ಪ್ರತಿಷ್ಠಾಪನೆಗೆ ಕಲಬುರಗಿಯಲ್ಲಿ ಕೆತ್ತನೆ ಮಾಡಿದ ಶ್ರೀಯಾಜ್ಞವಲ್ಕ್ಯರ ವಿಗ್ರಹವನ್ನು ಬಿಹಾರದ ಮೂಲಕ ನೇಪಾಳಕ್ಕೆ ರವಾನೆ ಮಾಡಲಾಯಿತು. ಜನಕರಾಜನಿಗೆ ಯಾಜ್ಞವಲ್ಕ್ಯರು ಬ್ರಹ್ಮ ಜ್ಞಾನವನ್ನು ಬೋಧಿಸಿದ ಸ್ಥಳ ಜನಕಪುರ, ಮಿಥಿಲಾ ಸಾಮ್ರಾಜ್ಯದ ರಾಜಧಾನಿ. ಬಹುದಕ್ಷಿಣಾಯಾಗ ನಡೆದದ್ದು ಮತ್ತು ಯಾಜ್ಞವಲ್ಕ್ಯರು ಸರ್ವಜ್ಞಪೀಠ ಅಲಂಕರಿಸಿದ್ದು ಜನಕ ಪುರದಲ್ಲಿಯೇ.

ಯಾಜ್ಞವಲ್ಕ್ಯರನ್ನು ಬ್ರಹ್ಮಿಷ್ಠರೆಂದು ಉದ್ಘೋಷಿಸಲಾಗಿತ್ತೋ ಆ ಮಿಥಿಲಾ ನಗರದಲ್ಲಿ ಅವರ ಪ್ರತಿಮೆ ಸ್ಥಾಪಿಸಬೇಕೆಂಬ ಪ್ರೇರಣೆಯಾಗಿತ್ತು ಶ್ರೀ ಸತ್ಯನಾರಾಯಣ ಮುಜುಮದಾರ ಹೇಳುತ್ತಾರೆ. ಪೌರಾಣಿಕ ಸ್ಥಳಗಳ ಸಂಶೋಧಕರಾದ ರಾಯ ಚೂರಿನ ವಾಸವಿ ನಗರದ ನಿವಾಸಿಯಾದ ಸಾಹಿತಿ ಶ್ರೀ ಸತ್ಯ ನಾರಾಯಣ ಮುಜುಮದಾರ ಅವರು ನೇಪಾಳದ ಜನಕಪುರದಲ್ಲಿ ನಿರ್ಮಾಣ ಮಾಡುತ್ತಿರುವ ಶ್ರೀ ಯಾಜ್ಞವಲ್ಕ್ಯರ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಲು ಕಲಬುರಗಿಯ ಶ್ರೀಮಹೇಶ ಕುಮಾರ ತಳವಾರ ಅವರಿಗೆ ಪ್ರತಿಮೆಯನ್ನು ನಿರ್ಮಿಸಿಕೊಡುವ ಜವಾಬ್ದಾರಿಯನ್ನು ನೀಡಿದ್ದರು, ಇತ್ತೀಚೆಗೆ ಶಿಲ್ಪಿ ಮಹೇಶಕುಮಾರ ತಳವಾರ ಅವರು ಕಲಬುರಗಿಯ ಲಾಲಗೇರಿ ಕ್ರಾಸ್, ಶಹಬಜಾರ್ ಹತ್ತಿರ ಇರುವ ತಮ್ಮ ಶಿಲ್ಪಶಾಲೆಯಲ್ಲಿ ಪೂರ್ಣಗೊಂಡ ವಿಗ್ರಹವನ್ನು ಶ್ರೀ ಸತ್ಯ ನಾರಾಯಣ ಮುಜುಮದಾರ ಅವರಿಗೆ ನೀಡಿದರು.

ಮಾರ್ಚ್, ಏಪ್ರಿಲ್ 2025 ರಲ್ಲಿ ನೇಪಾಳದಲ್ಲಿ ಹಿಂದೂ ಧಾರ್ಮಿಕ ಪದ್ಧತಿಗಳಲ್ಲಿ ಶ್ರೀಯಾಜ್ಞವಲ್ಕ್ಯರ ವಿಗ್ರಹ ಪ್ರತಿಷ್ಠಾಪನೆ ವಿಧಿ ವಿಧಾನಗಳೊಂದಿಗೆ ದೇವಸ್ಥಾನ ಉದ್ಘಾಟನೆಯಾಗಲಿದೆ. ಈಗಿನ ನೇಪಾಲದ ತರಾಯಿ ಪ್ರದೇಶ ಮತ್ತು ಈಗಿನ ಬಿಹಾರ ರಾಜ್ಯದ ಮಿಥಿಲಾಂಚಲ ಪ್ರದೇಶ ಸೇರಿ ಆಗಿನ ಜನಕರಾಜನ ಮಿಥಿಲಾ ಸಾಮ್ರಾಜ್ಯವಾಗಿತ್ತು. ಜನಕಪುರವು, ಮಿಥಿಲಾನಗರವು ಮಿಥಿಲಾ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಯಾಜ್ಞವಲ್ಕ್ಯರು ಮಿಥಿಲಾ ಸಾಮ್ರಾಜ್ಯದಲ್ಲಿ ವಾಸವಾಗಿದ್ದರು.

ಅವರು ವಾಸವಾಗಿದ್ದ ಸ್ಥಾನದ ಹೆಸರು ಯಜ್ಞವನವೆಂದು ಕರೆಯಲಾಗುತ್ತಿತ್ತು. ಯಜ್ಞವನವು ಮುಂದೆ ಜಜ್ಞ ವನ ಜಗವನವಾಯಿತು (ಯ ಕಾರವು ಅಲ್ಲಿ ಜ ಕಾರ ವಾಗುತ್ತದೆ.)ಕರ್ನಾಟಕಕ್ಕೂ ನೇಪಾಲಕ್ಕೂ ಸಂಬಂಧವಿತ್ತು, ಯಾಜ್ಞವಲ್ಕ್ಯರ ಅನುಯಾಯಿಗಳಾದ ಕನ್ನಡಿಗರು ಇದನ್ನು ಕಳಿಸಿದ್ದಾರೆ ಎಂದು ಗುರುತಿಸಲು ಕನ್ನಡದಲ್ಲಿ ಶ್ರೀ ಮದ್ ಯಾಜ್ಞವಲ್ಕ್ಯ ಮುನಿವರ್ಯಾ ಎಂದು ಬರೆಸಲಾಗಿದೆ ಎಂದು ತಿಳಿಸುತ್ತಾರೆ. ಪ್ರತಿಮೆಯನ್ನು ಸುಂದರವಾಗಿ ಕೆತ್ತನೆ ಮಾಡಿ ಹಸ್ತಾಂತರ ಮಾಡಿದ ಶಿಲ್ಪಿ ಶ್ರೀಮಹೇಶಕುಮಾರ ತಳವಾರ ಅವರಿಗೆ ಚಂದ್ರಕಾಂತ ಗಧಾರ, ವಿಶ್ವನಾಥ ಡ್ರಾಯಿಂಗ ಟೀಚರ, ಜಗದೀಶ್ ಪಾಟೀಲ್ ಇವರ ಸಮ್ಮುಖದಲ್ಲಿ ಸತ್ಯನಾರಾಯಣ ಮುಜುಮದಾರ ಸನ್ಮಾನ ಮಾಡಿದರು.

> **ನಿವೃತ್ತಿಯ ನಂತರವೂ ಸದಾ ಕ್ರಿಯಾಶೀಲತೆಯನ್ನು ಮೆರೆದಿದ್ದು, ಕಾರ್ಯಚಟುವಟಿಕೆಗಳಿಂದ ಸದಾ ನಿರತರಾಗಿರುವ ಶ್ರೀ ಸತ್ಯನಾರಾಯಣ ಮುಜುಮದಾರರು ನಿಜಕ್ಕೂ ದೈವೀಶಕ್ತಿ ಸಂಪನ್ನ ವ್ಯಕ್ತಿಗಳಂತೆ ಕಾಣುತ್ತಾರೆ. ಶ್ರೀಯಾಜ್ಞವಲ್ಕ್ಯರ ಗುರುಕೃಪೆ ಮತ್ತು ಅನುಗ್ರಹದಿಂದ, ಇಳಿವಯಸ್ಸಿನಲ್ಲೂ ಅವರು ಭಾರತದ ವಿವಿಧ ರಾಜ್ಯಗಳು ಹಾಗೂ ನೇಪಾಳವನ್ನು ಪ್ರವಾಸ ಮಾಡಿ ಐತಿಹಾಸಿಕ ಸ್ಥಳಗಳ ಸಂಶೋಧನೆ ಮಾಡುತ್ತಿರುವುದು ಹೆಮ್ಮೆಗೊಳ್ಳುವ ವಿಷಯವಾಗಿದೆ. ಜನಕಲ್ಯಾಣಕ್ಕಾಗಿ ಅವರು ಮಾಡುತ್ತಿರುವ ಅಪಾರ ಸೇವೆಯನ್ನು ಶ್ರೀಯಾಜ್ಞವಲ್ಕ್ಯ ಸಮಿತಿ ಹಾಗೂ ಕಲಬುರಗಿಯ ವಿಪ್ರ ಸಮಾಜ ಹಾರೈಸಿ ಅಭಿನಂದಿಸುತ್ತದೆ.**
>
> -ಶ್ರೀ ಮಲ್ಹಾರಾವ ಗಾರಂಪಳ್ಳಿ, ಅಧ್ಯಕ್ಷರು
> ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯ ಸೇವಾ ಸಮಿತಿ ಕಲಬುರಗಿ

> **ಶ್ರೀಯಾಜ್ಞವಲ್ಕ್ಯರ ಹಾಗೂ ಮಹರ್ಷಿ ಕಣ್ವರ ತಪೋಭೂಮಿ, ನಿವಾಸಸ್ಥಾನ ಹಾಗೂ ಆಶ್ರಮ ಸ್ಥಾನ, ನೆಲೆಗಳನ್ನು ಸಂಶೋಧನೆ ಮೂಲಕ ಪತ್ತೆ ಮಾಡಿ ಶ್ರೀಯಾಜ್ಞವಲ್ಕ್ಯ ಮತ್ತು ಮಹರ್ಷಿ ಕಣ್ವರ ನೆಲೆಗಳು ಕೃತಿಗಳನ್ನು ರಚಿಸಿರುವ ಸಂಶೋಧಕರಾದ, ಸಾಹಿತಿ ಶ್ರೀ ಸತ್ಯನಾರಾಯಣ ಮುಜುಮದಾರ ಅವರ ಸಂಶೋಧನೆ ಮತ್ತು ಇತಿಹಾಸಕ್ಕೆ ನೀಡಿರುವ ಕೊಡುಗೆಗಳನ್ನು ಪರಿಗಣಿಸಿ, ಗುರುತಿಸಿ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ಪದವಿ ನೀಡುವುದು ಸೂಕ್ತ.**
>
> -ವಿನುತ ಎಸ್ ಜೋಶಿ
> ರಾಜ್ಯ ಸಂಘಟನಾ ಕಾರ್ಯದರ್ಶಿ
> ಕಣ್ವ ಪರಿಷತ್. ಕಲಬುರಗಿ.

# ಸಮಯಕ್ಕೆ ಸರಿಯಾಗಿ ಚುಚ್ಚುಮದ್ದು ಕೊಡಿಸಿ ಮಕ್ಕಳ ಆರೋಗ್ಯ ಕಾಪಾಡಿ

• **ಉದಯವಾಹಿನಿ, ಚಿತ್ರದುರ್ಗ**


ಉದಯವಾಹಿನಿ ಚಿತ್ರ

ಮಗುವಿನ ಹುಟ್ಟಿನಿಂದ ಮಕ್ಕಳ ಆರೋಗ್ಯಕ್ಕೆ ರೋಗ ನಿರೋಧಕ ಚುಚ್ಚುಮದ್ದು ಅವಶ್ಯಕ. ಎರಡು ವರ್ಷದವರೆಗೆ ಕಾಲ ಕಾಲಕ್ಕೆ ತಪ್ಪದೆ ಲಸಿಕೆ ಹಾಕಿಸಬೇಕು. ಇದು ಮಗುವಿನ ದೇಹದಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿಸುವುದರ ಜೊತೆಗೆ ದೇಹದ ಅಂಗ ವೈಕಲ್ಯತೆ ಸೇರಿದಂತೆ ಮಕ್ಕಳಿಗೆ ಕಾಡಬಹುದಾದ ಅನೇಕ ರೋಗಗಳನ್ನು ಇದು ತಡೆಗಟ್ಟಲು ಸಹಾಯ ಮಾಡುತ್ತವೆ ಆದ್ದರಿಂದ ವೈದ್ಯರ ಸಲಹೆ ಪಡೆದು ಕಾಲಕಾಲಕ್ಕೆ ಮಕ್ಕಳಿಗೆ ಚುಚ್ಚುಮದ್ದುಗಳನ್ನು ಕೊಡಿಸಿ ಎಂದು ಹಿರೇಗುಂಟನೂರು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ಸುರಕ್ಷಣಾಧಿಕಾರಿ ಪರ್ವಿನ್ ಬಾನು ಸಲಹೆ ನೀಡಿದ್ದಾರೆ.

ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಮತ್ತು ಕ್ಷೇಮ ಕೇಂದ್ರ, ಹಿರೇಗುಂಟನೂರು ವತಿಯಿಂದ ಚಿತ್ರದುರ್ಗ ತಾಲ್ಲೂಕಿನ ಹುಣ್ಸೆಕಟ್ಟೆ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಶುಕ್ರವಾರ ಏರ್ಪಡಿಸಿದ್ದ ಮಕ್ಕಳ ಚುಚ್ಚುಮದ್ದು ಕಾರ್ಯಕ್ರಮದಲ್ಲಿ ಅವರು ಬಾಣಂತಿ ಸ್ತ್ರೀಯರನ್ನುದ್ದೇಶಿಸಿ ಅವರು ಮಾತನಾಡಿದರು.

ಇದೇ ವೇಳೆ ಗ್ರಾಮಸ್ಥರ ರಕ್ತದೊತ್ತಡ ಮತ್ತು ರಕ್ತಪರೀಕ್ಷೆ ನಡೆಸಿ ಮಾತನಾಡಿದ ಆರೋಗ್ಯ ನಿರೀಕ್ಷಣಾಧಿಕಾರಿ ಪುಟ್ಟುಸ್ವಾಮಿ ಒಳ್ಳೆಯ ಆರೋ ಗ್ಯವು ಸಮೃದ್ಧವಾದ ಜೀವನಕ್ಕೆ ಅತ್ಯಗತ್ಯ. ಗ್ರಾಮಸ್ಥರು ತಮ್ಮ ಆರೋಗ್ಯದ ಬಗ್ಗೆ ಸದಾ ಕಾಳಜಿ ವಹಿಸಬೇಕು ಯಾವುದೇ ಆರೋಗ್ಯ ಸಮಸ್ಯೆ ಕಂಡುಬಂದರು ಹತ್ತಿರದ ವೈದ್ಯರ ಬಳಿ ಚಿಕಿತ್ಸೆ ಪಡೆದು ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕು ಗ್ರಾಮಸ್ಥರ ಆರೋಗ್ಯ ಸುಧಾರಣೆಗಾಗಿ ಆರೋಗ್ಯ ಇಲಾಖೆಯ ಸಿಬ್ಬಂದಿವರ್ಗವು ಸದಾ ನಿಮ್ಮೊಟ್ಟಿಗೆ ಒಟ್ಟಾಗಿ ಇರುತ್ತದೆ ನಾವು ಎಲ್ಲರೂ ಒಟ್ಟಾಗಿ ಸಮರ್ಥ ,ಸಶಕ್ತ ಮತ್ತು ಆರೋಗ್ಯವಂತ ಭಾರತ ನಿರ್ಮಾಣ ಮಾಡಬೇಕು.ಎಂದು ಹೇಳಿದರು.

ಇದೇ ಸಂಧರ್ಭದಲ್ಲಿ ಯೋಗ ತರಬೇತುದಾರ ರವಿ ಅಂಬೇಕರ್ ಗ್ರಾಮಸ್ಥರಿಗೆ ಯೋಗ ತರಬೇತಿ ನೀಡಿದರು. ಆಶಾ ಕಾರ್ಯಕರ್ತೆ ಸಿದ್ದಮ್ಮ, ಅಂಗನವಾಡಿ ಶಿಕ್ಷಕಿ ಗೀತಮ್ಮ, ಸಹಾಯಕಿ ಕಾವ್ಯಶ್ರೀ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# 405 ಅಡಿ ಎತ್ತರದ ಸುಮೇರು ಪರ್ವತ ಲೋಕಾರ್ಪಣೆ

• **ಉದಯವಾಹಿನಿ, ಹುಬ್ಬಳ್ಳಿ**


ಉದಯವಾಹಿನಿ ಚಿತ್ರ

ನಿರಂತರ ದಾಳಿಗಳ ನಡುವೆಯೂ ನಮ್ಮ ದೇಶದ ಆಧ್ಯಾತ್ಮಿಕ ಶಕ್ತಿಯನ್ನು ಸಾವಿರಾರು ವರ್ಷಗಳಿಂದ ಕಾಪಾಡಲಾಗುತ್ತಿದೆ. ಇದು ಅಣು ಶಕ್ತಿಗಿಂತ ಹೆಚ್ಚು ಬಲಶಾಲಿ ಎಂದು ಉಪರಾಷ್ಟ್ರಪತಿ ಜಗದೀಪ ಧನಕರ್ ಹೇಳಿದರು. ಇಲ್ಲಿಗೆ ಸಮೀಪದ ವರೂರು ನವಗ್ರಹ ಕ್ಷೇತ್ರದಲ್ಲಿ ಗುರುವಾರ ನಡೆದ 405 ಅಡಿ ಎತ್ತರದ ಸುಮೇರು ಪರ್ವತ ಜಿನ ಬಿಂಬಗಳ ಪಂಚ ಕಲ್ಯಾಣಕ ಪ್ರತಿಷ್ಠಾ ಮಹಾ ಮಹೋತ್ಸವದಲ್ಲಿ ಮಾತನಾಡಿದ ಅವರು, ಆಧ್ಯಾತ್ಮಿಕವು ಶಕ್ತಿಯುತವಾಗಿ ಬೆಳೆಯಲು, ಉಳಿಯಲು ನಮ್ಮ ದೇವಸ್ಥಾನಗಳೇ ಕಾರಣ ಎಂದರು. ಶತ್ರು ರಾಷ್ಟ್ರಗಳಿಂದ ನಮ್ಮ ದೇಶದ ಸಂಸ್ಕೃತಿ, ಪರಂಪರೆಗೆ ಸವಾಲು ಎದುರಾಗಿವೆ. ಇವುಗಳನ್ನು ಮೆಟ್ಟಿ ನಿಂತು ಸಂಸ್ಕೃತಿ ಮತ್ತು ಸಂಪತ್ತು ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ. ದೇಶದ ಶಾಂತಿ ಕದಡುವ ರಾಷ್ಟ್ರ ವಿರೋಧಿ ಶಕ್ತಿಗಳಿಗೆ ಆಸ್ಪದ ಕೊಡಬಾರದು. ಇಂತಹ ಶಕ್ತಿಗಳನ್ನು ದಮನ ಮಾಡಬೇಕು. ಇದನ್ನು ನಮ್ಮ ಧರ್ಮ ಹೇಳಿಕೊಟ್ಟಿದೆ ಎಂದರು. ನಮ್ಮ ನಾಗರಿಕತೆಯು 5,000 ವರ್ಷಗಳಷ್ಟು ಹಿಂದಿನದ್ದು. ಪ್ರಾಚೀನ ದೇವಾಲಯಗಳಿಂದ ಆಧುನಿಕ ತಂತ್ರಜ್ಞಾನದವರೆಗೆ ನಾವು ಭೌತಿಕ ಉನ್ನತಿ ಹಾಗೂ ಅಧ್ಯಾತ್ಮಿಕ ವಿಕಾಸ ಸಮತೋಲನ ಕಾಪಾಡಿಕೊಂಡು ಬಂದಿದ್ದೇವೆ. ಶಾಂತಿ, ನೆಮ್ಮದಿಯ ಜೀವನ ನಡೆಸಲು ಇವೆರಡೂ ಅವಶ್ಯ ಎಂದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, ವರೂರು ಗ್ರಾಮದ 40 ಎಕರೆ ಜಾಗದಲ್ಲಿ ಗುಣಧರ ನಂದಿ ಮಹಾರಾಜರು ನವಗ್ರಹ ತೀರ್ಥ ಕ್ಷೇತ್ರ ರಚಿಸಿದ್ದಾರೆ. ಧರ್ಮ, ಸಂಸ್ಕೃತಿ ಹಾಗೂ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸುಮೇರು ಪರ್ವತದ ಲೋಕಾರ್ಪಣೆಯು ಧರ್ಮ ಹಾಗೂ ಆಧ್ಯಾತ್ಮಿಕ ಪ್ರಚಾರದಲ್ಲಿ ಮಹತ್ವದ ಪಾತ್ರ ವಹಿಸಲಿದೆ' ಎಂದರು.

ನವಗ್ರಹ ತೀರ್ಥ ಕ್ಷೇತ್ರದ ಆಚಾರ್ಯ ಗುಣಧರ ನಂದಿ ಮಹಾರಾಜರು ಮಾತನಾಡಿ, ಸುಮೇರು ಪರ್ವತ ಲೋಕಾರ್ಪಣೆಗೊಳ್ಳುವ ಮೂಲಕ ನನ್ನ ಕನಸು ಸಾಕಾರಗೊಂಡಿದೆ ಎಂದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, ಗುಣಧರ ನಂದಿ ಮಹಾರಾಜರು ಈ ಕ್ಷೇತ್ರವನ್ನು ಜೈನ ಧರ್ಮ ಹಾಗೂ ಮಹಾವೀರ ತೀರ್ಥಂಕರರ ಆಚಾರ ವಿಚಾರಗಳನ್ನು ಬಿತ್ತರಿಸುವಂತಹ ಧಾರ್ಮಿಕ ಕೇಂದ್ರವನ್ನಾಗಿ ರೂಪಿಸಿದ್ದಾರೆ. ಧಾರ್ಮಿಕ ಕ್ಷೇತ್ರದ ಜೊತೆಗೆ ಶೈಕ್ಷಣಿಕ ಕೇಂದ್ರವನ್ನಾಗಿಯೂ ಬೆಳೆಸಿದ್ದಾರೆ ಎಂದರು.

# ಪೋಕ್ಸೋ ಆರೋಪಿ ಕಾಲಿಗೆ ಗುಂಡು

• **ಉದಯವಾಹಿನಿ, ಬಳ್ಳಾರಿ**

ತೋರಣಗಲ್‌ನಲ್ಲಿ ಇತ್ತೀಚೆಗೆ ನಡೆದ ಬಾಲಕಿ ಮೇಲಿನ ಅತ್ಯಾಚಾರ ಪ್ರಕರಣದ ಪಂಚನಾಮೆ ವೇಳೆ ಹಲ್ಲೆ ಮಾಡಿ ತಪ್ಪಿಸಿಕೊಳ್ಳಲು ಯತ್ನಿಸಿದ ಮಂಜುನಾಥ (26) ಎಂಬ ಆರೋಪಿಯ ಕಾಲಿಗೆ ಪೊಲೀಸರು ಗುಂಡು ಹೊಡದಿದ್ದಾರೆ.


ಹೊಸಪೇಟೆ ತಾಲ್ಲೂಕಿನ ಕಮಲಾಪುರದ ಮಂಜುನಾಥನನ್ನು ಬಂಧಿಸಲಾಗಿದ್ದು, ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಆರೋಪಿಯು ಕೃತ್ಯವೆಸಗಿ, ತಲೆಮರೆಸಿಕೊಂಡಿದ್ದ.

ಬುಧವಾರ ರಾತ್ರಿ ಆತನನ್ನು ಹುಲಿಗಿ ಎಂಬಲ್ಲಿ ಬಂಧಿಸಿ ತೋರಣಗಲ್ಲಿಗೆ ಕರೆತರಲಾಗಿತ್ತು.

ಗುರುವಾರ ಬೆಳಿಗ್ಗೆ ಪಂಚನಾಮೆಗೆಂದು ದರೋಜಿಯ ಮಾವಿನ ತೋಪಿಗೆ ಕರೆದೊಯ್ದಾಗ ಆತ ಪೊಲೀಸ್ ಸಿಬ್ಬಂದಿ ರಘುಪತಿ ಎಂಬುವರ ಮೇಲೆ ಹಲ್ಲೆ ಮಾಡಿ ತಪ್ಪಿಸಿಕೊಳ್ಳಲು ಯತ್ನಿಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

# ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿವಿಯ ಪ್ರಾದೇಶಿಕ ಕಚೇರಿಗೆ ಸಿಎಂ ಶಂಕು ಸ್ಥಾಪನೆ

• **ಉದಯವಾಹಿನಿ, ಮಂಗಳೂರು**


ಉದಯವಾಹಿನಿ ಚಿತ್ರ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಳೆದ ಬಜೆಟ್‌ನಲ್ಲಿ ಘೋಷಿಸಿದ್ದಂತೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕಚೇರಿಗೆ ಇಂದು ಶಂಕು ಸ್ಥಾಪನೆ ನೆರವೇರಿಸಿ ಮತ್ತೊಮ್ಮೆ ನುಡಿದಂತೆ ನಡೆದ ಮುಖ್ಯಮಂತ್ರಿ ಎನ್ನುವ ಹೆಗ್ಗಳಿಕೆಯನ್ನು ಮುಂದುವರೆಸಿದ್ದಾರೆ.

ಶಂಕುಸ್ಥಾಪನೆ ನೆರವೇರಿಸಿದ ಬಳಿಕ ಮಾತ ನಾಡಿದ ಮುಖ್ಯಮಂತ್ರಿಗಳು, ರಾಜೀವ್ ಗಾಂಧಿ ವಿವಿ, ಏಷ್ಯಾದ ಅತ್ಯಂತ ದೊಡ್ಡ ಆರೋಗ್ಯ ವಿಶ್ವವಿದ್ಯಾಲಯವಾಗಿದೆ. 3.5 ಲಕ್ಷ ವೈದ್ಯ ವಿದ್ಯಾರ್ಥಿಗಳಿರುವ ಅತ್ಯಂತ ದೊಡ್ಡ ಆರೋಗ್ಯ ವಿವಿ ಇದಾಗಿದೆ. ಆದ್ದರಿಂದ ಗುಣಮಟ್ಟದ ವೈದ್ಯರನ್ನು ರೂಪಿಸುವುದರ ಜೊತೆಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವಲ್ಲಿ ರಾಜೀವ್ ಗಾಂಧಿ ವಿವಿಯ ಕೊಡುಗೆ ಅಪಾರವಾಗಿದೆ ಎಂದರು.

ಜಿಲ್ಲೆಗೊಂದು ಸರ್ಕಾರಿ ವೈದ್ಯಕೀಯ ಕಾಲೇಜು ಇರಬೇಕು ಎನ್ನುವುದು ನನ್ನ ಗುರಿ. ಮಂಗಳೂರಿನಲ್ಲಿ ಉತ್ತಮ ಆರೋಗ್ಯ ಸೇವೆ ಇದ್ದರೂ, ಈ ಜಿಲ್ಲೆಗೂ ಸರ್ಕಾರಿ ವೈದ್ಯಕೀಯ ಕಾಲೇಜಿನ ಅಗತ್ಯ ಇದೆ. ಈ ದಿಕ್ಕಿನಲ್ಲೂ ಸರ್ಕಾರ ಯೋಚಿಸಿ ಕ್ರಮ ಕೈಗೊಳ್ಳಲಿದೆ.

ರಾಜೀವ್ ಗಾಂಧಿ ಆರೋಗ್ಯ ವಿವಿಯು ಆರೋಗ್ಯ ಸೇವೆ ಸರಳವಾಗಿ ಜನರಿಗೆ ಸಿಗುವ ದಿಕ್ಕಿನಲ್ಲಿ ಸಂಶೋಧನೆಗಳನ್ನು ಹೆಚ್ಚೆಚ್ಚು ನಡೆಸಬೇಕು. ದೇಶದ ಅತ್ಯುತ್ತಮ ಆರೋಗ್ಯ ಸೇವೆ ಬಡವರಿಗೂ ಸುಲಭವಾಗಿ ಸಿಗುವಂತೆ ಮಾಡಬೇಕು ಎಂದು ಅವರು ಕರೆ ನೀಡಿದರು.

> **ಉಚಿತ ಸೇವೆ**
>
> **ಬಿಪಿಎಲ್ ಕಾರ್ಡ್ ಇದ್ದವರಿಗೆ ಎಲ್ಲಾ ರೀತಿಯ ಆರೋಗ್ಯ ಸೇವೆಯನ್ನು ಉಚಿತವಾಗಿ ನೀಡಬೇಕು ಎನ್ನುವ ಸೂಚನೆಯನ್ನು ವೈದ್ಯಕೀಯ ಕಾಲೇಜುಗಳಿಗೆ ನೀಡಲಾಗಿದೆ ಎಂದರು. ಬಡವರಿಗೂ ಕೂಡ ದೊಡ್ಡ ದೊಡ್ಡ ಕಾಯಿಲೆಗಳು ಬರುತ್ತಿವೆ. ಕಿಡ್ನಿ ಕಸಿಗೆ 5000 ಮಂದಿ ಸಾಲಿನಲ್ಲಿದ್ದಾರೆ. ಕಿಡ್ನಿ ದಾನಿಗಳು ಸಿಕ್ಕರೆ ನಿತ್ಯ ಕಿಡ್ನಿ ಕಸಿ ಮಾಡುವ ನುರಿತ ವೈದ್ಯರ ತಂಡ ನಮಲ್ಲಿದೆ. ಇಂದು ನಾನು ಶಂಕುಸ್ಥಾಪನೆ ನೆರವೇರಿಸಿರುವ ಪ್ರಾದೇಶಿಕ ಕಚೇರಿಯ ನಿರ್ಮಾಣ ಮತ್ತು ಕಾರ್ಯಕ್ಷಮತೆ ಎರಡೂ ಗುಣಮಟ್ಟದಲ್ಲಿರಬೇಕು ಎಂದು ಸೂಚಿಸಿದರು.**

> **ಸರ್ಕಾರಿ ಆಸ್ಪತ್ರೆಗಳಲ್ಲೂ ಖಾಸಗಿ ಆಸ್ಪತ್ರೆಗಳ ಮಾದರಿಯಲ್ಲಿ ಶುಚಿತ್ವ ಮತ್ತು ನಿರ್ವಹಣೆ ಕಾಪಾಡುವ ಜೊತೆಗೆ ಗುಣಮಟ್ಟದ ಚಿಕಿತ್ಸಾ ಸೌಲಭ್ಯ ಸಿಗುವಂತಾಗಬೇಕು. ಶ್ರೀಮಂತರು, ನಮಂಥ ರಾಜಕಾರಣಿಗಳೂ ಸರ್ಕಾರಿ ಆಸ್ಪತ್ರೆಗೆ ಬರುವಂತಾಗಬೇಕು ಎನ್ನುವ ದಿಕ್ಕಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇವೆ ಎಂದರು.**

ಈ ಕ್ಷೇತ್ರದ ಡಿಪ್ಲೊಮಾ ಮತ್ತು ಇತರ ಕೋರ್ಸ್‌ಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಕೌಶಲ್ಯ ತರಬೇತಿ ನೀಡಲಾಗುತ್ತಿದೆ. ವೈದ್ಯ ವಿಜ್ಞಾನ ಪದವೀಧರರೂ ಯುವ ನಿಧಿಗೆ ಅರ್ಹತೆ ಗಳಿಸಿದ್ದಾರೆ. ವೈದ್ಯ ವಿದ್ಯಾರ್ಥಿಗಳು ಇತರ ಕ್ಷೇತ್ರಗಳಿಗೆ ವಲಸೆ ಹೋಗದೆ ಆರೋಗ್ಯ ಕ್ಷೇತ್ರದಲ್ಲೇ ತಮ ಸೇವೆ ಸಲ್ಲಿಸಬೇಕು ಎಂದು ಕರೆ ನೀಡಿದರು. ಬಿಪಿಎಲ್‌ಇದ್ದವರಿಗೆ

# ಬೆಳಗಾವಿ ಅಧಿವೇಶನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲು ಕರೆ

• **ಉದಯವಾಹಿನಿ, ಹರಿಹರ**


ಉದಯವಾಹಿನಿ ಚಿತ್ರ

ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳು ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ ಸಚಿವ ಪ್ರಿಯಾಂಕಾ ಖರ್ಗೆರನ್ನು ಗುರಿಯಾಗಿಸಿ ಆಧಾರ ರಹಿತ ಆರೋಪದಲ್ಲಿ ತೊಡಗಿವೆ ಇದನ್ನು ಖಂಡಿಸಿ ರಾಜ್ಯದಾದ್ಯಂತ ಪ್ರತಿಭಟಿಸಲಾಗುವುದು ಎಂದು ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿಜಯಕುಮಾರ್ ಹೇಳಿದರು.

ನಗರದ ರಚನಾ ಕ್ರೀಡಾ ಟ್ರಸ್ಟ್ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದಿದ್ದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವದ ಸ್ಮರಣೆಯಲ್ಲಿ ಬೆಳಗಾವಿಯಲ್ಲಿ ಜ.21ರಂದು ನಡೆಯುವ ಅಧಿವೇಶನಕ್ಕೆ ರಾಜ್ಯದ ಪ್ರತಿ ವಿಧಾನಸಭಾ ಕ್ಷೇತ್ರದಿಂದ ಕನಿಷ್ಟ 200 ಜನ ಪಕ್ಷದ ಕಾರ್ಯಕರ್ತರು ಭಾಗವಹಿಸಲಿದ್ದಾರೆಂದು ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿಜಯಕುಮಾ ಬಾಪು, ಜೈ ಭೀಮ್, ಜೈ ಸಂವಿಧಾನ್ ಘೋಷ ವಾಕ್ಯದಡಿ ಈ ಐತಿಹಾಸಿಕ ಅಧಿವೇಶನ ಆಯೋಜಿಸಿದೆ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಪ್ರಿಯಾಂಕ ಗಾಂಧಿ ವಾದ್ರ, ಮುಖ್ಯಮಂತಿ, ಉಪ ಮುಖ್ಯಮಂತ್ರಿ ಸೇರಿದಂತೆ ಎಐಸಿಸಿ, ಕೆಪಿಸಿಸಿ ಪದಾಧಿಕಾರಿಗಳು, ಮುಖಂಡರು ಭಾಗವಹಿಸುವರು ಎಂದು ಮಾಹಿತಿ ನೀಡಿದರು.

ಅಧಿವೇಶನಕ್ಕೆ ಬರುವವರಿಗೆ ಪಕ್ಷದ ವತಿಯಿಂದ ವಾಹನ ವ್ಯವಸ್ಥೆ ಮಾಡಿರುವುದಿಲ್ಲ. ಆಸಕ್ತರು ಅವರವರ ವ್ಯವಸ್ಥೆಯಲ್ಲಿ ಬರಬೇಕಿದೆ ಎಂದರು.

ಮಾಜಿ ಶಾಸಕ ಎಸ್.ರಾಮಪ್ಪ ಹರಿಹರ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್ ನಿಖಿಲ್ ಕೊಂಡಜ್ಜಿ, ಕೆಪಿ ಸಿಸಿ ವಕ್ತಾರ ರೇವಣಸಿದ್ದಪ್ಪ ಮಾತನಾಡಿದರು.

> **ಬ್ರಿಟೀಷರ ಸಂಕೋಲೆಯಿಂದ ಭಾರತವನ್ನು ಬಿಡಿಸಿದ ಶಾಂತಿ ದೂತ ಮಹಾತ್ಮ ಗಾಂಧೀಜಿ, ಅಸ್ಪಷ್ಟತೆ ವಿರುದ್ಧ ಪ್ರಖರ ಧ್ವನಿ ಎತ್ತಿದ ಸಾಮಾಜಿಕ ನ್ಯಾಯದ ಹರಿಕಾರ ಡಾ.ಬಿ.ಆರ್. ಅಂಬೇಡ್ಕರ್, ದೇಶಕ್ಕೆ ಜಾತ್ಯಾತೀತ, ಸಾರ್ವಭೌಮ, ಸಮಾನತೆಯ ಸ್ಥಾನ ನೀಡಿದ ಸಂವಿಧಾನದ ಮಹತ್ವವನ್ನು ಸಾರಲು ಈ ಅಧಿವೇಶನ ಮುಡುಪಾಗಿರುತ್ತದೆ ಎಂದರು.**

# ಬರಡು ನೆಲದಲ್ಲಿ ಕೈಹಿಡಿದ ಮಿಶ್ರ ಬೇಸಾಯ

• **ಉದಯವಾಹಿನಿ, ಸಿರುಗುಪ್ಪ**


ಉದಯವಾಹಿನಿ ಚಿತ್ರ

ಸಿರುಗುಪ್ಪ ತಾಲ್ಲೂಕಿನ ಶಾನವಾಸಪುರ ಗ್ರಾಮದ ರೈತ ಮಹಿಳೆ ಶಂಶಾದ್ ಬೇಗಂ ಮಿಶ್ರ ಬೇಸಾಯದಿಂದ ಉತ್ತಮ ಆದಾಯ ಗಳಿಸುತ್ತಿದ್ದಾರೆ. 10 ಎಕರೆ ಭೂಮಿಯಲ್ಲಿ ಎರಡು ಕೊಳವೆ ಬಾವಿಗಳ ಮೂಲಕ ಹನಿ ನೀರಾವರಿ ಪದ್ಧತಿ ಅಳವಡಿಸಿಕೊಂಡಿರುವ ಶಂಶಾದ್ ಬೇಗಂ, 8 ಎಕರೆಯಲ್ಲಿ ಅಂಜೂರ, 2 ಎಕರೆಯಲ್ಲಿ ಬೀನ್ಸ್ ಬೆಳೆದಿದ್ದಾರೆ. ಅಲ್ಲದೆ ತೋಟದಲ್ಲಿ ನುಗ್ಗೆ ಗಿಡಗಳು, ಹುಣಸೆ ಮರಗಳು, ಲೆಮನ್ ಗ್ರಾಸ್ (ಸುಗಂಧಿತ ಟೀ ಹುಲ್ಲು), ಸೀತಾಫಲ ಬೆಳೆಗಳನ್ನು ಬೆಳೆಯುತ್ತಾರೆ. ಅಲ್ಲದೆ, ಅರಣ್ಯ ಬೆಳೆಗಳಾದ 160 ತೆಂಗಿನ ಮರ, ಮಾವು-15, ರಕ್ತಚಂದನ-38, ಬಿದಿರು-60, ಸೀತಾಫಲ-600, ಹಲಸು 15, ಸಿಲ್ವರ್ ವುಡ್-80, ತೇಗ-30, ಶ್ರೀಗಂಧ-15, ಡ್ರಾಗನ್ ಫ್ರೂಟ್- 200 ಮತ್ತು ಜಂಬೂ ನೇರಳೆ 300 ಗಿಡಗಳನ್ನು ಬೆಳೆದು ಅಚ್ಚರಿ ಮೂಡಿಸಿದ್ದಾರೆ. ಎರಡು ಎಕರೆಯ ಬೀನ್ಸ್ ಬೆಳೆಯ ಮೊದಲ ಕಟಾವಿನಲ್ಲಿ ಆರು ಕ್ವಿಂಟಲ್ ಇಳುವರಿ ಪಡೆದು ಖರ್ಚು ಕಳೆದ 30 ಸಾವಿರ ಲಾಭ ಗಳಿಸಿದ್ದಾರೆ. ಮುಂದಿನ ಬೆಳೆಯಲ್ಲಿ ಸಂಪೂರ್ಣ ಲಾಭ ಸಿಗಲಿದೆ' ಎನ್ನುತ್ತಾರೆ ಶಂಶಾದ್ ಬೇಗಂ.

ಅಂಜೂರ ಬೆಳೆಯಲ್ಲಿ ನಿತ್ಯ ಸರಾಸರಿ 15 ಬಾಕ್ಸ್ ಇಳುವರಿ ಬರುತ್ತಿದೆ. ಒಂದು ಬಾಕ್ಸ್ 400ರಂತೆ ದಿನಕ್ಕೆ 6 ಸಾವಿರ ಆದಾಯ ಬರುತ್ತಿದೆ. ದಿನಕ್ಕೆ 2ರಿಂದ 2.5 ಸಾವಿರ ಖರ್ಚು ಇದೆ' ಎಂದು ಶಂಶಾದ್ ಬೇಗಂ ಅವರ ಮಗ ಎಂ. ಅಹ್ಮದ್ ಬಾಷ ಹೇಳುತ್ತಾರೆ. ಜಮೀನು ಸುತ್ತಲು ಬಿದಿರು, ಮಹಾಗನಿ, ತೆಂಗು, ಹುಣಸೆ, ಬೇವು, ನುಗ್ಗೆ, ಡ್ರಾಗನ್ ಫ್ರೂಟ್ ಗಿಡ ಗಳನ್ನು, ಅಲಸಂದೆಯನ್ನು ಜೈವಿಕ ಬೇಲಿಯಾಗಿ ಬೆಳೆಸಿದ್ದಾರೆ. ಇವುಗಳಿಂದ ಫಸಲನ್ನು ಎಪಿಎಂಸಿಗೆ ಮಾರಾಟ ಮಾಡಿ ನಿತ್ಯ 3-4 ಸಾವಿರ ಹಣ ಗಳಿ ಸುತ್ತಿದ್ದಾರೆ. ವಿದ್ಯುತ್ ಸಂಪರ್ಕ ದೊರೆತಲ್ಲಿ ಮುಂದೆ ಕೋಳಿ ಮತ್ತು ಕುರಿ ಸಾಕಣೆಗೆ ಒತ್ತು ನೀಡಲಾಗುವುದು ಎಂದರು.

# ನಾಲ್ಕು ಚಕ್ರದ ಬಂಡಿಯನ್ನು ಉಚಿತವಾಗಿ ವಿತರಿಸುವ ಕಾರ್ಯ ಶ್ಲಾಘನೀಯ

## ತಳ್ಳುವ ಬಂಡಿ ಪಡೆದ ಫಲಾನುಭವಿಗಳು ಸದುಪಯೋಗ ಪಡೆದು ಆರ್ಥಿಕವಾಗಿ ಬಲಿಷ್ಠರಾಗಿ: ಕಟ್ಟಿಮನಿ

• **ಉದಯವಾಹಿನಿ , ಚಿಂಚೋಳಿ**


ಉದಯವಾಹಿನಿ ಚಿತ್ರ

**ಬಡವ ಬಡವನಾಗಿ ಇರಬಾರದು**

ತಳ್ಳುವ ಬಂಡಿಯ ಮೂಲಕ ಜೀವನ ಸಾಧಿಸುವ ಬಡ ವ್ಯಾಪಾರಿಗಳನ್ನು ಗುರಿತಿಸಿ ಅವರನ್ನು ಆರ್ಥಿಕವಾಗಿ ಶಕ್ತಿ ತುಂಬಲು ನಾಲ್ಕು ಚಕ್ರದ 50 ತಳ್ಳುವ ಬಂಡಿಯನ್ನು ಎಲ್ಲಾ ವರ್ಗದಲ್ಲಿ ಅರ್ಹ ಫಲಾನುಭವಿಗಳಿಗೆ ಉಚಿತವಾಗಿ ಸಫಾ ಬೈತುಲ್ಲಾ ಮಾಲ್ ನೇತೃತ್ವದಲ್ಲಿ ರಹಭಾರ್ ಪೌಂಡೇಶನ್ ವತಿ ಯಿಂದ ವಿತರಿಸುವ ಕಾರ್ಯ ಮಾಡುತ್ತಿರುವುದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದೆ ಎಂದು ಹಿರಿಯ ಮುಖಂಡ ಗೋಪಾಲರಾವ ಕಟ್ಟಿಮನಿ ಹೇಳಿದರು.

ಪಟ್ಟಣದ ಜಬ್ಬಾರ್ ಮಸೀದಿಯ ಆವರಣದಲ್ಲಿ ಸಫಾ ಬೈತುಲ್ಲಾ ಮಾಲ್ ನೇತೃತ್ವದಲ್ಲಿ ರಹಭಾರ್ ಪೌಂಡೇಶನ್ ವತಿಯಿಂದ ಹಮ್ಮಿಕೊಂಡ 50 ಜನ ಎಲ್ಲಾ ವರ್ಗದ ಫಲಾನುಭವಿಗಳ ಬಡ ವ್ಯಾಪಾರಿಗಳಿಗೆ ಗುರುತಿಸಿ ತಳ್ಳುವ ಬಂಡಿಯನ್ನು ಉಚಿತವಾಗಿ ವಿತರಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಳ್ಳುವ ಬಂಡಿಯಿಂದ ದಿನನಿತ್ಯ ವ್ಯಾಪಾರ ವಹಿವಾಟು ಮಾಡಿಕೊಂಡು ಜೀವನ ಸುಗಮವಾಗಿ ಸಾಗಿಸಲು ಅನುಕೂಲವಾಗುತ್ತದೆ ಇದನ್ನು ಫಲಾನುಭವಿಗಳು ಪಡೆದುಕೊಂಡು ಸದುಪಯೋಗ ಪಡೆದುಕೊಂಡು ಆರ್ಥಿಕವಾಗಿ ಬಲಿಷ್ಠರಾಗಬೇಕು ಎಂದರು.

ಅಬ್ದುಲ್ ಬಾಷೀದ್ ಮಾತನಾಡಿ ರಹಭಾರ್ ಪೌಂಡೇಶನ್ ಸಫಾ ಬೈತುಲ್ಲಾ ಮಾಲ್ ನೇತೃತ್ವದಲ್ಲಿ ಬಡವರಿಗೆ ತಳ್ಳುವ ಬಂಡಿ ವಿತರಿಸಿ ಒಂದು ಉದ್ಯೋಗ ನೀಡಿದಂತೆ ಅದರ ಜೋತೆಯಲ್ಲಿ ಬಂಡಿಯಲ್ಲಿ ಮಾರಾಟ ಮಾಡುವ ತರಕಾರಿ, ಹಣ್ಣುಹಂಪಲು, ಸ್ಟೇಷನರಿ ಸಾಮಾನು ಜೋತೆ ಬಂಡಿ ವಿತರಿಸುವುದು ನೋಡಿದರೆ ಬಡವ ಬಡವವಾಗಿ ಇರಬಾರದು ಎಲ್ಲಾರ ಜೊತೆ ಸಮಾನವಾಗಿ ಜೀವನ ಸಾಗಿಸಬೇಕು ಎಂಬ ದೃಷ್ಟಿಯಲ್ಲಿ ವಿತರಣೆ ಮಾಡುತ್ತಿರುವುದು ಅತ್ಯಂತ ದೊಡ್ಡ ಕಾರ್ಯವಾಗಿದೆ.

ತಳ್ಳುವ ಬಂಡಿಯನ್ನು ಪಡೆದ ಫಲಾನುಭವಿಗಳು ತಮ್ಮ ಕಾಯಕದಲ್ಲಿ ಭಕ್ತಿ ಶೃದ್ಧೆಯಿಂದ ಕೆಲಸ ಮಾಡಿದರೆ ಇವರು ವಿತರಿಸಿದ ಬಂಡಿಯಲ್ಲಿ ತುಂಬಿದ ಹಣ್ಣುಹಂಪಲು ಮಾರಾಟ ಮಾಡಿ ಆದಾಯ ಬಂದಿದ ಹಣದಲ್ಲಿ ಹಣ್ಣುಹಂಪಲು ಖರೀದಿಸಿ ಮತ್ತೆ ಮಾರಾಟ ಮಾಡುತ್ತಾ ದಿನನಿತ್ಯ ಮಾಡಿದರೆ ಆರ್ಥಿಕವಾಗಿ ಬಲಿಷ್ಠರಾಗುವುದರಲ್ಲಿ ಯಾವುದೇ ಸಂಶಯವಿಲ್ಲ,ಇದನ್ನು ತಾವೆಲ್ಲರೂ ಸದುಪಯೋಗ ಪಡೆದುಕೊಂಡು ಬದುಕು ಕಟ್ಟಿಕೊಳ್ಳಬೇಕು, ತಮಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಟ್ಟಿದೆ ಇದರಿಂದ ಒಂದು ಕುಟುಂಬ ನೆಮ್ಮದಿಯಿಂದ ಬದುಕಬಹುದು.

ಸಫಾ ಬೈತುಲ್ಲಾ ಮಾಲ್ ಅಧ್ಯಕ್ಷ ಹಾಫೀಜ್ ಇಸ್ಮಾಯಿಲ್ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿ ನಿರೂಪಿಸಿದರು,ಮುಫ್ತಿ ಸಮೀರ್ ವಂದಿಸಿದರು.

ಹಿರಿಯ ಮುಖಂಡ ಕೆ.ಎಂ.ಬಾರಿ,ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಶರಣುಪಾಟೀಲ, ಮತೀನ್ ಸೌಧಾಗಾರ ಮಾತನಾಡಿದರು.

ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ಬುಶೆಟ್ಟಿ, ಶಬ್ಬೀರ ಅಹೇಮದ್, ಲಕ್ಷ್ಮಣ ಆವುಂಟಿ, ಹಾಫೀಜ್ ಅಬ್ದುಲ್ ಹಮೀದ್, ಡಾ.ಜಮಾಲ್, ಖಲೀಲ್ ಪಟೇಲ, ಅಹೇಮದ್ ಸೌದಾಗಾರ, ರೌಫ್ ಸೌದಾಗಾರ, ಸಲಿಂ, ಶ್ರೀನಿವಾಸ ಸೇರಿದಂತೆ ಅನೇಕರಿದ್ದರು.

> **ಸಫಾ ಬೈತುಲ್ಲಾ ಮಾಲ್ ಹೀಗೆ ಅನೇಕ ಕಾರ್ಯ ಗಳು ಮಾಡುತ್ತಾ ಬರುತ್ತೆ ಆದರೆ ಯಾವುದೇ ಪ್ರಚಾರ ಮಾಡುವುದಿಲ್ಲಾ ಯಾಕೆಂದರೆ ಮುಸ್ಲಿಂ ಧರ್ಮದಲ್ಲಿ ಪ್ರಚಾರ ಮಾಡುವುದು ಇಲ್ಲದಿರುವುದು ಕಾರಣವಾಗಿದೆ, ಮಳೆಗಾಲದಲ್ಲಿ ಕೊಡೆಗಳ ವಿತರಣೆ, ಚಳಿಗಾಲದಲ್ಲಿ ಬೆಚ್ಚನೆಯ ಬ್ಲಾಂಕೆಟ್ ಅಥವಾ ಸುಟಾರ್ ವಿತರಣೆ, ರಂಜಾನ್ ಹಬ್ಬದಲ್ಲಿ ಆಹಾರ ಧಾನ್ಯ ಮತ್ತು ಬಟ್ಟೆಗಳು ವಿತರಣೆ, ಬಡವರ ಮದುವೆಗಳಲ್ಲಿ ಆರ್ಥಿಕವಾಗಿ ಸಹಾಯ ಎಲ್ಲಾ ಸಮೂದಾಯದವರಿಗೆ ಎಲ್ಲಾ ಜಾತಿಧರ್ಮದವರಿಗೆ ಹೀಗೆ ಅನೇಕ ಕೆಲಸಗಳು ಮಾಡುತ್ತದೆ ಎಂದರು.**

# ಮಿನಿ ನ್ಯೂಸ್

## ಕೇಂದ್ರ ಕಾರಾಗೃಹದಲ್ಲಿ ಕೈದಿ ಸಾವು

• **ಉದಯವಾಹಿನಿ, ಕಲಬುರಗಿ**

ಇಲ್ಲಿನ ಕೇಂದ್ರ ಕಾರಾಗೃಹದಲ್ಲಿ ಕೈದಿಯೊಬ್ಬ ಮೃತಪಟ್ಟಿದ್ದಾನೆ. ಜೀವಾವಧಿ ಶಿಕ್ಷೆಗೆ ಗುರಿಯಾಗಿ ಶಿಕ್ಷೆ ಅನುಭವಿಸುತ್ತಿದ್ದ ಬಸವರಾಜ ತಂದೆ ನಾಗಯ್ಯಸ್ವಾಮಿ ಮೃತಪಟ್ಟ ಕೈದಿ. ಬೀದರ್ ಜಿಲ್ಲೆಯ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಿಂದ (ಬಸವಕಲ್ಯಾಣ ಪೀಠ) ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಈತನನ್ನು ಕೆಲಕಾಲ ಹುಮನಾಬಾದ ಉಪ ಕಾರಾಗೃಹದಲ್ಲಿ ಇರಿಸಲಾಗಿತ್ತು. 2020ರಲ್ಲಿ ಹುಮನಾಬಾದ ಉಪ ಕಾರಾಗೃಹದಿಂದ ವರ್ಗಾವಣೆಗೊಂಡು ಕಲಬುರಗಿಯ ಕೇಂದ್ರ ಕಾರಾಗೃಹದಲ್ಲಿ ಶಿಕ್ಷೆ ಅನುಭವಿಸುತ್ತಿದ್ದ.

ಜ.16 ರಂದು ಬೆಳಿಗ್ಗೆ ಕಾರಾಗೃಹದ ಬೀಗಮುದ್ರೆ ತೆರವಿನ ಸಮಯದಲ್ಲಿ ದಿನ ನಿತ್ಯದ ಪ್ರಕಾರ ಬಂಧಿಗಳನ್ನು ಎಬ್ಬಿಸಿ ಎಣಿಕೆ ಮಾಡಿ ಲೆಕ್ಕ ಪಡೆಯುವ ಸಮಯದಲ್ಲಿ ಬಸವರಾಜನನ್ನು ಎಬ್ಬಿಸಿದಾಗ ಮೇಲೆ ಏಳಲಿಲ್ಲ. ಆಗ ಆತನ ಆರೋಗ್ಯ ಪರಿಶೀಲಿಸಿ ನೋಡಲಾಗಿ ಪ್ರಜ್ಞೆ ಇರಲಿಲ್ಲ ಮತ್ತು ಮಾತನಾಡುತ್ತಿರಲಿಲ್ಲ. ತಕ್ಷಣ ಆತನನ್ನು ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿನ ವೈದ್ಯಾಧಿಕಾರಿಗಳು ಪರೀಕ್ಷೆ ನಡೆಸಿ ಕೈದಿ ಬಸವರಾಜ ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ ಎಂದು ಕಾರಾಗೃಹದ ಪ್ರಭಾರಿ ಮುಖ್ಯ ಅಧೀಕ್ಷಕ ಬಿ.ಸುರೇಶ ಫರಹತಾಬಾದ ಪೊಲೀಸ್ ಠಾಣೆಯಲ್ಲಿ ಸಲ್ಲಿಸಿರುವ ದೂರಿನಲ್ಲಿ ತಿಳಿಸಿದ್ದಾರೆ.

## ಕೈದಾಳೆ- ಗಿರಿಯಾಪುರ ಗ್ರಾಮಕ್ಕೆ ಸಾರಿಗೆ ಬಸ್ ವ್ಯವಸ್ಥೆ

• **ಉದಯವಾಹಿನಿ, ದಾವಣಗೆರೆ**

ತಾಲ್ಲೂಕಿನ ಕೈದಾಳೆ ಹಾಗೂ ಗಿರಿಯಾಪುರ ಗ್ರಾಮದ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರ ಅನುಕೂಲಕ್ಕಾಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್ ಎಸ್ ಮಲ್ಲಿಕಾರ್ಜುನ್, ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರ ಸೂಚನೆಯ ಮೇರೆಗೆ ಶಕ್ತಿ ಯೋಜನೆಯಡಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.ಇದರಿಂದ ಸಂತಸಗೊಂಡ ಗ್ರಾಮಸ್ಥರು, ವಿದ್ಯಾರ್ಥಿಗಳು ಸಚಿವರು, ಸಂಸದರಿಗೆ ಧನ್ಯವಾದ ಅರ್ಪಿಸಿದ್ದಾರೆ.

ಶಾಲಾ- ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಮತ್ತು ನಾಗರಿಕ ಬಂಧುಗಳಿಗೆ ಅನುಕೂಲವಾಗುವಂತೆ ದಿನಕ್ಕೆ ಊರಿ ನೊಳಗೆ ಎರ ಡು ಸಾರಿ ಬೆಳಗ್ಗೆ ಮತ್ತು ಸಾಯಂಕಾಲ ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚಾರ ವ್ಯವಸ್ಥೆಗೆ ಅನುವು ಮಾಡಿಕೊಡಲಾಯಿತು ಮಹಿಳೆಯರು ವಿದ್ಯಾರ್ಥಿಗಳು ಕೈದಾಳೆ ಗ್ರಾಮಸ್ಥರು ಈ ಶಕ್ತಿ ಯೋಜನೆಗೆ ಸಹಕರಿಸಿದ ಸಾರಿಗೆ ಇಲಾಖೆ ಸಿಬ್ಬಂದಿ ವರ್ಗದವರಿಗೆಅಭಿನಂದನೆ ಸಲ್ಲಿಸಿದ್ದಾರೆ. ಈ ವೇಳೆ ಗ್ಯಾರಂಟಿ ಯೋಜನೆಯ ಜಿಲ್ಲಾ ಸದಸ್ಯರಾದ ಕೈದಾಳ್ ಶಿವಶಂಕರ್ ಉಪಸ್ಥಿತರಿದ್ದರು.

## ಕಾರು ಪಲ್ಟಿ; ಇಬ್ಬರಿಗೆ ಗಾಯ

• **ಉದಯವಾಹಿನಿ, ಕಿನ್ನಿಗೋಳಿ**

ನಿಯಂತ್ರಣ ತಪ್ಪಿ ಲಕ್ಸುರಿ ಕಾರೊಂದು ಪಲ್ಟಿಯಾದ ಘಟನೆ ಜ.17ರ ಶುಕ್ರವಾರ ಬೆಳಿಗ್ಗೆ ಸುಮಾರು 3 ಗಂಟೆಗೆ ಮುಂಡ್ಕೂರು- ಜಾರಿಗೆಕಟ್ಟೆ ಚರ್ಚ್ ಬಳಿ ನಡೆದಿದೆ. ಕಾರು ಶಿವಮೊಗ್ಗದಿಂದ ಮಂಗಳೂರಿಗೆ ಪ್ರಯಾಣಿಸುತಿತ್ತು. ಕಾರಿನಲ್ಲಿದ್ದ ಇಬ್ಬರಿಗೆ ಸಣ್ಣ-ಪುಟ್ಟ ಗಾಯಗಳಾಗಿವೆ.

ಒಬ್ಬ ಗಂಭೀರ ಗಾಯಗೊಂಡಿದ್ದಾರೆ ಎಂದು ತಿಳಿದು ಬಂದಿದೆ. ಕಟೀಲು ಪಾದಯಾತ್ರೆ ನಡೆಸುತ್ತಿರುವ ಭಕ್ತರು ಕೂಡಲೇ ಸಮಾಜ ಸೇವಕ ಕೆದಿಂಜೆ ಸುಪ್ರಿತ್ ಶೆಟ್ಟಿಗೆ ಮಾಹಿತಿ ನೀಡಿದ್ದು, ತಕ್ಷಣ ಸ್ಪಂದಿಸಿದ ಅವರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಗಾಯಳುಗಳನ್ನು ಕಿನ್ನಿಗೋಳಿ ಆಸ್ಪತ್ರೆಗೆ ದಾಖಲಿಸಲು ನೆರವಾದರು.

## ಎಲ್ಲಾ ರಾಜ್ಯಗಳು ರಾಷ್ಟ್ರೀಯ ಶಿಕ್ಷಣ ನೀತಿ ಅನುಸರಿಸಬೇಕು: ರಾಜ್ಯಪಾಲ

• **ಉದಯವಾಹಿನಿ, ಬಳ್ಳಾರಿ**

ಭಾರತ ಸರ್ಕಾರವು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸಿದೆ. ಇದನ್ನು ಎಲ್ಲಾ ರಾಜ್ಯಗಳು ಅನುಸರಿಸುವಂತೆ ಆಗಬೇಕು. ಕರ್ನಾಟಕದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಅನುಸರಿಸುವಂತೆ ರಾಜ್ಯ ಸರ್ಕಾರವನ್ನು ಆಗ್ರಹಿಸುತ್ತೇನೆ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಹೇಳಿದರು. ಕುರುಗೋಡು ತಾಲ್ಲೂಕಿನ ದಮ್ಮೂರಿನಲ್ಲಿ ಶುಕ್ರವಾರ ಖಾಸಗಿ ವಿದ್ಯಾಸಂಸ್ಥೆಯ ವಾರ್ಷಿಕೋತ್ಸವದಲ್ಲಿ ಭಾಗವಹಿಸಿದ್ದ ಅವರು ಮಾತನಾಡಿದರು. ಪ್ರಾದೇಶಿಕ ಭಾಷೆಗೆ ಹೊಸ ಶಿಕ್ಷಣ ನೀತಿಯು ಪ್ರಾಮುಖ್ಯತೆ ನೀಡಿದೆ. ಮಾತೃಭಾಷೆಯಲ್ಲಿ ಎಲ್ಲರೂ ಶಿಕ್ಷಣ ಪಡೆಯುವಂತಾಗಬೇಕು. ಕನ್ನಡದಲ್ಲಿ ಶಿಕ್ಷಣ ಪಡೆದುಕೊಳ್ಳಬೇಕು. ಆಂಗ್ಲ ಅಥವ ಇತರೆ ಭಾಷೆಗಳ ವ್ಯಾಮೋಹ ಹಾಗೂ ತಪ್ಪು ಗ್ರಹಿಕೆಯನ್ನು ದೂರ ಮಾಡಬೇಕು ಎಂದರು. ಭಾರತದ ಅರ್ಥವ್ಯವಸ್ಥೆಯು ವಿಶ್ವದ ಐದನೇ ಸ್ಥಾನದಲ್ಲಿದೆ. ಭಾರತ ಸರ್ಕಾರ ಇದನ್ನು ಮೂರನೇ ಸ್ಥಾನಕ್ಕೆ ತರುವ ಸಂಕಲ್ಪ ಕೈಗೊಂಡಿದೆ ಎಂದು ತಿಳಿಸಿದರು.

ಹವಾಮಾನದ ಬದಲಾವಣೆಯಿಂದಾಗಿ ವೈಪರೀತ್ಯಗಳಾಗುತ್ತಿವೆ. ಭಾರತೀಯರು ಗಿಡಮರಗಳನ್ನು ಪೂಜಿಸುತ್ತಾರೆ, ಪರಿಸರವನ್ನು ಗೌರವಿಸುತ್ತಾರೆ. ಈಗ ಪ್ರತಿಯೊಬ್ಬರೂ ಗಿಡ ನೆಡುವ ಮೂಲಕ ಪರಿಸರ ಸಂರಕ್ಷಿಸಬೇಕಾದ ಅಗತ್ಯ ಎದುರಾಗಿದೆ ಎಂದು ಅಭಿಪ್ರಾಯಪಟರು.

## ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಶೌಚಾಲಯ ಇಲ್ಲದೇ ಪರದಾಟ

• **ಉದಯವಾಹಿನಿ, ಹಟ್ಟಿಚಿನ್ನದ ಗಣಿ**

ಇಲ್ಲಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಶೌಚಾಲಯ ಇಲ್ಲದೇ ವಿದ್ಯಾರ್ಥಿಗಳು ಪರದಾಡುತ್ತಿದ್ದಾರೆ. ಕಾಲೇಜು ಆರಂಭವಾಗಿ 42 ವರ್ಷಗಳು ಕಳೆದಿವೆ. ಕಲಾ, ವಾಣಿಜ್ಯ, ವಿಜ್ಞಾನ ವಿಭಾಗಗಳಿವೆ. 195ಕ್ಕೂ ಹೆಚ್ಚು ವಿದ್ಯಾರ್ಥಿಗಳು ಓದುತ್ತಿದ್ದಾರೆ.

ಐವರು ಕಾಯಂ ಸಿಬ್ಬಂದಿ, 7 ಜನ ಅತಿಥಿ ಉಪನ್ಯಾಸಕರಿದ್ದಾರೆ. 16 ಕೊಠಡಿಗಳಿದ್ದು, 4 ಮಾತ್ರ ಬಳಕೆ ಯೋಗ್ಯವಾಗಿವೆ. 12 ಕೊಠಡಿಗಳು ಶಿಥಿಲಗೊಂಡು ಕಬ್ಬಿಣದ ಸರಳುಗಳು ಕಾಣುತ್ತಿವೆ. ಬೀಳುವ ಹಂತ ತಲುಪಿವೆ. ಇಲ್ಲಿನ ಉಪನ್ಯಾಸಕಿಯರಿಗೂ ಶೌಚಾಲಯವಿಲ್ಲ. ನೀರಿನ ಕೊರತೆಯ ಕಾರಣಕ್ಕೆ ಹಳೆ ಶೌಚಾಲಯಕ್ಕೆ ಬೀಗ ಹಾಕಲಾಗಿದೆ. ಕಾಲೇಜಿನಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಮನೆಯಿಂದ ಬಾಟಲಿನಲ್ಲಿ ನೀರು ತರಬೇಕು. ಇಲ್ಲವಾದರೆ ಸಹಪಾಠಿಗಳ ಹತ್ತಿರ ಕೇಳಿ ನೀರು ಕುಡಿಯಬೇಕಾದ ಸ್ಥಿತಿ ಇದೆ ಎನ್ನುತ್ತಾರೆ ಇಲ್ಲಿನ ವಿದ್ಯಾರ್ಥಿಗಳು.

ಕಾಲೇಜಿನಲ್ಲಿರುವ ಸಮಸ್ಯೆ ಬಗೆಹರಿಸಿ ವಿದ್ಯಾರ್ಥಿಗಳಿಗೆ ಮೂಲ ಸೌಕರ್ಯ ಒದಗಿಸಬೇಕು ಎಂಬುದು ಪಾಲಕರ ಒತ್ತಾಯವಾಗಿದೆ.

ಕಾಲೇಜಿನ ಹುಡುಗರಿಗೆ ಶೌಚಾಲಯಕ್ಕೆ ಮೈದಾನವೇ ಆಸರೆಯಾಗಿದೆ. ಶೌಚಕ್ಕೆ ಹೊರಗಡೆ ಬಂದು ಅನಾಹುತಗಳು ಜರುಗಿದರೆ ಅದಕ್ಕೆ ಯಾರು ಹೊಣೆ? ಈ ಕಾಲೇಜಿನಲ್ಲಿ ಬಡ ಮಕ್ಕಳು ಮಾತ್ರ ಕಲಿಯುತ್ತಿದ್ದಾರೆ. ಅಧಿಕಾರಿಗಳು ಗಮನಹರಿಸಿ ಸಮಸ್ಯೆ ಬಗೆಹರಿಸಲಿ ಎನ್ನುವುದು ಸಾರ್ವಜನಿಕರ ಒತ್ತಾಯವಾಗಿದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ನಿಮ್ಮ ಅಪಾರ ವಿಶ್ವಾಸ ಮತ್ತು ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ನೀವು ಜೀವನದಲ್ಲಿ ಹಣದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದಿಲ್ಲ.

**ವೃಷಭ** ನೀವು ವಿರಾಮದ ಸಂತೋಷವನ್ನು ಅನುಭವಿಸಲಿದ್ದೀರಿ. ತನ್ನ ಹಣವನ್ನು ಹೇಗೆ ಸಂಗ್ರಹಿಸುವುದು ಎಂಬ ಈ ಕೌಶಲ್ಯವನ್ನು ನೀವು ಕಲಿಯಬಹುದು ಮತ್ತು ಈ ಕೌಶಲ್ಯವನ್ನು ಕಲಿತು ನೀವು ನಿಮ್ಮ ಹಣವನ್ನು ಉಳಿಸಬಹುದು.

**ಮಿಥುನ** ಆರೋಗ್ಯವು ಇತರರೊಂದಿಗೆ ಸಂತೋಷವನ್ನು ಹಂಚಿಕೊಳ್ಳುವ ಮೂಲಕ ಅರಳುತ್ತದೆ. ಹೊಸ ಹಣಗಳಿಕೆಯ ಅವಕಾಶಗಳು ಲಾಭದಾಯಕವಾಗಿರುತ್ತವೆ.

**ಕರ್ಕಾಟಕ** ಜೀವನದಲ್ಲಿ ಒತ್ತಡದ ಮನೋಭಾವವನ್ನು ತಪ್ಪಿಸಿ ಮನೆಯ ಸಣ್ಣ ವಸ್ತುಗಳ ಮೇಲೆ ನಿಮ್ಮ ಸಾಕಷ್ಟು ಹಣ ಹಾಳಾಗಬಹುದು, ಇದರ ಕಾರಣದಿಂದ ನೀವು ಮಾನಸಿಕ ಒತ್ತಡಗೊಳಗಾಗಬಹುದು.

**ಸಿಂಹ** ನಿಮ್ಮ ಅತ್ಯಂತ ಪ್ರೀತಿಯ ಕನಸು ನನಸಾಗುತ್ತದೆ. ಆದರೆ ತುಂಬಾ ಸಂತೋಷ ಸ್ವಲ್ಪ ಸಮಸ್ಯೆಗಳನ್ನು ಉಂಟುಮಾಡಬಹುದಾದ್ದರಿಂದ ನಿಮ್ಮ ಉತ್ಸಾಹವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ.

**ಕನ್ಯಾ** ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ಆಲೋಚಿಸದೆ ನೀವು ಯಾರಿಗೂ ತಮ್ಮ ಹಣವನ್ನು ಕೊಡಬಾರದು, ಇಲ್ಲದಿದ್ದರೆ ನೀವು ಮುಂಬರುವ ಸಮಯದಲ್ಲಿ ದೊಡ್ಡ ತೊದರೆಗೊಳಗಾಗಬಹುದು.

**ತುಲಾ** ನಿಮ್ಮ ಹೆಚ್ಚು ಆತ್ಮವಿಶ್ವಾಸವನ್ನು ಇಂದು ಚೆನ್ನಾಗಿ ಬಳಸಿಕೊಳ್ಳಲು ಪ್ರಯತ್ನಿಸಿ. ಒತ್ತಡದ ದಿನದ ಹೊರತಾಗಿಯೂ ನೀವು ನಿಮ್ಮ ಚೈತನ್ಯವನ್ನು ಮರಳಿ ಪಡೆಯಲು ಸಾಧ್ಯವಾಗುತ್ತದೆ.

**ವೃಶ್ಚಿಕ** ಕೆಲವು ಹಿನ್ನಡೆ ಎದುರಿಸುವ ಸಾಧ್ಯತೆಯಿದೆ. ಧೃತಿಗೆಡಬೇಡಿ ಹಾಗೂ ನಿರೀಕ್ಷಿತ ಫಲಿತಾಂಶ ಪಡೆಯಲು ಕಠಿಣ ಪರಿಶ್ರಮಪಡಿ. ಈ ಹಿನ್ನಡೆಗಳು ನಿಮ್ಮ ಯಶಸ್ಸಿನ ಸೋಪಾನಗಳಾಗಿರಲಿ.

**ಧನಸ್ಸು** ನಿಮ್ಮ ದೊಡ್ಡ ಆಸ್ತಿಯೆಂದರೆ ನಿಮ್ಮ ಹಾಸ್ಯಪ್ರಜ್ಞೆಯಾಗಿದೆ ಇದನ್ನು ಅನಾರೋಗ್ಯ ಗುಣಪಡಿಸಲು ಬಳಸಲು ಪ್ರಯತ್ನಿಸಿ. ನಿಮ್ಮ ಪೋಷಕರು ನೀಡಿದ ಬೆಂಬಲದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾದಂತೆನಿಸುತ್ತವೆ.

**ಮಕರ** ಹೆಚ್ಚಿನ ಕ್ಯಾಲೊರಿ ಆಹಾರವನ್ನು ತಪ್ಪಿಸಿ ಮತ್ತು ನಿಮ್ಮ ವ್ಯಾಯಾಮವನ್ನು ಕೈಬಿಡಬೇಡಿ. ರಿಯಲ್ ಎಸ್ಟೇಟ್ ವ್ಯವಹಾರಗಳಿಗೆ ಒಳ್ಳೆಯ ದಿನ. ಒಬ್ಬ ಹಿರಿಯ ವ್ಯಕ್ತಿಯ ಆರೋಗ್ಯ ಕೊಂಚ ಆತಂಕಕ್ಕೆ ಕಾರಣವಾಗುತ್ತದೆ.

**ಕುಂಭ** ಸ್ನೇಹಿತರು ನಿಮ್ಮ ಆಲೋಚನೆಗಳ ಮೇಲೆ ಗಮನಾರ್ಹ ಪ್ರಭಾವ ಬೀರಬಹುದಾದ ಯಾರಾದರೂಬ್ಬರನ್ನು ನಿಮಗೆ ಪರಿಚಯಿಸುತ್ತಾರೆ. ಊಹೆಗಳು ಲಾಭ ತರುತ್ತವೆ. ಪ್ರೀತಿ ಸಾಂಗತ್ಯ ಮತ್ತು ಬಂಧ ಏರಿಕೆಯಲ್ಲಿರುತ್ತವೆ.

**ಮೀನ** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ.


## ಉದಯವಾಹಿನಿ ಡೈರಿ ವಿತರಣೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ವಕೀಲರ ಸಂಘದ ಅಧ್ಯಕ್ಷ ಶ್ರೀಮಂತ ಕಟ್ಟಿಮನಿಯವರಿಗೆ ಉದಯವಾಹಿನಿ ಕನ್ನಡ ದಿನಪತ್ರಿಕೆ ವತಿಯಿಂದ ಹೊರತಂದಿರುವ 2025ರ ನೂತನ ಉದಯವಾಹಿನಿ ಡೈರಿಯನ್ನು ತಾಲ್ಲೂಕಾ ವರದಿಗಾರ ಮಹೇಬೂಬಶಾ ಅಣವಾರ ಅವರು ವಿತರಿಸಿ ಹೊಸ ವರ್ಷದ ಮತ್ತು ಮಕರ ಸಂಕ್ರಮಣದ ಶುಭಕೋರಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ಪಕ್ಷದ ಅಲ್ಪಸಂಖ್ಯಾತ ಘಟಕದ ರಾಜ್ಯ ಉಪಾಧ್ಯಕ್ಷ ಕೆ.ಎಂ. ಬಾರಿ,ಮಡಿವಾಳ ಸಮಾಜ ಪ್ರಧಾನ ಕಾರ್ಯದರ್ಶಿ ಕಿರಣಕುಮಾರ,ರಾಜು ರಾಠೋಡ್ ಇದ್ದರು.



ಉದಯವಾಹಿನಿ ಚಿತ್ರ

**ಚಿಂಚೋಳಿ: ತಾಲ್ಲೂಕಿನ ಸುಲೇಪೇಟ ಗ್ರಾಮ ಪಂಚಾಯತ್ ಅಧ್ಯಕ್ಷ ಸಂತೋಷಕುಮಾರ ರಾಠೋಡ್ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪ್ರತೀಕ್ಷಾ ಅವರು ಉದಯವಾಹಿನಿ ಕನ್ನಡ ದಿನಪತ್ರಿಕೆ ವತಿಯಿಂದ ಹೊರತಂದಿರುವ 2025ರ ನೂತನ ದಿನದರ್ಶಿಕೆ (ಕ್ಯಾಲೆಂಡರ್) ಬಿಡುಗಡೆಗೊಳಿಸಿದ್ದರು.**

## ಸಂಭ್ರಮದ ಸಂಕ್ರಾಂತಿ ಆಚರಣೆ

• ಉದಯವಾಹಿನಿ, ದಾವಣಗೆರೆ

ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ವಚನಾಮೃತ ಬಳಗದಿಂದ ಹಬ್ಬವನ್ನು ಆಚರಣೆ ಮಾಡಲಾಯಿತು. ಸುಗ್ಗಿ ಕಾಲದಲ್ಲಿ ರೈತರು ಬೆಳೆದ ಬೆಳೆಗಳನ್ನ ಪೂಜಿಸಿ ಆನಂದಿಸುತ್ತಾರೋ ಹಾಗೆ ಬಳಗದ ಸದಸ್ಯರು ರೈತರು ಬೆಳೆದ ಕಾಳು ಕಡಿಗಳನ್ನ, ಭತ್ತದ ರಾಶಿಯನ್ನು, ತೆನೆಗಳನ್ನ,ಕಬ್ಬಿನ ತೆನೆಯನ್ನು ಪೂಜಿಸಿದರು. ರೊಟ್ಟಿ ಬುತ್ತಿ, ಪಲ್ಯಗಳು, ಚಟ್ನಿ ಪುಡಿಗಳು, ಸಾಂಬಾರ್ ಬುತ್ತಿ ಮತ್ತು ಮಾದ್ಲಿ ಹೀಗೆ ವಿವಿಧ ಅಡಿಗೆಯನ್ನು ತಯಾರಿಸಿ ಮನೆಯವರೆಲ್ಲರೂ ಸ್ನೇಹಿತರೊಂದಿಗೆ ಬಂಧುಗಳೊಂದಿಗೆ ಊಟವನ್ನು ಮಾಡಿ ಎಳ್ಳು ಬೆಲ್ಲವನ್ನು ಕೊಟ್ಟು ಒಳ್ಳೊಳ್ಳೆ ಮಾತಾಡಿ ಎಂದು ಹೇಳಿ ಈ ಹಬ್ಬವನ್ನು ತುಂಬಾ ಸಂತೋಷದಿಂದ ಆಚರಿಸಿದರು.



ಉದಯವಾಹಿನಿ ಚಿತ್ರ

# ಪೊಲೀಸರು ರಾಜಕಾರಣಿಗಳ ಕೈಗೊಂಬೆಯಾಗಬೇಡಿ: ನಡಹಳ್ಳಿ

## ಪೊಲೀಸರನ್ನು ಮುಂದಿಟ್ಟುಕೊಂಡು ರಾಜಕಾರಣ ಮಾಡುವ ರಾಜಕಾರಣಿಗಳಿಗೆ ನೀವು ಬಲಿಪಶುಗಳಾಗಬಾರದು

• ಉದಯವಾಹಿನಿ ಮುದ್ದೇಬಿಹಾಳ

ಪೊಲೀಸರು ರಾಜಕಾರಣಿಗಳ ಕೈಗೊಂಬೆಯಾಗಿ ಕೆಲಸ ಮಾಡಬಾರದು. ಪೊಲೀಸರನ್ನು ಮುಂದಿಟ್ಟುಕೊಂಡು ರಾಜಕಾರಣ ಮಾಡುವ ರಾಜಕಾರಣಿಗಳಿಗೆ ನೀವು ಬಲಿಪಶುಗಳಾಗಬಾರದು. ಯಾರದೋ ಮಾತು ಕೇಳಿ ನಮ್ಮ ಕಾರ್ಯಕರ್ತರನ್ನು, ನಿರಪರಾಧಿಗಳನ್ನು ಬೆದರಿಸುವ ಕೆಲಸ ಮಾಡಿದರೆ ಇನ್ನು ಮುಂದೆ ಸಹಿಸಿಕೊಳ್ಳುವುದು ಸಾಧ್ಯವಿಲ್ಲ. ನಾನು ಅವರ ಪರ ನಿಲ್ಲುತ್ತೇನೆ ಎಂದು ಮಾಜಿ ಶಾಸಕ, ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ ಎ.ಎಸ್.ಪಾಟೀಲ ನಡಹಳ್ಳಿ ಹೇಳಿದರು.

ಇಲ್ಲಿನ ತಮ್ಮ ಫಾರ್ಮಹೌಸ್‌ನಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ನೀವು ಕಾನೂನು ರೀತಿಯಲ್ಲಿ ಕೆಲಸ ಮಾಡಿದರೆ ನಮ್ಮ ಸಹಕಾರ ಇರುತ್ತದೆ. ಈ ತಾಲ್ಲೂಕಲ್ಲಿ ಪೊಲೀಸರನ್ನು ಮುಂದಿಟ್ಟುಕೊಂಡು ಗುಂಡಾಗಿರಿ ಮಾಡುವ ಶಾಸಕರ ಮಾತಿನಂತೆ ನಡೆದುಕೊಂಡರೆ ಮುಂದೆ ನೀವು ಸಂಕಷ್ಟಕ್ಕೀಡಾದಾಗ ಅವರೇ ನಿಮ್ಮ ರಕ್ಷಣೆಗೆ ನಿಲ್ಲುವುದಿಲ್ಲ ಎನ್ನುವುದು ನಿಮಗೆ ನೆನಪಿರಲಿ ಎಂದರು. ಪಿಎಸ್ಐ ಸಂಜಯ್ ತಿಪ್ಪಾರಡ್ಡಿ ವಿರುದ್ಧ ಆಕ್ರೋಶ ಹೊರಹಾಕಿದ ಅವರು ಮೂರು ಬಾರಿ ಶಾಸಕನಾಗಿರುವ, ರಾಷ್ಟ್ರೀ ಯ ಪಕ್ಷವೊಂದರ ರೈತಮೋರ್ಚಾ ರಾಜ್ಯಾಧ್ಯಕ್ಷನಾಗಿರುವ ನಾನು ಪೊಲೀಸ್ ಸ್ಟೇಷನ್‌ಗೆ ಬಂದಾಗ ನಡೆದುಕೊಂಡ ರೀತಿಯಿಂದ ನೋವಾಗಿದೆ. ಇಂಥ ವರ್ತನೆ ತಿದ್ದಿಕೊಳ್ಳಬೇಕು.



ಉದಯವಾಹಿನಿ ಚಿತ್ರ

**ನಿರಪರಾಧಿಗಳನ್ನು ಬೆದರಿಸುವ ಕೆಲಸ**

ಜನಪ್ರತಿನಿಧಿಗಳು, ಸಾರ್ವಜನಿಕರು ಸ್ಟೇಷನ್‌ಗೆ ಬಂದಾಗ ಯಾವ ರೀತಿ ನಡೆದುಕೊಳ್ಳಬೇಕೆಂದು ಟ್ರೇನಿಂಗ್‌ನಲ್ಲಿ ತಿಳಿಸಿರುತ್ತಾರೆ.

ಇದು ಪ್ರೋಟೋಕಾಲ್. ಚಿಕ್ಕ ವಯಸ್ಸಲ್ಲಿ ಪಿಎಸ್ಐ ಆಗಿರತೀರಿ. ಹಿಂದೆ ಯಾರೂ ಇರೊಲ್ಲ. ಯಾರ ಹತ್ತಿರವೋ ಸಿಕ್ಕಿ ಹಾಕಿಕೊಂಡಿರುತ್ತೀರಿ. ಅಂಥವರ ಕೈಗೊಂಬೆಯಾಗಿ ಭವಿಷ್ಯ ಹಾಳು ಮಾಡಿಕೊಳ್ಳಬೇಡಿ. ಸ್ವಯಂಪ್ರೇರಿತ ದೂರು ಹಾಕುವ ಮನೋಭಾವ ಕೈಬಿಡಿ.

ನೈತಿಕತೆ ಇದ್ದರೆ ಕಾರ್ಯಕರ್ತರ ವಿರುದ್ಧ ಹಾಕಿರುವ ಸ್ವಯಂಪ್ರೇರಿತ ಕೇಸ್ ವಾಪಸ್ ಪಡೆಯಿರಿ ಎಂದರು.

ಪೊಲೀಸ್ ಅಧಿಕಾರಿಗಳಾಗಿದ್ದ ಕಲ್ಲಪ್ಪ ಹಂಡೀಭಾಗ, ಗಣಪತಿ ಅವರು ರಾಜಕಾರಣಿಗಳ, ಹಿರಿಯ ಪೊಲೀಸರ ಮೋಸಕ್ಕೆ, ಷಡ್ಯಂತ್ರಕ್ಕೆ ಬಲಿಯಾಗಿ ಆತ್ಮಹತ್ಯೆ ಮಾಡಿಕೊಂಡಾಗ ಇದೇ ಸಿದ್ದರಾಮಯ್ಯ ಆಗ ಸಿಎಂ ಆಗಿದ್ದರು. ನಾನು ಕಾಂಗ್ರೆಸ್ ಶಾಸಕನಾಗಿದ್ದೆ. ಆತ್ಮಹತ್ಯೆ ಮಾಡಿಕೊಂಡ ಆ ಅಧಿಕಾರಿಗಳ ಪರ ವಿಧಾನಸಭೆಯಲ್ಲಿ ಧ್ವನಿ ಎತ್ತಿದ ಏಕೈಕ ಶಾಸಕ ನಾನು. ಅವರ ಕುಟುಂಬಗಳಿಗೆ ನ್ಯಾಯ ಕೊಡಿಸುವ ಕೆಲಸ ಮಾಡಿದ್ದೆ.

ಹಂಡಿಭಾಗ, ಗಣಪತಿ ನನ್ನ ಸಂಬಂಧಿಕರೂ ಅಲ್ಲ, ನನ್ನ ಮತದಾರರೂ ಅಲ್ಲ. ಆದರೂ ಅವರ ನೆರವಿಗೆ ನಿಂತೆ. ನಿಮ್ಮಂಥ ಅಧಿಕಾರಿಗಳು ರಾಜಕಾರಣಿಗಳ ಕೈಗೊಂಬೆಯಾದರೆ ಮುಂದೊಂದು ದಿನ ನಿಮ್ಮನ್ನು ರಕ್ಷಿಸಲು ನಾನು ಅಥವಾ ನನ್ನಂಥವರು ಬರಬೇಕೆ ಹೊರತು ನಿಮ್ಮನ್ನು ಉಪಯೋಗಿಸಿಕೊಂಡವರು ಬರುವುದಿಲ್ಲ ಎನ್ನುವುದು ಗೊತ್ತಿರಲಿ ಎಂದರು.

ಪಕ್ಷದ ಮುಖಂಡರಾದ ಗುರುಲಿಂಗಪ್ಪಗೌಡ ಅಂಗಡಿ, ಬಿ.ಸಿ.ಬಿರಾದಾರ, ರಾಜಶೇಖರ ಡೊಳ್ಳಿ, ಎಂ.ಎಸ್.ಪಾಟೀಲ, ಮುನ್ನಾಧಣಿ ನಾಡಗೌಡ, ಕೆಂಚಪ್ಪ ಬಿರಾದಾರ, ಪ್ರಭು ಕಡಿ, ಸಂಗಮ್ಮ ದೇವರಳ್ಳಿ, ಬಾಲರಾಜ ರಡ್ಡಿ, ಪ್ರಭು ಕಡಿ, ಸೋಮನಗೌಡ ಬಿರಾದಾರ, ಬಿ.ಪಿ.ಕುಲಕರ್ಣಿ, ಚನಬಸ್ಸು ಚನ್ನಿಗಾವಿಶೆಟ್ರು, ಗೌರಮ್ಮ ಹುನಗುಂದ ಇನ್ನಿತರರು ಇದ್ದರು.

### ಬೆದರಿಕೆಗಳಿಗೆ ನಾವು ಹೆದರುವುದಿಲ್ಲ

**ಬಿಜೆಪಿಯಿಂದ ನಡೆಸಲಾಗುವ ರ್‍ಯಾಲಿ, ಸಭೆ, ಸಮಾರಂಭ ಮುಂತಾದವುಗಳಿಗೆ ಪೊಲೀಸರು ದುರುದ್ದೇಶದಿಂದ ತಡೆ ಒಡ್ಡುವ ಮೂಲಕ ನಮ್ಮ ಮನೋಸ್ಥೈರ್ಯ ಕುಗ್ಗಿಸುವ ಗೊಡ್ಡು ಬೆದರಿಕೆಗಳಿಗೆ ನಾವು ಹೆದರುವುದಿಲ್ಲ. ಶುಕ್ರವಾರ ನಾವು ನಡೆಸಲು ಉದ್ದೇಶಿಸಿದ್ದ ಮಂಡಲ ಕಾರ್ಯಕರ್ತರ ಬೈಕ್, ಕಾರ್ ರ್‍ಯಾಲಿ, ಸಭೆಗೆ ಪಿಎಸ್ಐ ಅನುಮತಿ ನಿರಾಕರಿಸಿದ್ದಾರೆ. ಮುದ್ದೇಬಿಹಾಳದಲ್ಲಿ ಕಾಂಗ್ರೆಸ್, ಬಿಜೆಪಿ ಕಾರ್ಯಕರ್ತರ ನಡುವೆ ರಾಜಕೀಯವಾಗಿ ದ್ವೇಷದ ವಾತಾವರಣವಿದೆ ಎಂದು ಕಾರಣ ನೀಡಿದ್ದಾರೆ. ದ್ವೇಷದ ವಾತಾವರಣ ಇದೆ ಎಂದು ಅವರೇ ತಿಳಿಸಿದ ಮೇಲೆ ನಮ್ಮ ಕಾರ್ಯಕರ್ತರನ್ನು ಬಲಿಪಶು ಮಾಡಲು ಇಷ್ಟವಿಲ್ಲದ ಕಾರಣ ರ್‍ಯಾಲಿ, ಸಭೆ ರದ್ದುಪಡಿಸಬೇಕಾಯಿತು. ಇದನ್ನು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಗಮನಕ್ಕೆ ತಂದಾಗ ಅವರೇ ಇಲ್ಲಿಗೆ ಬಂದು ಬೃಹತ್ ರ್‍ಯಾಲಿ, ಸಭೆ ನಡೆಸುವುದಾಗಿ ತಿಳಿಸಿದ್ದಾರೆ. ಇದು ನಮ್ಮ ಕಾರ್ಯಕರ್ತರನ್ನು ಹುರಿದುಂಬಿಸಲು ನೆರವಾಗುತ್ತದೆ ಎಂದು ನಡಹಳ್ಳಿಯವರು ತಿಳಿಸಿದರು.**

# ಜಾಮೀನಿನ ಮೇಲೆ ಬಂದ ಗೋ ಪ್ರೇಮಿಗಳಿಗೆ ಸನ್ಮಾನ

• ಉದಯವಾಹಿನಿ ಮುದ್ದೇಬಿಹಾಳ

ಬೆಂಗಳೂರಿನ ಚಾಪರಾಜಪೇಟೆಯಲ್ಲಿ ಕೆಚ್ಚಲು ಕೋಯ್ದು ಗೋಮಾತೆಗೆ ಮಾಡಿರುವ ಅನ್ಯಾಯಕ್ಕೆ ನ್ಯಾಯ ಕೊಡಿಸುವಂತೆ ಮನವಿ ಮಾಡಿಕೊಳ್ಳಲು ಶಾಸಕ ನಿವಾಸದ ಬಳಿ ಹೋಗಿದ್ದಾಗ ಪಿಎಸ್ಐ ಸಂಜಯ್ ತಿಪ್ಪರಡ್ಡಿ ನೀಡಿದ್ದ ಸ್ವಯಂಪ್ರೇರಿತ ದೂರಿನಡಿ ಪೊಲೀಸರಿಂದ ಬಂಧಿಸಲ್ಪಟ್ಟು ಜೈಲುಪಾಲಾಗಿದ್ದ ಬಿಜೆಪಿ ಮುದ್ದೇಬಿಹಾಳ ಮಂಡಲ ಅಧ್ಯಕ್ಷ ಜಗದೀಶ ಪಂಪಣ್ಣವರ್, ಕಾರ್ಯದರ್ಶಿ ಸಂಜು ಬಾಗೇವಾಡಿ, ಯುವ ಮೋರ್ಚಾ ಅಧ್ಯಕ್ಷ ಗಿರೀಶಗೌಡ ಪಾಟೀಲ ಹಿರೇಮುರಾಳ, ನಾಗೇಶ ಕವಡಿಮಟ್ಟಿ ಅವರು ಜಾಮೀನಿನ ಮೇಲೆ ಹೊರಗೆ ಬಂದ ಹಿನ್ನೆಲೆ ಇಲ್ಲಿನ ಫಾರ್ಮಹೌಸ್‌ನಲ್ಲಿ ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ ಎ.ಎಸ್.ಪಾಟೀಲ ನಡಹಳ್ಳಿ ಆದಿಯಾಗಿ ಪಕ್ಷದ ಮುಖಂಡರು ಸನ್ಮಾನಿಸಿ ಗೌರವಿಸಿದರು. ಇವರು ಯಾವುದೇ ಕ್ರಿಮಿನಲ್ ಅಪರಾಧ ಎಸಗಿ ಜೈಲಿಗೆ ಹೋದವರಲ್ಲಿ. ಗೋಮಾತೆಗೆ ಆಗಿರುವ



ಉದಯವಾಹಿನಿ ಚಿತ್ರ

ಅನ್ಯಾಯ ಖಂಡಿಸಲು ಮುಂದಾಗಿದ್ದರು. ನಮ್ಮ ಸನಾತನ ಧರ್ಮ ಹಿಂದು ಸಂಸ್ಕೃತಿಯಲ್ಲಿ ಗೋಮಾತೆಗೆ ಇರುವ ಮಹತ್ವ ಮನವರಿಕೆ ಮಾಡಿಕೊಡುವಾಗ ಸುಳ್ಳು ಕೇಸ್ ಅಡಿ ಜೈಲಿಗೆ ಹೋಗಿದ್ದರು. ಗೋಮಾತೆ ಕುರಿತಾದ ಇವರ ಕಾರ್ಯ, ಮನೋಭಾವ ಮತ್ತು ನಂಬಿಕೆಯನ್ನು ಪಕ್ಷದ ರಾಜ್ಯ, ರಾಷ್ಟ್ರೀಯ ಘಟಕಗಳು ಶ್ಲಾಘಿಸಿವೆ. ನಮ್ಮ ಪಕ್ಷಕ್ಕೂ ಇವರು ಹೆಮ್ಮೆ ತಂದಿದ್ದಾರೆ ಎಂದು ನಡಹಳ್ಳಿ ಶ್ಲಾಘಿಸಿದರು.

ಜಗದೀಶ, ಗಿರೀಶಗೌಡ, ಸಂಜು, ನಾಗೇಶ ಅವರು ಮಾತನಾಡಿ ನಾವು ಜೈಲು ಪಾಲಾದಾಗ ನಡಹಳ್ಳಿಯವರು ಹಗಲು, ರಾತ್ರಿ ನಮ್ಮ ಪರ ಅವಿಶ್ರಾಂತವಾಗಿ ಕೆಲಸ ಮಾಡಿದ್ದರಿಂದ ನಮಗೆ ಎರಡೇ ದಿನಗಳಲ್ಲಿ ಜಾಮೀನು ದೊರೆಯುವಂತಾಗಿದೆ. ನಡಹಳ್ಳಿಯವರು ಸಾಮಾನ್ಯ ಕಾರ್ಯಕರ್ತರ ರಕ್ಷಣೆಗೆ ಸದಾ ಬೆನ್ನೆಲುಬಾಗಿ ನಿಂತಿರುತ್ತಾರೆ ಎನ್ನುವುದನ್ನು ಇದು ದೊಡ್ಡ ಉದಾಹರಣೆಯಾಗಿದೆ. ಕೆಲವು ಕಾರ್ಯಕರ್ತರು ನಡಹಳ್ಳಿಯವರ ಬಗ್ಗೆ ನಡೆಸಿರುವ ಅಪಪ್ರಚಾರಕ್ಕೆ ಯಾರೂ ಕಿವಿಗೊಡಬಾರದು. ಕಾರ್ಯಕರ್ತರಿಗೆ ನಡಹಳ್ಳಿಯವರು ದೊಡ್ಡ ಶಕ್ತಿಯಾಗಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು. ಇದೇ ವೇಳೆ ನಾಲ್ವರೂ ಗೋಮಾತೆಗೆ ಪೂಜೆ ಸಲ್ಲಿಸಿ ಆಹಾರ ನೀಡಿ ನಮಿಸಿ ಗೌರವ ಸಲ್ಲಿಸಿದರು. ಪಕ್ಷದ ಜಿಲ್ಲಾ ಮತ್ತು ತಾಲ್ಲೂಕು ಮುಖಂಡರು, ಕಾರ್ಯಕರ್ತರು ಭಾಗವಹಿಸಿ ಈ ನಾಲ್ವರ ದೇಶಾಭಿಮಾನ, ಗೋಮಾತೆಯ ಅಭಿಮಾನ ಶ್ಲಾಘಿಸಿದರು.

**ನಡಹಳ್ಳಿ ಅವರು ಪಕ್ಷದ ಕಾರ್ಯಕರ್ತರ ದೊಡ್ಡ ಶಕ್ತಿ**

# ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ಎಸಗಿ ಫೋಟೋ ವೈರಲ್ ಪ್ರಕರಣ: ಆರೋಪಿಗೆ 20 ವರ್ಷ ಜೈಲು

• ಉದಯವಾಹಿನಿ, ಉಡುಪಿ

ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ಎಸಗಿ, ಆಕೆಯ ಅಶ್ಲೀಲ ಭಾವಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಮಾಡಿರುವ ಪ್ರಕರಣದ ಆರೋಪಿಗೆ ಉಡುಪಿ ಹೆಚ್ಚುವರಿ ಜಿಲ್ಲಾ ನ್ಯಾಯಾಲಯ ಪೋಕ್ಸೋ ನ್ಯಾಯಾಲಯ 20ವರ್ಷಗಳ ಕಠಿಣ ಶಿಕ್ಷೆ ವಿಧಿಸಿ ಆದೇಶ ನೀಡಿದೆ.

ಬ್ರಹ್ಮಾವರದ ರಫೀಕ್(25) ಶಿಕ್ಷೆಗೆ ಗುರಿಯಾದ ಆರೋಪಿ. ರಿಕ್ಷಾ ಚಾಲಕನಾಗಿದ್ದ ರಫೀಕ್ ನೊಂದ ಬಾಲಕಿಯನ್ನು ಕಾಲೇಜಿಗೆ ಕರೆದುಕೊಂಡು ಹೋಗಿ ಬರುತ್ತಿದ್ದು, ನಂತರ ಆಕೆಯ ಮೊಬೈಲ್‌ಗೆ ಕರೆ ಮಾಡಿ ಸಂದೇಶ ಕಳುಹಿಸಿ ತನ್ನನ್ನು ಪ್ರೀತಿಸುವಂತೆ ಒತ್ತಾಯಿಸುತ್ತಿದ್ದನು. ನಂತರ ಅವಳಿಂದ ಇನ್ಸ್ಟಾಗ್ರಾಮ್ ಐಡಿ ಪಡೆದು ಅದರಲ್ಲಿ ಅವಳ ಭಾವಚಿತ್ರಗಳನ್ನು ಪಡೆದುಕೊಂಡು ಪ್ರೀತಿಸದಿದ್ದರೆ ತಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಹೆದರಿಸಿದ್ದನು. ನಂತರ ಬಾಲಕಿ ಒಪ್ಪಂದಿದ್ದಾಗ ನಕಲಿ ಐಡಿ ಸೃಷ್ಟಿಸಿ ಅದರಿಂದ ಬಾಲಕಿಯನ್ನು ಸಂಪರ್ಕಿಸಿ, ಆರೋಪಿಯನ್ನು ಪ್ರೀತಿಸುವಂತೆ ತಿಳಿಸಿದ್ದನು. ನಂತರವೂ ನೊಂದ ಬಾಲಕಿಯ ಅಶ್ಲೀಲ ಭಾವಚಿತ್ರವನ್ನು ಸೃಷ್ಟಿಸಿ ವೈರಲ್ ಮಾಡುವುದಾಗಿ ಹೆದರಿಸಿ, ಆಕೆಯನ್ನು ತನ್ನ ರಿಕ್ಷಾದಲ್ಲಿ ಕಾಲೇಜಿನಿಂದ ಮನೆಗೆ ಬಿಡುತ್ತೇನೆಂದು ಕರೆದುಕೊಂಡು ಬಂದು ನಿರ್ಜನ ಪ್ರದೇಶದಲ್ಲಿ ಅತ್ಯಾಚಾರ ಎಸಗಿದ್ದನು ಎಂದು ದೂರಲಾಗಿದೆ. ಈ ವಿಚಾರವನ್ನು ಬೇರೆಯವರಿಗೆ ತಿಳಿಸಿದರೆ ಸಾಮಾಜಿಕ ಜಾಲತಾಣದಲ್ಲಿ ಭಾವಚಿತ್ರ ವೈರಲ್ ಮಾಡುವುದಾಗಿ ಬೆದರಿಸಿದ್ದನು.

ನಂತರ ನೊಂದ ಬಾಲಕಿಯ ತಮ್ಮನ ಹೆಸರಿನ ನಕಲಿ ಇನ್ಸ್ಟಾಗ್ರಾಮ್ ಖಾತೆಗೆ ತೆರೆದು ಅದರಲ್ಲಿ ನೊಂದ ಬಾಲಕಿಯ ಅಶ್ಲೀಲ ಭಾವಚಿತ್ರ ಪೋಸ್ಟ್ ಮಾಡಿದ್ದನು. ಈ ಬಗ್ಗೆ ನೊಂದ ಬಾಲಕಿಯ ತಂದೆ ಬ್ರಹ್ಮಾವರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಅದರಂತೆ ನೊಂದ ಬಾಲಕಿಯನ್ನು ವಿಚಾರಿಸಿದಾಗ ಘಟನೆಯ ಬಗ್ಗೆ ತಿಳಿಸಿದಳೆನ್ನಲಾಗಿದೆ.

# ಗ್ರಾ.ಪಂ.ಗೆ ಅಧ್ಯಕ್ಷ ಸ್ಥಾನಕ್ಕೆ ಅವಿರೋಧ ಆಯ್ಕೆ

• ಉದಯವಾಹಿನಿ, ಚನ್ನಮ್ಮನ ಕಿತ್ತೂರ

ತಾಲ್ಲೂಕಿನ ಬೈಲೂರ ಗ್ರಾ.ಪಂ.ಗೆ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಮಂಜುನಾಥ ಫಕ್ಕೀರಪ್ಪ ಮರೆಪ್ಪಗೋಳ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಒಟ್ಟು 13 ಸದಸ್ಯರಲ್ಲಿ ವಿಠ್ಠಲ ಬಸಪ್ಪ ಅಗಸಿಮನಿ ಗೈರಾಗಿದ್ದರು. ಅಧ್ಯಕ್ಷ ಸ್ಥಾನಕ್ಕೆ ಒಂದೇ ನಾಮಪತ್ರ ಸಲ್ಲಿಯಾಗಿತ್ತು.

ಹಾಗಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನೂತನವಾಗಿ ಆಯ್ಕೆಯಾದ ಅಧ್ಯಕ್ಷರನ್ನು ಸರ್ವಸದಸ್ಯರು, ಗ್ರಾಪಂ ಸಿಬ್ಬಂದಿ, ಗ್ರಾಮದ ಹಿರಿಯರು ಸತ್ಕರಿಸಿದರು.

ಸತ್ಕಾರ ಸ್ವೀಕರಿಸಿ ಮಾತನಾಡಿದ ಅಧ್ಯಕ್ಷ ಮರೆಪ್ಪಗೋಳ ಸರ್ವ ಸದಸ್ಯರ ಹಾಗೂ ಹಿರಿಯರ ಮಾರ್ಗದರ್ಶನದಲ್ಲಿ ಗ್ರಾಪಂ ಸಿಬ್ಬಂದಿಗಳನ್ನು ಒಗ್ಗೂಡಿಸಿಕೊಂಡು ಗ್ರಾಮದ



ಉದಯವಾಹಿನಿ ಚಿತ್ರ

ಅಭಿವೃದ್ಧಿಗೆ ಹಗಲಿರುಳು ಶ್ರಮಿಸಿ ಜಾತಿ-ಭೇದ ಮರೆತು ಗ್ರಾಮಕ್ಕೆ ನನ್ನಿಂದ ಚ್ಯುತಿ ಬರದ ಹಾಗೇ ನಡೆದುಕೊಂಡು ಸರ್ಕಾರದ ಯೋಜನೆಗಳನ್ನು ಸಾರ್ವಜನಿಕರಿಗೆ ಮುಟ್ಟಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದರು. ಚುನಾವಣಾಧಿಕಾರಿಯಾಗಿ ಭೂಸೇನಾ ನಿಗಮ ಇಲಾಖೆ ಅಧಿಕಾರಿ ರಾಮಯ್ಯಾ, ಸಹಾಯಕ ಚುನಾವಣಾಧಿಕಾರಿಯಾಗಿ ಪಿಡಿಓ ಈಶ್ವರ ಹಡಪದ ಹಾಗೂ ಬಸವಣ್ಣೆಪ್ಪ ಅಂಬಡಗಟ್ಟಿ ಕಾರ್ಯನಿರ್ವಹಿಸಿದರು.

# ಗ್ರಾಮೀಣ ಪ್ರದೇಶದ ಮಕ್ಕಳಿಗೆ ಶಿಕ್ಷಣ ನೀಡುವುದು ಪ್ರಶಂಸನೀಯ ಕಾರ್ಯ

• ಉದಯವಾಹಿನಿ, ಬಳ್ಳಾರಿ

ಭಾರತದ ಭವಿಷ್ಯತ್ತಿಗೆ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಶಿಕ್ಷಣ ನೀಡುವ ಕಾರ್ಯ ಪ್ರಶಂಸನೀಯ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ ಹೇಳಿದ್ದಾರೆ. ಅವರು

ಸಂಜೆ ಬಳ್ಳಾರಿ ಜಿಲ್ಲೆ ಕುರುಗೋಡು ತಾಲ್ಲೂಕಿನ ದಮ್ಮೂರಿನ ಎಸ್.ಬಿ.ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್ಸ್‌ನ ವಾರ್ಷಿಕ ಮಹೋತ್ಸವ ಮತ್ತು ಕಟ್ಟಡಗಳ ಉದ್ಘಾಟನೆ ನೆರವೇರಿಸಿ ಮಾತನಾಡುತ್ತಿದ್ದರು.

ಶಿಕ್ಷಣ ವಿಷಯದಲ್ಲಿ ಭಾರತ ಪುರಾತನ ಕಾಲದಿಂದಲೂ ಮಹತ್ವ ಪಡೆದಿದೆ.ಖಗೋಳ ಶಾಸ್ತ್ರದಲ್ಲಿ ಭಾರತೀಯರ ಕೊಡುಗೆ ಮಹತ್ವದ್ದು, ತಕ್ಷ ಶಿಲ, ನಳಂದ ವಿವಿಗಳಿಂದ ನೀತಿ, ಅರ್ಥ, ರಾಜಕೀಯ ಮೊದಲಾದ ಶಾಸ್ತ್ರಗಳನ್ನು ಕಲಿಸಲಾಗುತ್ತಿತ್ತು. ಅಂತಹ ವಿವಿಗಳು ಪರಕೀಯರಿಂದ ನಾಶವಾಗಿದ್ದವು. ಪ್ರಧಾನಿಯವರು ನಳಂದ ವಿವಿಯನ್ನು ಪುನರ್



ಉದಯವಾಹಿನಿ ಚಿತ್ರ

ನಿರ್ಮಿಸಿದ್ದಾರೆಂದರು. ದೇಶದ ಆರ್ಥಿಕ ಸ್ಥಿತಿ ವಿಶ್ವದಲ್ಲಿ ಐದನೇ ಸ್ಥಾನದಲ್ಲಿದ್ದು ಉತ್ತಮವಾಗಿದೆ ಮತ್ತಷ್ಟು ಸುಧಾರಣೆಯಾಗಬೇಕಿದೆ. ಶಿಕ್ಷಣದಿಂದ ಮಾತ್ರ ವ್ಯಕ್ತಿ ವಿಕಾಸ ಸಾಧ್ಯ, ಶಿಕ್ಷಣ ಜೀವನದಲ್ಲಿ ಮಾನಿಸಿಕ ಮತ್ತು ಭದ್ಧಿಕ ವಿಕಾಸ ನೀಡಲಿದೆಂದರು.

ಅಧುನಿಕ ಭಾರತದಲ್ಲಿ ವಿದ್ಯಾರ್ಥಿಗಳು ಕೇವಲ ಓದಿದರೆ ಅಷ್ಟೇ ಸಾಲದು ಕ್ರೀಡೆ ಮತ್ತಿತರ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು. ಹೊಸ ಸಂಕಲ್ಪಗಳನ್ನು ಕೈಗೊಂಡು ಮುನ್ನಡೆಯಿರಿ ಈ ಶಿಕ್ಷಣ ಸಂಸ್ಥೆ ಭವಿಷ್ಯದಲ್ಲಿ ವಿವಿಯಾಗಲು ಎಲ್ಲಾ ರೀತಿಯ ಸಹಕಾರ ನೀಡಲಿದೆಂದರು.

ಸಮಾರಂಭದಲ್ಲಿ ಶಾಸಕ ಗಾಲಿ ಜನಾರ್ಧನರೆಡ್ಡಿ ಮಾತನಾಡಿ, ಬೆಂಗಳೂರು ನಂತರ ಬಳ್ಳಾರಿ ಅಭಿವೃದ್ಧಿ ಜಿಲ್ಲೆಯನ್ನಾಗಿ ಮಾಡುವ ಕನಸಿತ್ತು. ಈ ದಿಶೆಯಲ್ಲಿ ಭವ್ಯ ಮತ್ತು ಶೇಖರ್ ಅವರು ಇಂತಹ ಗ್ರಾಮೀಣ ಪ್ರದೇಶದಲ್ಲಿ ಈ ಸಂಸ್ಥೆ ಆರಂಭಿಸಿ ಉತ್ತಮ ಶಿಕ್ಷಣ ನೀಡುತ್ತಿದ್ದಾರೆ.

**ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ದೇಶದ ಹಲವು ರಾಜ್ಯಗಳಲ್ಲಿ ಜಾರಿಯಲ್ಲಿದೆ. ಕರ್ನಾಟಕದಲ್ಲೂ ಜಾರಿ ಇದೆ. ಮಾತೃಭಾಷೆಗಳಲ್ಲಿ ಶಿಕ್ಷಣ ನೀಡಬೇಕೆಂಬುದು ಸರಿಯಾದ ವಿಚಾರ. ಆಯಾ ರಾಜ್ಯಗಳಲ್ಲಿ ಎಲ್ಲಾ ರೀತಿಯ ಶಿಕ್ಷಣ ನೀಡಬೇಕಿದೆ. ಇದಕ್ಕೆ ರಾಷ್ಟ್ರೀಯ ಶಿಕ್ಷಣ ನೀತಿ ಅಡ್ಡಿಯಾಗದು -ಗೆಹ್ಲೋಟ**

# ಬಸವಣ್ಣ ಮೂರ್ತಿಗೆ ಅಪಮಾನ ಮಾಡಿದವರಿಗೆ ಕಠಿಣ ಶಿಕ್ಷೆಯಾಗಲಿ

• ಉದಯವಾಹಿನಿ, ಕೆಂಭಾವಿ

ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ದಾಡಗಿ ಕ್ರಾಸ್ ಬಳಿ ಜಗಜ್ಯೋತಿ ಬಸವೇಶ್ವರ ಪ್ರತಿಮೆಗೆ ಅಪಮಾನ ಮಾಡಿರುವ ಕಿಡಿಗಳನ್ನು ಕೂಡಲೇ ಬಂಧಿಸಿ ಗಡಿಪಾರು ಮಾಡಬೇಕು ಎಂದು ಸುರಪುರ ತಾಲ್ಲೂಕು ವೀರಶೈವ-ಲಿಂಗಾಯತ ಸಮಾಜದ ತಾಲ್ಲೂಕಾಧ್ಯಕ್ಷ ಡಾ.ಸುರೇಶ ಸಜ್ಜನ್ ಅವರು ಹೇಳಿದರು. ಕೆಲವು ಕಿಡಿಗೇಡಿಗಳು ಬಸವೇಶ್ವರ ಪ್ರತಿಮೆಯ ಕೈ ಮುರಿದು ಅವಮಾನಿಸಿದರಲ್ಲದೆ ಧ್ವಜದ ಕಂಬ ಕಿತ್ತೆಸೆಯಲು ಮುಂದಾಗಿದ್ದು ಈಗಾಗಲೇ ಭಾಲ್ಕಿ ತಾಲ್ಲೂಕಿನ ಆ ಗ್ರಾಮದ ಗ್ರಾಮಸ್ಥರು ಹಾಗೂ ವೀರಶೈವ ಸಮಾಜದ ಮುಖಂಡರು, ಯುವಕರು,ಬಸವ ಅನುಯಾಯಿಗಳು ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟಿಸಿದ್ದಾರೆ ಕೂಡಲೇ ಕಿಡಿಗೇಡಿಗಳನ್ನು ಶೀಘ್ರದಲ್ಲಿಯೇ ಬಂಧಿಸಿ ಕಠಿಣ ಕಾನೂನು ಶಿಕ್ಷೆಗೆ ಒಳಪಡಿಸಿ ಅವರನ್ನು ರಾಜ್ಯದಿಂದಲೇ ಗಡಿಪಾರು ಮಾಡಬೇಕು ಒಂದು ವೇಳೆ ಆರೋಪಿಗಳನ್ನು ಬಂಧಿಸದಿದ್ದಲ್ಲಿ ತಾಲ್ಲೂಕು ವೀರಶೈವ-ಲಿಂಗಾಯತ ಸಮಾಜದಿಂದ ಉಗ್ರವಾಗಿ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದ್ದಾರೆ.

# ಜಿಲ್ಲಾ ಆಸ್ಪತ್ರೆಗೆ ಜಿಲ್ಲಾಧಿಕಾರಿ ದಿಢೀರ್ ಭೇಟಿ

• ಉದಯವಾಹಿನಿ, ವಿಜಯಪುರ

ಇಲ್ಲಿನ ಜಿಲ್ಲಾ ಆಸ್ಪತ್ರೆಯ ತುರ್ತು ಚಿಕಿತ್ಸೆ ವಿಭಾಗಕ್ಕೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಜ.15ರಂದು ಅನೀರಿಕ್ಷಿತವಾಗಿ ಭೇಟಿ ನೀಡಿದರು. ಅಲ್ಲಿರುವ ರೋಗಿಗಳ ಆರೈಕೆಯ ಕುರಿತು ವೈದ್ಯರು ಮತ್ತು ಸಿಬ್ಬಂದಿಯವರಿಂದ ಮಾಹಿತಿಯನ್ನು ಪಡೆದರು. ರೋಗಿಗಳಿಗೆ ಮತ್ತು ರೋಗಿಯ ಸಂಬಂಧಿಕರಿಗೆ ನೀಡುತ್ತಿರುವ ಸೌಲಭ್ಯದ ಬಗ್ಗೆ ವಿಚಾರಿಸಿದರು. ಆಸ್ಪತ್ರೆಯಲ್ಲಿ ಸ್ವಚ್ಛತೆ, ವಿದ್ಯುತ್ ವ್ಯವಸ್ಥೆ, ನೀರು ಮತ್ತು ಇನ್ನಿತರ ಸೌಲಭ್ಯವನ್ನು ಸಮರ್ಪಕಾಗಿ ನೀಡಲು ವೈದ್ಯರಿಗೆ ಸೂಚಿಸಿದರು. ಜೊತೆಗೆ ಆಸ್ಪತ್ರೆಗೆ ಬರುವ ರೋಗಿಗಳಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳಲು ತಿಳಿಸಿದರು. ಕಾರ್ಯನಿರತ ವೈದ್ಯಾಧಿಕಾರಿ ಡಾ. ತಿಮ್ಮಾಪುರ ಗಲಗಲಿ, ರಾತ್ರಿ ಪಾಳೆಯ ಸೂಪರ್ವೈಸರ್ ರೇಖಾ ಇಂಗಳೇಶ್ವರ ಹಾಗೂ ಇತರರು ಉಪಸ್ಥಿತರಿದ್ದರು.

# 24ರಂದು ಸನ್ನತಿ ಪಂಚಶೀಲ ಪಾದಯಾತ್ರೆ ಸಮಾರೋಪ ಸಮಾರಂಭ

## ಬೌದ್ಧ ಸಮುದಾಯದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಫ್ರೀಡಮ್ ಪಾರ್ಕ್‌ನಲ್ಲಿ ಪಾದಯಾತ್ರೆ

• ಉದಯವಾಹಿನಿ, ಕಲಬುರಗಿ

ಬೌದ್ಧ ಐತಿಹಾಸಿಕ ಕ್ಷೇತ್ರ ಸನ್ನತಿ ಅಭಿವೃದ್ಧಿ ಮಂಡಳಿ ಪೂರ್ಣ ಪ್ರಮಾಣದಲ್ಲಿ ರಚಿಸಿ ಆಂಧ್ರಪ್ರದೇಶದ ಬುದ್ಧವನ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲೂ ಆಗ್ರಹಿಸಿ ಮತ್ತು ಬೌದ್ಧ ಸಮುದಾಯದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ನಾಡಿನ ಭಿಕ್ಕು ಮತ್ತು ಭಿಕ್ಕುಣಿ ಸಂಘದ ಭಂತೆ ಭೋಧಿದತ್ತ ಅವರ ನೇತೃತ್ವದಲ್ಲಿ ದಿನಾಂಕ 15-11-2024 ರಂದು ಸನ್ನತಿಯಿಂದ ಪ್ರಾರಂಭವಾದ ಪಂಚಶೀಲ ಪಾದಯಾತ್ರೆ, ಸಮಾರೋಪ ಸಮಾರಂಭ ಜ.24 ರಂದು ಬೆಳಿಗ್ಗೆ 9 ಗಂಟೆಗೆ ಬೆಂಗಳೂರಿನ ಫ್ರೀಡಮ್ ಪಾರ್ಕ್‌ನಲ್ಲಿ ನಡೆಯಲಿದೆ ಎಂದು ಸನ್ನತಿ ಪಂಚಶೀಲ ಪಾದಯಾತ್ರೆ, ಸಮಾರೋಪ ಸಮಾರಂಭ ಸಂಘಟನಾ ಸಮಿತಿ ಸಂಚಾಲಕರಾದ ಎ.ಬಿ.ಹೊಸಮನಿ, ಸೂರ್ಯಕಾಂತ ನಿಂಬಾಳಕರ್, ಸುನೀಲ ಮಾನ್ಪಡೆ, ಅಶ್ವಿನಿ ಮದನಕರ್ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸನ್ನತಿಯಿಂದ ಪ್ರಾರಂಭವಾದ ಪಂಚಶೀಲ ಪಾದಯಾತ್ರೆ, ಕರ್ನಾಟಕ ರಾಜ್ಯದಲ್ಲಿ ಇರುವ ಸಾಮ್ರಾಟ್ ಅಶೋಕರ 09 ಶಿಲಶಾಸನಗಳಿಗೆ ಭೇಟಿ ನೀಡಿ ಅಲ್ಲಿಯ ಅವಶ್ಯಕತೆಗಳ ಬಗ್ಗೆ ಸಂಕ್ಷಿಪ್ತವಾಗಿ ಅಧ್ಯಯನಮಾಡುತ್ತ ಕಲಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯನಗರ, ಬಳ್ಳಾರಿ, ಚಿತ್ರದುರ್ಗಾ, ತುಮಕೂರು, ಬೆಂಗಳೂರು ಗ್ರಾಮಾಂತಾರ ಜಿಲ್ಲೆಗಳಲ್ಲಿ ಸಂಚರಿಸಿ ಸುಮಾರು 800 ಕಿಮೀ ಕ್ಕೂ ಹೆಚ್ಚು ದೂರ ಕ್ರಮಿಸಿ ಹಲವು ಗ್ರಾಮಗಳಲ್ಲಿ ವಾಸ್ತವ್ಯಮಾಡಿ, ಧಮ್ಮ ಸಂದೇಶ ನೀಡಲಾಗಿದೆ. ಬೌದ್ಧ ಸಮುದಾಯದ ವಿವಿಧ ಬೇಡಿಕೆಗಳ ಈಡೇರಿಕೆಗೆ ಜನಜಾಗೃತಿ ಮೂಡಿಸುತ್ತಾ ಆಯ್ದ ಸ್ಥಳಗಳಲ್ಲಿ ಧಮ್ಮಾ ದೀಕ್ಷಾ ನೀಡುತ್ತಾ ಮುಂದುವರೆದು ದಿನಾಂಕ ಜ. 23 ರಂದು ಯಶವಂತಪೂರ ಮಾರ್ಗವಾಗಿ ಡಾ.ಬಿ.ಆರ್. ಅಂಬೇಡ್ಕರ್ ರವರ ಕನಸಿನ ದಕ್ಷಿಣ ಭಾರತ ಧಮ್ಮ ಕೇಂದ್ರವಾದ ಬೆಂಗಳೂರಿನ ಸದಾಶಿವ ನಗರದ ನಾಗಸೇನ ಬುದ್ಧವಿಹಾರ ತಲುಪಿ ವಾಸ್ತವ್ಯ ಮಾಡಲಾಗುವದು. ಜ.24 ರಂದು ಬೆಳಗ್ಗೆ 9:00 ಗಂಟೆಗೆ ನಾಗಸೇನ ಬುದ್ಧ ವಿಹಾರದಿಂದ ಹೊರಟು ಬೆಂಗಳೂರು ಫ್ರೀಡಮ್ ಪಾರ್ಕ ತಲುಪಿ ಅಲ್ಲಿ ಸಮಾರೋಪ ಸಮಾರಂಭ ನಡೆಯಲಿದೆ ಎಂದು ವಿವರಿಸಿದರು. ಈ ಸಮಾರೋಪ ಸಮಾರಂಭದಲ್ಲಿ ಸುಮಾರು 10ಸಾವಿರಕ್ಕೂ ಹೆಚ್ಚು ಜನರು ಶಾಂತಿಪೂರ್ವಕವಾಗಿ ಪಾದಯಾತ್ರೆಯಲ್ಲಿ ಭಾಗವಹಿಸಿ ಪ್ರೀಡಮ್ ಪಾರ್ಕ ತಲುಪಿ ಬಹಿರಂಗ ಸಭೆಯಲ್ಲಿ ಸಮಾರೋಪಗೊಳ್ಳಲಿದ್ದಾರೆ.



ಉದಯವಾಹಿನಿ ಚಿತ್ರ

### 1000 ಕೋಟಿ ಅನುದಾನ ಈ ಬಜೆಟ್‌ನಲ್ಲಿ ಒದಗಿಸಬೇಕು

**ಬೌದ್ಧ ಐತಿಹಾಸಿಕ ಕ್ಷೇತ್ರ ಸನ್ನತಿ ಅಭಿವೃದ್ಧಿ ಮಂಡಳಿ ಪೂರ್ಣ ಪ್ರಮಾಣದಲ್ಲಿ ರಚಿಸಿ ಸನ್ನತಿ ಅಭಿವೃದ್ಧಿ ಪ್ರಾಧಿಕಾರದ ಯೋಜನೆಯನ್ನು ಆಂಧ್ರದ ಬುದ್ಧವನ ಮಾದರಿಯಲ್ಲಿ ಕನಿಷ್ಠ 200 ಎಕರೆ ಪ್ರದೇಶದಲ್ಲಿ ಜಾಗತಿಕ ಮಟ್ಟದಲ್ಲಿ ಅಭಿವೃದ್ಧಿಪಡಿಸಿ ಸನ್ನತ್ತಿಯನ್ನು 7 ಸ್ಟಾರ್ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಮಾಡಬೇಕು, ಪರಿಶಿಷ್ಟ ಜಾತಿಯ ಬೌದ್ಧರ ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಾಗಿ ಕರ್ನಾಟಕ ಬೌದ್ಧ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಬೇಕು, ಬೌದ್ಧರ ಸವಾರ್‌ಂಗಣ ಅಭಿವೃದ್ಧಿ ಹಾಗೂ ಬೌದ್ಧ ಕ್ಷೇತ್ರಗಳ ಅಭಿವೃದ್ಧಿಗಾಗಿ ಕನಿಷ್ಠ 1000 ಕೋಟಿ ಅನುದಾನ ಈ ಬಜೆಟ್‌ನಲ್ಲಿ ಒದಗಿಸಬೇಕು,**

**ಈ ಅಂತಿಮ ಘಟ್ಟದ ಪಾದಯಾತ್ರೆಯಲ್ಲಿ ಕರ್ನಾಟಕ ರಾಜ್ಯದ ಸಮಸ್ತ ಬಿಕ್ಕು ಸಂಘ ಬೌದ್ಧ ಸಂಘ ಸಂಸ್ಥೆಗಳು, ಎಲ್ಲಾ ದಲಿತ ಸಂಘರ್ಷ ಸಮಿತಿಗಳ ರಾಜ್ಯ ಸಂಚಾಲಕರು, ಮುಖಂಡರು, ನೌಕರರು, ವಿದ್ಯಾರ್ಥಿ ಯುವಜನರು, ಕಾರ್ಮಿಕರು, ಮಹಿಳೆಯರು ಮತ್ತು ಪ್ರಗತಿಪರ ಚಿಂತಕರು ಭಾಗವಹಿಸುವರು. ಬೌದ್ಧ ಸಮುದಾಯದ ವಿವಿಧ ಬೆಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಮುಖ್ಯಮಂತ್ರಿಯವರಿಗೆ ಮನವಿ ಪತ್ರವನ್ನು ಸಲ್ಲಿಸಲಾಗುವುದು ಎಂದು ತಿಳಿಸಿದರು.**

**ಬೇಡಿಕೆಗಳ ಈಡೇರಿಕೆಗೆ ಜನಜಾಗೃತಿ**

ಪ್ರತಿ ವರ್ಷ ಮಹಾತ್ಮ ಗೌತಮ್ ಬುದ್ಧ ಜಯಂತಿಗೆ ಸಾರ್ವತ್ರಿಕ ರಜೆ ಘೋಷಣೆ ಮಾಡಬೇಕು, ಬೋಧಗಯ ಟೆಂಪಲ್ ಆಕ್ಟ್ 1949 ರನ್ನು ರದ್ದುಗೊಳಿಸಿ ಬುದ್ಧ ಗಯಾದ ಮಹಾಬೋಧಿ, ಮಹಾ ವಿಹಾರದ ಆಡಳಿತವನ್ನು ಸಂಪೂರ್ಣವಾಗಿ ಬೌದ್ಧರಿಗೆ ನೀಡಬೇಕೆಂದು ಕೇಂದ್ರ ಸರ್ಕಾರಕ್ಕೆ ಮತ್ತು ಬಿಹಾರ ಸರಕಾರಕ್ಕೆ ಸೂಕ್ತ ಶಿಫಾರಸ್ಸು ಮಾಡಬೇಕು, ಕನಾಟಕ ಸರಕಾರ ಪ್ರತಿ ವರ್ಷ ಫೆಬ್ರುವರಿ 12 ರಂದು ಸಾಮ್ರಾಟ್ ಅಶೋಕ ಸನ್ನತಿ ಉತ್ಸವವನ್ನು ಸರಕಾರದ ವತಿಯಿಂದ ಆಚರಣೆ ಮಾಡಬೇಕು, 1990 ರ ಸಂವಿಧಾನ ತಿದ್ದುಪಡಿ ಕಾಯ್ದೆ ಪ್ರಕಾರ ಪರಿಶಿಷ್ಟ ಜಾತಿಯಿಂದ ಬೌದ್ಧ ಧರ್ಮಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಪರಿಶಿಷ್ಟ ಜಾತಿ ವಿದ್ಯಾರ್ಥಿ ವೇತನ ಪಡೆಯಲು ಅನುಕೂಲವಾಗುವಂತೆ ಸಮಾಜ ಕಲ್ಯಾಣ ಇಲಾಖೆಯ ಎಸ್‌ಎಸ್‌ಪಿ ಕೆಎಆರ್ ತಂತ್ರಾಂಶ ಸರಿಪಡಿಸಬೇಕು ಮತ್ತು ಎಲ್ಲಾ ಪರಿಶಿಷ್ಟ ಜಾತಿಯ ಬೌದ್ಧ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಬೇಕು ಎಂಬ ಬೇಡಿಕೆಗಳು ಸೇರಿದಂತೆ ಒಟ್ಟು 16 ಬೇಡಿಕೆಗಳ ಈಡೇರಿಕೆಗೆ ಮುಖ್ಯಮಂತ್ರಿಗಳನ್ನು ಒತ್ತಾಯಿಸಲಾಗುವುದು ಎಂದು ತಿಳಿಸಿದರು.

# ಅಧ್ಯಕ್ಷರಾದ ಮೊದಲ ದಿನವೇ ಈ 11 ಕಡತಗಳಿಗೆ ಸಹಿ

## ಜ.20ರಂದು ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಲಿರುವ ಟ್ರಂಪ್, ಅಧಿಕಾರ ಸ್ವೀಕಾರ ಸಮಾರಂಭಕ್ಕೆ ಭರದ ಸಿದ್ಧತೆ

**ವಾಷಿಂಗ್ಟನ್:** ಡೊನಾಲ್ಡ್ ಟ್ರಂಪ್ ಅವರು ಅಮೆ ರಿಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಲು ದಿನಗಣನೆ ಆರಂಭವಾಗಿದೆ. ಇದೇ ಜ.20ರಂದು ಡೊನಾಲ್ಡ್ ಟ್ರಂಪ್ ಅಮೆರಿಕದ ನೂತನ ಅಧ್ಯಕ್ಷರಾಗಿ ತಮ್ಮ ಎರಡನೇ ಅವಧಿಯನ್ನು ಅಧಿಕೃತವಾಗಿ ಆರಂಭಿಸಲಿದ್ದಾರೆ.

ಇನ್ನು ಡೊನಾಲ್ಡ್ ಟ್ರಂಪ್ ಅಧಿಕಾರ ಸ್ವೀಕರಿಸಿದ ಮೊದಲ ದಿನವೇ ಒಟ್ಟು 11 ಪ್ರಮುಖ ಕಡತಗಳಿಗೆ ಸಹಿ ಹಾಕಲಿದ್ದಾರೆ ಎನ್ನಲಾಗಿದ್ದು, ಈ ಪೈಕಿ ಬಹುತೇಕವು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಟ್ರಂಪ್ ಅವರು ಅಮೆರಿಕದ ಜನತೆಗೆ ನೀಡಿದ್ದ ಭರವಸೆಗಳಾಗಿವೆ. ಟ್ರಂಪ್ ಅವರು ತಮ್ಮ ಮೊದಲ ಅವಧಿಯ ಮೊದಲ ದಿನದಂದು ಕೇವಲ ಒಂದು ಕಾರ್ಯನಿರ್ವಾಹಕ ಆದೇಶಕ್ಕೆ ಸಹಿ ಹಾಕಿದ್ದನ್ನು ಇಲ್ಲಿ ಸ್ಮರಿಸಬಹುದು. ಇದೀಗ ಎರಡನೇ ಅವಧಿಯ ತಮ್ಮ ಅಧ್ಯಕ್ಷಗಿ ರಿಯ ಮೊದಲ ದಿನ, ಡೊನಾಲ್ಡ್ ಟ್ರಂಪ್ ಮಾಡಲಿರುವ 11 ಪ್ರಮುಖ ಕೆಲಸಗಳೇನು ಎಂಬುದನ್ನು ನೋಡುವುದಾದರೆ.

**ಅಕ್ರಮ ವಲಸಿಗರ ಸಾಮೂಹಿಕ ಗಡಿಪಾರು:** ಡೊನಾಲ್ಡ್ ಟ್ರಂಪ್ ಅವರು ತಮ್ಮ ಚುನಾವಣಾ ಭಾಷಣಗಳಲ್ಲಿ ಅಕ್ರಮ ವಲಸಿಗರನ್ನು ಹೊರಹಾಕುವ ವಾಗ್ದಾನ ಮಾಡಿ ದ್ದರು. ಅದರಂತೆ ಅಧಿಕಾರ ಸ್ವೀಕರಿಸಿದ ಮೊದಲ ದಿನವೇ, ದಾಖಲೆರಹಿತ ವಲಸಿಗರ ಸಾಮೂಹಿಕ ಗಡಿಪಾರಿಗೆ ಟ್ರಂಪ್ ಆದೇಶ ಹೊರಡಿಸುವ ಸಾಧ್ಯತೆ ದಟ್ಟವಾಗಿದೆ. 2022ರ ಫೆಡರಲ್ ಅಂದಾಜಿನ ಪ್ರಕಾರ, ಅಮೆರಿಕದಲ್ಲಿ ವಾಸಿಸುವ ದಾಖಲೆರಹಿತ ವಲಸಿಗರ ಸಂಖ್ಯೆ ಸುಮಾರು 11 ಮಿಲಿಯನ್ ಆಗಿದೆ. ಈ ಪೈಕಿ ಸುಮಾರು 500,000 ದಾಖಲೆರಹಿತ ವಲಸಿಗರು ಕ್ರಿಮಿನಲ್ ಹಿನ್ನೆಲೆಯನ್ನು ಹೊಂದಿದ್ದಾರೆ.

**ಅಗ್ರೆಸ್ಸೀವ್ ಅಮೆರಿಕ ನೋಡಲಿದೆ ಜಗತ್ತು?**



**ಜನ್ಮಸಿದ್ಧ ಪೌರತ್ವ ನೀತಿಗೆ ಇತಿಶ್ರೀ:** ಅಮೆರಿಕದಲ್ಲಿ ಜನಿಸಿದ ಯಾರಿಗಾದರೂ ಸ್ವಾಭಾವಿಕವಾಗಿ ಜನ್ಮ ಸಿದ್ಧ ಪೌರತ್ವ ಲಭಿಸುತ್ತದೆ. ಅಮೆರಿಕದ ಸಂವಿಧಾನದ 14ನೇ ತಿದ್ದುಪಡಿಯಲ್ಲಿ ಈ ಹಕ್ಕನ್ನು ನೀಡಲಾಗಿದೆ. ಜನ್ಮಸಿದ್ಧ ಪೌರತ್ವ ನೀತಿ ಅಮೆರಿಕನ್ನರ ಹಿತದೃಷ್ಟಿಯಿಂದ ಉತ್ತಮ ಅಲ್ಲ ಎನ್ನುತ್ತಿರುವ ಟ್ರಂಪ್, ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ತಕ್ಷಣವೇ ಈ ನೀತಿಗೆ ಬದಲಾವಣೆ ತರಲಿದ್ದಾರೆ ಎಂದು ನಿರೀಕ್ಷಿಸಲಾಗಿದೆ.


**ಮುಕ್ತ ಗಡಿ ನೀತಿಗೆ ಫುಲ್‌ಸ್ಟಾಪ್:** ಬೈಡನ್ ಅವ ಧಿಯ ಮುಕ್ತ ಗಡಿ ನೀತಿಯ ಕಟು ಟೀಕಾಕಾರಾಗಿರುವ ಡೊನಾಲ್ಡ್ ಟ್ರಂಪ್, ಅಮೆರಿಕದ ರಾಷ್ಟ್ರೀಯ ಭದ್ರತೆ ದೃಷ್ಟಿಯಿಂದ ಮುಕ್ತ ಗಡಿ ನೀತಿಯನ್ನು ಕೊನೆಗಾಣಿಸುವ ಭರವಸೆ ನೀಡಿದ್ದಾರೆ. ಕೋವಿಡ್ -19 ಬಿಕ್ಕಟ್ಟಿನ ಪ್ರಾರಂಭದಲ್ಲಿ ಜಾರಿಗೆ ತರಲಾದ ಈ ನೀತಿಯಿಂದ ಅಮೆರಿಕ ಭಾರೀ ನಷ್ಟ ಅನುಭವಿಸಿದೆ ಎಂದು ಟ್ರಂಪ್ ಆರೋಪಿಸಿದ್ದಾರೆ. ಅದರಂತೆ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಮೊದಲ ದಿನವೇ, ಮುಕ್ತ ಗಡಿ ನೀತಿಗೆ ಟ್ರಂಪ್ ಫುಲ್‌ಸ್ಟಾಪ್ ಹಾಕುವ ಸಾಧ್ಯತೆ ಇದೆ.

**ವಿದೇಶಾಂಗ ನೀತಿ:** ರಷ್ಯಾ-ಉಕ್ರೇನ್ ಯುದ್ಧವನ್ನು ಕೊನೆಗೊಳಿಸುವುದು ಡೊನಾಲ್ಡ್ ಟ್ರಂಪ್ ಅವರ ಪ್ರಾಥಮಿಕ ಆದ್ಯತೆಯಾಗಿದೆ. ಈ ಕುರಿತು ಚುನಾವಣಾ ಪ್ರಚಾರ ಭಾಷಣಗಳಲ್ಲಿ ಮಾತನಾಡಿದ್ದ ಟ್ರಂಪ್, ಅಧಿಕಾರ ವಹಿಸಿಕೊಂಡ 24 ಗಂಟೆಗಳ ಒಳಗೆ ರಷ್ಯಾ-ಉಕ್ರೇನ್ ಯುದ್ಧಕ್ಕೆ ಅಂತ್ಯ ಹಾಡುವುದಾಗಿ ಭರವಸೆ ನೀಡಿದ್ದರು.

### ಎಲೆಕ್ಟ್ರಿಕ್ ವಾಹನ ಕಡ್ಡಾಯ ಆದೇಶ ರದ್ದು

**2021 ರಲ್ಲಿ ಅಂದಿನ ಅಧ್ಯಕ್ಷ ಜೋ ಬೈಡನ್ ಅವರು, 2030ರ ವೇಳೆಗೆ ಮಾರಾಟವಾದ ಶೇ.50ರಷ್ಟು ಹೊಸ ಕಾರುಗಳು ಮತ್ತು ಟ್ರಕ್‌ಗಳನ್ನು ಶೂನ್ಯ-ಹೊರಸೂಸುವಿಕೆಗೆ ಗುರಿಪಡಿಸುವ ರಾಷ್ಟ್ರವ್ಯಾಪಿ ಗುರಿ ನಿಗದಿಪಡಿಸುವ ಆದೇಶಕ್ಕೆ ಸಹಿ ಹಾಕಿದ್ದರು. ಆದರೆ ಇದರಿಂದ ಅಮೆರಿಕನ್ನರು ಹೊಸ ಎಲೆಕ್ಟ್ರಿಕ್ ಕಾರುಗಳನ್ನು ಖರೀದಿಸಲೇಬೇಕಾದ ಅನಿವಾರ್ಯತೆ ಸಿಲುಕಿದ್ದು, ಅಧಿಕಾರಕ್ಕೆ ಮೊದಲ ದಿನವೇ ಈ ಆದೇಶವನ್ನು ಹಿಂಪಡೆಯುವುದಾಗಿ ಟ್ರಂಪ್ ಭರವಸೆ ನೀಡಿದ್ದರು. ಅದರಂತೆ ಎಲೆಕ್ಟ್ರಿಕ್ ವಾಹನ ಕಡ್ಡಾಯ ಆದೇಶ ಟ್ರಂಪ್ ಅಧಿಕಾರಾವಧಿಯ ಮೊದಲ ದಿನವೇ ರದ್ದಾಗಲಿದೆ ಎಂದು ನಿರೀಕ್ಷಿಸಲಾಗಿ ದೆ. ಕ್ಯಾಲಿಫೋರ್ನಿಯಾವು 2035ರ ವೇಳೆಗೆ ರಾಜ್ಯದಲ್ಲಿ ಎಲ್ಲಾ ಹೊಸ ಕಾರುಗಳ ಮಾರಾಟವು ಶೂನ್ಯ-ಹೊರಸೂಸುವಿಕೆಗೆ ಆದೇಶಿಸುವ ಕಾನೂನನ್ನು ಹೊಂದಿದೆ.**

# ಕೆನಡಾ ಪ್ರಧಾನಿ ಹುದ್ದೆಗೆ ಕನ್ನಡಿಗ ಚಂದ್ರ ಆರ್ಯ ನಾಮಪತ್ರ



**ಒಟ್ಟಾವಾ:** ಜಸ್ಟಿನ್ ಟ್ರುಡೋ ಅವರ ರಾಜೀನಾಮೆಯಿಂದ ತೆರವಾಗಿರುವ ಕೆನಡಾ ಪ್ರಧಾನಿ ಹುದ್ದೆಗೆ ಕನ್ನಡಿಗ ಚಂದ್ರ ಆರ್ಯ ನಾಮ ಪತ್ರ ಸಲ್ಲಿಸಿದ್ದಾರೆ. ನಾಮ ಪತ್ರ ಸಲ್ಲಿಕೆ ನಂತರ ಅವರು ಕನ್ನಡದಲ್ಲೇ ಮಾತನಾಡಿ ಗಮನ ಸೆಳೆದಿದ್ದಾರೆ. ತುಮಕೂರು ಜಿಲ್ಲೆ ಸಿರಾ ತಾಲ್ಲೂಕಿನ ದ್ವಾರಾಳು ಗ್ರಾಮದ ಮೂಲದವರಾಗಿರುವ ಚಂದ್ರ ಆರ್ಯ ಪ್ರಧಾನಿ ಹುದ್ದೆಗೆ ಸ್ಪರ್ಧಿಸುವುದಾಗಿ ಘೋಷಿಸಿದ್ದಾರೆ.

ಕೆನಡಾ ದೇಶದ ಸಂಸತ್ತಿನಲ್ಲಿ ನನ್ನ ಮಾತಭಾಷೆ ಕನ್ನಡದಲ್ಲಿ ಮಾತನಾಡಲು ಅವಕಾಶ ಸಿಕ್ಕಿರುವುದಕ್ಕೆ ಸಂತೋಷವಾಗುತ್ತಿದೆ. ಭಾರತ ದೇಶದ ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ, ಸಿರಾ ತಾಲ್ಲೂಕಿನ ವ್ಯಕ್ತಿಯೊಬ್ಬ ಕೆನಡಾದಲ್ಲಿ ಸಂಸತ್ ಸದಸ್ಯನಾಗಿ ಆಯ್ಕೆಯಾಗಿ ಮತ್ತು ಕನ್ನಡದಲ್ಲಿ ಮಾತನಾಡುವುದು, ಸುಮಾರು ಐದು ಕೋಟಿ ಕನ್ನಡಿಗರಿಗೆ ಹಮೆಯ ವಿಚಾರ ಎಂದು ಅವರು ಹೇಳಿದ್ದಾರೆ.

ಕೆನಡಾ ದೇಶದ ಕನ್ನಡಿಗರು 2018ನೇ ಇಸವಿಯಲ್ಲಿ ಕೆನಡಾದ ಈ ಸಂಸತ್ತಿನಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಿದ್ದರು.

ರಾಷ್ಟ್ರಕವಿ ಕುವೆಂಪು ಬರೆದಿರುವ, ನಟಸಾರ್ವಭೌಮ ಡಾ. ರಾಜ್‌ಕುಮಾರ್ ಹಾಡಿರುವ ಭಾವಗೀತೆ ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು, ಕನ್ನಡವೇ ಸತ್ಯ, ಕನ್ನಡವೇ ನಿತ್ಯ ಎಂದು ಹೇಳುವ ಮೂಲಕ ಮಾತು ಮುಗಿಸಿದರು. 2040ರಲ್ಲಿ ನಿವೃತ್ತಿ ವಯಸ್ಸನ್ನು ಎರಡು ವರ್ಷ ಗಳವರೆಗೆ ಹೆಚ್ಚಿಸುವುದು, ಪೌರತ್ವ ಆಧಾರಿತ ತೆರಿಗೆ ವ್ಯವಸ್ಥೆಯನ್ನು ಪರಿಚಯಿಸುವುದು, ಪ್ಯಾಲೆಸ್ಟೈನ್ ಅನ್ನು ಒಂದು ರಾಷ್ಟ್ರವಾಗಿ ಗುರುತಿಸುವುದು ಚಂದ್ರ ಆರ್ಯ ಭರವಸೆ ಗಳನ್ನು ಈಗಾಗಲೇ ನೀಡಿದ್ದರು.

ನಮ ರಾಷ್ಟ್ರವನ್ನು ಪುನರ್ನಿರ್ಮಿಸಲು ಮತ್ತು ಭವಿಷ್ಯದ ಪೀಳಿಗೆಗೆ ಸಮದ್ಧಿಯನ್ನು ಖಚಿತಪಡಿಸಿಕೊಳ್ಳಲು ಸಣ್ಣ, ಹೆಚ್ಚು ಪರಿಣಾಮಕಾರಿ ಸರ್ಕಾರವನ್ನು ಮುನ್ನಡೆಸಲು ಕೆನಡಾದ ಮುಂದಿನ ಪ್ರಧಾನಿಯಾಗಲು ನಾನು ಸ್ಪರ್ಧಿ ಸುತ್ತಿದ್ದೇನೆ ಎಂದು 2015 ರಲ್ಲಿ ನೇಪಿಯನ್‌ನ ಉಪ ನಗರ ರೈಡಿಂಗ್‌ನಲ್ಲಿ ಮೊದಲ ಬಾರಿಗೆ ಆಯ್ಕೆಯಾದ ಆರ್ಯ ಹೇಳಿದ್ದರು.

# ಭಾರತದ ಆರ್ಥಿಕ ಬೆಳವಣಿಗೆ ಚೇತರಿಕೆ; ವಿಶ್ವಬ್ಯಾಂಕ್

**ವಾಷಿಂಗ್ಟನ್:** ದಕ್ಷಿಣ ಏಷ್ಯಾದ ವಿಶ್ವಬ್ಯಾಂಕ್‌ನ ಇತ್ತೀಚಿನ ಬೆಳವಣಿಗೆಯ ಅಂದಾಜಿನ ಪ್ರಕಾರ, ಏಪ್ರಿಲ್ 2025 ರಿಂದ ಪ್ರಾರಂಭವಾಗುವ ಮುಂದಿನ ಎರಡು ಹಣಕಾಸು ವರ್ಷಗಳಲ್ಲಿ ಭಾರತದ ಆರ್ಥಿಕ ಬೆಳವಣಿಗೆಯು ವಾರ್ಷಿಕ ಶೇ. 6.7 ರಷ್ಟು ಸ್ಥಿರವಾಗಿರುತ್ತದೆ ಎಂದು ಅಂದಾಜಿಸಲಾಗಿದೆ. 2025-26ರಲ್ಲಿ ದಕ್ಷಿಣ ಏಷ್ಯಾದ ಬೆಳವಣಿಗೆಯು ಶೇ. 6.2 ಕ್ಕೆ ಏರುವ ನಿರೀಕ್ಷೆಯಿದೆ, ಭಾರತದಲ್ಲಿ ಯೋಜಿತ ಸಂಸ್ಥೆಯ ಬೆಳವಣಿಗೆಯೊಂದಿಗೆ ವಿಶ್ವಬ್ಯಾಂಕ್ ಈ ಹೇಳಿಕೆ ನೀಡಿದೆ.

ಭಾರತದಲ್ಲಿ, ಏಪ್ರಿಲ್ 2025 ರಿಂದ ಪ್ರಾರಂಭವಾಗುವ ಎರಡು ಹಣಕಾಸಿನ ವರ್ಷಗಳಲ್ಲಿ ವರ್ಷಕ್ಕೆ ಶೇ. 6.7 ರಷ್ಟು ಬೆಳವಣಿಗೆಯು ಸ್ಥಿರವಾಗಿರುತ್ತದೆ ಎಂದು ಅದು ಹೇಳಿದೆ.

ಸೇವಾ ವಲಯವು ನಿರಂತರ ವಿಸ್ತರಣೆಯನ್ನು ಆನಂದಿಸುವ ನಿರೀಕ್ಷೆಯಿದೆ, ಉತ್ಪಾದನಾ ಚಟುವಟಿಕೆಯು ಬಲಗೊಳ್ಳುತ್ತದೆ, ವ್ಯಾಪಾರದ ವಾತಾವರಣವನ್ನು ಸುಧಾರಿಸಲು ಸರ್ಕಾರದ ಉಪಕ್ರಮಗಳಿಂದ ಬೆಂಬಲಿತವಾಗಿದೆ. ಹೂಡಿಕೆಯ ಬೆಳವಣಿಗೆಯು



ಸ್ಥಿರವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ, ಹೆಚ್ಚುತ್ತಿರುವ ಖಾಸಗಿ ಹೂಡಿಕೆಯಿಂದ ಸಾರ್ವಜನಿಕ ಹೂಡಿಕೆಯನ್ನು ಮಿತಗೊಳಿಸುವುದು ಎಂದು ಬ್ಯಾಂಕ್ ಹೇಳಿದೆ.

ಆದಾಗ್ಯೂ, ಖಾಸಗಿ ಬಳಕೆಯ ಬೆಳವಣಿಗೆಯು ಸ್ಥಿತಿಸ್ಥಾಪಕತ್ವವನ್ನು ಹೊಂದಿದೆ, ಪ್ರಾಥಮಿಕವಾಗಿ ಸುಧಾರಿತ ಗ್ರಾಮೀಣ ಆದಾಯವು ಕಷಿ ಉತ್ಪಾದನೆಯ ಚೇತರಿಕೆಯೊಂದಿಗೆ ನಡೆಸಲ್ಪಡುತ್ತದೆ ಎಂದು ವಿಶ್ವ ಬ್ಯಾಂಕ್ ಹೇಳಿದೆ. ಭಾರತವನ್ನು ಹೊರತುಪಡಿಸಿ, ಈ ಪ್ರದೇಶದಲ್ಲಿನ ಬೆಳವಣಿಗೆಯು 2024 ರಲ್ಲಿ ಶೇಕಡಾ 3.9 ಕ್ಕೆ ಏರಿದೆ ಎಂದು ಅಂದಾಜಿಸಲಾಗಿದೆ, ಮುಖ್ಯವಾಗಿ ಪಾಕಿಸ್ತಾನ ಮತ್ತು ಶ್ರೀಲಂಕಾದಲ್ಲಿನ ಚೇತರಿಕೆಗಳನ್ನು ಪ್ರತಿಬಿಂಬಿಸುತ್ತದೆ, ಹಿಂದಿನ ಆರ್ಥಿಕ ತೊಂದರೆಗಳನ್ನು ಪರಿಹರಿಸಲು ಅಳವಡಿಸಿಕೊಂಡ ಸುಧಾರಿತ ಸ್ಥೂಲ ಆರ್ಥಿಕ ನೀತಿಗಳಿಂದ ಬೆಂಬಲಿತವಾಗಿದೆ.

ಬಾಂಗ್ಲಾದೇಶದಲ್ಲಿ, 2024 ರ ಮಧ್ಯದಲ್ಲಿ ರಾಜಕೀಯ ಪ್ರಕ್ಷುಬ್ಧತೆಯು ಚಟುವಟಿಕೆಯ ಮೇಲೆ ತೂಗುತ್ತದೆ ಮತ್ತು ಹೂಡಿಕೆದಾರರ ವಿಶ್ವಾಸವನ್ನು ಹದಗೆಡಿಸಿತು. ಪೂರೈಕೆಯ ನಿರ್ಬಂಧಗಳು, ಇಂಧನ ಕೊರತೆ, ಆಮದು ನಿರ್ಬಂಧಗಳನ್ನು ಪ್ರತಿಬಿಂಬಿಸುತ್ತದೆ, ದುರ್ಬಲ ಕೈಗಾರಿಕಾ ಚಟುವಟಿಕೆ ಮತ್ತು ಹೆಚ್ಚಿದ ಬೆಲೆ ಒತ್ತಡಕ್ಕೆ ಕಾರಣವಾಯಿತು, ಎಂದು ವರದಿ ಹೇಳಿದೆ.


**ಭಾರತದಲ್ಲಿನ ಬೆಳವಣಿಗೆಯು 2024/25 ರ ಹಣಕಾಸು ವರ್ಷದಲ್ಲಿ (ಏಪ್ರಿಲ್ 2024 ರಿಂದ ಮಾರ್ಚ್ 2025 ರವರೆಗೆ) ಶೇಕಡಾ 6.5 ಕ್ಕೆ ಮದುವಾಗುತ್ತದೆ ಎಂದು ನಿರೀಕ್ಷಿಸಲಾಗಿದೆ, ಇದು ಹೂಡಿಕೆಯಲ್ಲಿನ ನಿಧಾನಗತಿ ಮತ್ತು ದುರ್ಬಲ ಉತ್ಪಾದನಾ ಬೆಳವಣಿಗೆಯನ್ನು ಪ್ರತಿಬಿಂಬಿಸುತ್ತದೆ ಎಂದು ಅದು ಹೇಳಿದೆ.**

# ಸತತ ಮೂರನೇ ವರ್ಷವೂ ಚೀನಾದ ಜನಸಂಖ್ಯೆ ಕುಸಿತ

**ಬೀಜಿಂಗ್:** ಚೀನಾದ ಜನಸಂಖ್ಯೆಯು ಕಳೆದ ವರ್ಷದಿಂದ ಸತತ ಮೂರನೇ ವರ್ಷವೂ ಕುಸಿದಿದೆ ಎಂದು ಅದರ ಸರ್ಕಾರ ಹೇಳಿದೆ, ವಿಶ್ವದ ಎರಡನೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರಕ್ಕೆ ಮತ್ತಷ್ಟು ಜನಸಂಖ್ಯಾ ಸವಾಲು ಎದುರಾಗಿದೆ . ಇದು ಹಿರಿಯರ ಜನಸಂಖ್ಯೆ ಹೆಚ್ಚಿದೆ ಕೆಲಸ ಮಾಡುವ ಯುವಸಮುದಾಯದ ಕೊರತೆಯನ್ನು ಎದುರಿಸುತ್ತಿದೆ.ಕಳೆದ 2024 ರ ಅಂತ್ಯದ ವೇಳೆಗೆ ಚೀನಾದ ಜನಸಂಖ್ಯೆಯು 1.408 ಶತಕೋಟಿ. ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ 1.39 ಮಿಲಿಯನ್ ಕುಸಿತವಾಗಿದೆ ಎಂದು ಅಂಕಿಅಂಶ ತಿಳಿಸಿದೆ. ಆದರೆ ವಿಶೇಷವಾಗಿ ಪೂರ್ವ ಏಷ್ಯಾದ ಜಪಾನ್, ದಕ್ಷಿಣ ಕೊರಿಯಾ, ಹಾಂಗ್ ಕಾಂಗ್, ಇತರ ರಾಷ್ಟ್ರಗಳು ತಮದೇಶದಲ್ಲಿ ಜನನ ಪ್ರಮಾಣ ದರಗಳು ಕುಸಿಯುತ್ತಿದೆ.ಹೆಚ್ಚುತ್ತಿರುವ ಜೀವನ ವೆಚ್ಚಗಳು, ಯುವಜನರು ಉನ್ನತ ಶಿಕ್ಷಣ ಮತ್ತು ವೃತ್ತಿಜೀವನವನ್ನು ಅನುಸರಿಸುವಾಗ ಮದುವೆ, ಮಕ್ಕಳ ಜನನವನ್ನು ಮುಂದೂಡಲು ಅಥವಾ ತಳ್ಳಿ ಹಾಕುತ್ತಿರುವುದು ಇದಕ್ಕೆ ಕಾರಣ ಎನ್ನಲಾಗುತ್ತಿದೆ.

ಎರಡನೇ ಮಹಾಯುದ್ಧದ ಅಂತ್ಯ ಮತ್ತು 1949 ರಲ್ಲಿ ಕಮ್ಯುನಿಸ್ಟ್ ಪಕ್ಷ ಅಧಿಕಾರಕ್ಕೆ ಬಂದ ನಂತರ, ದೊಡ್ಡ ಕುಟುಂಬಗಳು ಮತ್ತೆ ಹುಟ್ಟಿಕೊಂಡವು ಮತ್ತು ಕೃಷಿ ಮತ್ತು ಉದ್ಯಮದಲ್ಲಿ ಕ್ರಾಂತಿಯನ್ನುಂಟುಮಾಡಲು ಪ್ರಯತ್ನಿಸಿದ ಗ್ರೇಟ್ ಲೀಪ್ ಫಾರ್ವರ್ಡ್ ಮತ್ತು ಕೆಲವು ವರ್ಷಗಳ ನಂತರ ನಡೆದ ಸಾಂಸ್ಕೃತಿಕ ಕ್ರಾಂತಿಯಲ್ಲಿ ಹತ್ತಾರು ಮಿಲಿಯನ್ ಜನರು ಸತ್ತ ನಂತರವೂ, ಕೇವಲ ಮೂರು ದಶಕಗಳಲ್ಲಿ ಜನಸಂಖ್ಯೆಯು ದ್ವಿಗುಣಗೊಂಡಿತು. ಸಾಂಸ್ಕೃತಿಕ ಕ್ರಾಂತಿಯ ಅಂತ್ಯ, ನಾಯಕ ಮಾವೋ ಝೆಡಾಂಗ್ ಅವರ ಮರಣದ ನಂತರ, ಕಮ್ಯುನಿಸ್ಟ್ ಅಧಿಕಾರಿಗಳು ದೇಶದ ಜನಸಂಖ್ಯೆಯು ತನ್ನನ್ನು ತಾನೇ ಪೋಷಿಸಿಕೊಳ್ಳುವ ಸಾಮರ್ಥ್ಯವನ್ನು ಮೀರುತ್ತಿದೆ ಎಂದು ಚಿಂತಿಸಲು ಪ್ರಾರಂಭಿಸಿದರು ಮತ್ತು ಕಠಿಣವಾದ ಒಂದು ಮಗು ನೀತಿಯನ್ನು ಜಾರಿಗೆ ತರಲು ಪ್ರಾರಂಭಿಸಿದರು. ಇದು ಎಂದಿಗೂ ಕಾನೂನಾಗಿರಲಿಲ್ಲವಾದರೂ, ಮಹಿಳೆಯರು ಮಗುವನ್ನು ಹೊಂದಲು ಅನುಮತಿಗಾಗಿ ಅರ್ಜಿ ಸಲ್ಲಿಸಬೇಕಾಗಿತ್ತು ಮತ್ತು ಉಲ್ಲಂಘಿಸುವವರು ಬಲವಂತದ ತಡವಾಗಿ ಗರ್ಭಪಾತ ಮತ್ತು ಜನನ ನಿಯಂತ್ರಣ ಕಾರ್ಯವಿಧಾನಗಳು, ಭಾರಿ ದಂಡಗಳು ಮತ್ತು ತಮ್ಮ ಮಗುವಿಗೆ ಗುರುತಿನ ಸಂಖ್ಯೆಯನ್ನು ವಂಚಿಸುವ ಸಾಧ್ಯತೆಯನ್ನು ಎದುರಿಸಬೇಕಾಗಿತ್ತು, ಇದು ಪರಿಣಾಮಕಾರಿಯಾಗಿ ಅವರನ್ನು ನಾಗರಿಕರಲ್ಲದವರನ್ನಾಗಿ ಮಾಡುತ್ತದೆ. ಸರ್ಕಾರವು ಹೆಣ್ಣು ಮಕ್ಕಳ ಆಯ್ದ ಗರ್ಭಪಾತವನ್ನು ತೆಗೆದುಹಾಕಲು ಪ್ರಯತ್ನಿಸಿತು, ಆದರೆ ಗರ್ಭಪಾತವು ಕಾನೂನುಬದ್ಧ ಮತ್ತು ಸುಲಭವಾಗಿ ಲಭ್ಯವಿರುವುದರಿಂದ, ಅಕ್ರಮ ಸೋನೋಗ್ರಾಮ್ ಯಂತ್ರಗಳನ್ನು ನಿರ್ವಹಿಸುವವರು ಯಶಸ್ವಿ ವ್ಯವಹಾರವನ್ನು ನಡೆಸಿದರು. ಚೀನಾದ ಅಸಮತೋಲಿತ ಲಿಂಗ ಅನುಪಾತದಲ್ಲಿ ಇದು ಅತಿದೊಡ್ಡ ಅಂಶವಾಗಿದೆ, ಪ್ರತಿ 100 ಹುಡುಗಿಯರಿಗೆ ಲಕ್ಷಾಂತರ ಹೆಚ್ಚು ಗಂಡು ಮಕ್ಕಳು ಜನಿಸುತ್ತಾರೆ, ಇದು ಚೀನಾದ ಬ್ಯಾಚುಲರ್‌ಗಳ ಸೈನ್ಯದಲ್ಲಿ ಸಾಮಾಜಿಕ ಅಸ್ಥಿರತೆಯ ಸಾಧ್ಯತೆಯನ್ನು ಹೆಚ್ಚಿಸಿದೆ. ಇಂದು ವರದಿಯ ಪ್ರಕಾರ ಪ್ರತಿ 100 ಮಹಿಳೆಯರಿಗೆ 105 ಪುರುಷರು ಎಂದು ಲಿಂಗ ಅಸಮತೋಲನವನ್ನು ನೀಡಿದೆ, ಆದರೂ ಈ ಅಸಮತೋಲನವನ್ನು ಗಣನೀಯವಾಗಿ ಹೆಚ್ಚಿಸಿವೆ ಎಂದು ಹೇಳಲಾಗಿದೆ.

ಈಗಾಗಲೇ, ಜನಸಂಖ್ಯೆಯ ಐದನೇ ಒಂದು ಭಾಗಕ್ಕಿಂತ ಹೆಚ್ಚು ಜನರು 60 ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರಾಗಿದ್ದಾರೆ, ಅಧಿಕೃತ ಅಂಕಿ ಅಂಶವನ್ನು 310.3 ಮಿಲಿಯನ್ ಅಥವಾ ಒಟ್ಟು ಜನಸಂಖ್ಯೆಯ 22% ಎಂದು ನೀಡಲಾಗಿದೆ. 2035 ರ ವೇಳೆಗೆ, ಈ ಸಂಖ್ಯೆ 30% ಮೀರುವ ಮುನ್ಸೂಚನೆ ಇದೆ, ಕೆಲವು ಖಾಲಿ ಶಾಲೆಗಳು ಮತ್ತು ಕಿಂಡರ್‌ಗಾರ್ಡನ್‌ಗಳನ್ನು ವೃದ್ಧರಿಗೆ ಆರೈಕೆ ಸೌಲಭ್ಯಗಳಾಗಿ ಪರಿವರ್ತಿಸಲಾಗುತ್ತಿದೆ.



### ಅಭಿವೃದ್ಧಿ ಹೊಂದಿದ ಜನಸಂಖ್ಯೆಯನ್ನು ಉಳಿಸಿಕೊಳ್ಳಲು ಪ್ರಯತ್ನ

**ಜನರು ದೀರ್ಘಕಾಲ ಬದುಕುತ್ತಿದ್ದರೂ, ನವ ಜಾತ ಶಿಶುಗಳ ಜನನ ದರವನ್ನು ಕಾಯ್ದುಕೊಳ್ಳಲು ಅದು ಸಾಕಾಗುವುದಿಲ್ಲ. ವಲಸೆಯನ್ನು ಕಡಿಮೆ ಅನುಮತಿಸುವ ಚೀನಾದಂತಹ ದೇಶಗಳು ವಿಶೇ ಷವಾಗಿ ಅಪಾಯದಲ್ಲಿವೆ ಎಂದು ಪರಿಣಿತರು ಹೇಳಿ ದ್ದಾರೆ. ಚೀನಾ ಬಹಳ ಹಿಂದಿನಿಂದಲೂ ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರಗಳಲ್ಲಿ ಒಂದಾ ಗಿದೆ, ಆಕ್ರಮಣಗಳು, ಪ್ರವಾಹಗಳು ಮತ್ತು ಇತರ ನೈಸರ್ಗಿಕ ವಿಕೋಪಗಳನ್ನು ಸಹಿಸಿಕೊಂಡು ದಕ್ಷಿಣ ದಲ್ಲಿ ಅಕ್ಕಿ, ಉತ್ತರದಲ್ಲಿ ಗೋಧಿಯನ್ನು ಸೇವಿಸಿ ಅಭಿವೃದ್ಧಿ ಹೊಂದಿದ ಜನಸಂಖ್ಯೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ.**

# ಪಿಎಫ್‌ಐ ಮಾಜಿ ಮುಖ್ಯಸ್ಥನಿಗೆ ಜಾಮೀನು ನೀಡಲು ಸುಪ್ರೀಂ ನಕಾರ

**ನವದೆಹಲಿ:** ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ಮಾಜಿ ಮುಖ್ಯಸ್ಥ ಇ.ಅಬೂಬಕ್ಕರ್ ಅವರ ವಿರುದ್ಧ ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ (ಯುಎಪಿಎ) ದಾಖಲಾಗಿರುವ ಪ್ರಕರಣದಲ್ಲಿ ಜಾಮೀನು ನೀಡಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

2022ರಲ್ಲಿ ಪಿಎಫ್‌ಐ ಸಂಘಟನೆಯ ವಿರುದ್ಧ ದೇಶದಾದ್ಯಂತ ನಡೆದ ಕಾರ್ಯಾಚರಣೆ ವೇಳೆ ರಾಷ್ಟ್ರೀಯ ತನಿಖಾ ಸಂಸ್ಥೆಯಿಂದ (ಎನ್‌ಐಎ) ಬಂಧನಕ್ಕೆ ಒಳಗಾಗಿರುವ ಅಬೂಬಕ್ಕರ್ ಅವರು ವೈದ್ಯಕೀಯ ಆಧಾರದ ಮೇಲೆ ಜಾಮೀನು ನೀಡುವಂತೆ ಕೋರಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ವೈದ್ಯಕೀಯ ವರದಿಯನ್ನು ಪರಿಶೀಲಿಸಿದ ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ರಾಜೇಶ್ ಬಿಂದಲ್ ಅವರಿದ್ದ ಪೀಠ, ಅಬೂಬಕ್ಕರ್ ಅವರಿಗೆ ಈ ಹಂತದಲ್ಲಿ ಜಾಮೀನು ನೀಡಲು ಸಾಧ್ಯವಿಲ್ಲ ಎಂದು ಹೇಳಿತು. ಜಾಮೀನಿಗಾಗಿ ವಿಚಾರಣಾ ನ್ಯಾಯಾಲಯದ ಮೊರೆ ಹೋಗುವ ಸ್ವಾತಂತ್ರ್ಯವನ್ನು ಪೀಠವು ಅರ್ಜಿದಾರರಿಗೆ ನೀಡಿದೆ.



ಜಾಮೀನು ನೀಡಲು ಅಸಾಧ್ಯ ಎಂದಾದರೆ, ಅರ್ಜಿದಾರರನ್ನು ಗೃಹಬಂಧನದಲ್ಲಿ ಇರಿಸಲು ಅವಕಾಶ ನೀಡಬೇಕೆಂದು ಅಬೂಬಕ್ಕರ್ ಪರ ವಾದ ಮಂಡಿಸಿದ ಹಿರಿಯ ವಕೀಲ ಗೋಪಾಲ್ ಶಂಕರನಾರಾಯಣ ಅವರ ಮನವಿಯನ್ನೂ ಪೀಠ ತಿರಸ್ಕರಿಸಿತು.

ಎನ್‌ಐಎ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರು ಜಾಮೀನು ನೀಡುವುದನ್ನು ವಿರೋಧಿಸಿದರು. ಅರ್ಜಿದಾರರು ತಮ್ಮ ಎಲ್ಲಾ ಕಾಯಿಲೆಗಳಿಗೂ ಸೂಕ್ತ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ ಎಂಬುದನ್ನು ಪೀಠದ ಗಮನಕ್ಕೆ ತಂದರು. ಕಳೆದ ವರ್ಷ ಮೇ 28ರಂದು ಅಬೂಬಕ್ಕರ್ ಅವರ ಜಾಮೀನು ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು.

ತಮಗೆ 70 ವರ್ಷವಾಗಿದ್ದು, ಪಾರ್ಕಿನ್ಸನ್ ಕಾಯಿಲೆ ಇದೆ. ಕ್ಯಾನ್ಸರ್ ಚಿಕಿತ್ಸೆಗಾಗಿ ಶಸ್ತ್ರಕ್ರಿಯೆಗೂ ಒಳಗಾಗಿದ್ದೇನೆ. ತಮ್ಮ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಪ್ರಬಲ ಸಾಕ್ಷ್ಯಗಳನ್ನು ಒದಗಿಸುವಲ್ಲಿ ಎನ್‌ಐಎ ವಿಫಲವಾಗಿದೆ ಎಂದು ಅಬೂಬಕ್ಕರ್ ಅವರು ಅರ್ಜಿಯಲ್ಲಿ ತಿಳಿಸಿದ್ದರು.

**ಈ ಮನವಿಗೆ ಆಕ್ಷೇಪ ವ್ಯಕ್ತಪಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಗೃಹಬಂಧನಕ್ಕೆ ಮನವಿ ಮಾಡುವುದು ಈಗ ಹೊಸ ಪರಿಕಲ್ಪನೆಯಾಗಿದೆ, ವಿಚಾರಣೆ ವೇಳೆ ಶಂಕರನಾರಾಯಣ ಅವರು ವೈದ್ಯಕೀಯ ವರದಿಯನ್ನು ಉಲ್ಲೇಖಿಸಿ, ಅರ್ಜಿದಾರರು ಪಾರ್ಕಿನ್ಸನ್ ಕಾಯಿಲೆಯಿಂದ ಬಳಲುತ್ತಿದ್ದಾರೆ ಎಂದು ಪೀಠಕ್ಕೆ ತಿಳಿಸಿದರು.**

# ದೋಣಿ ಮಗುಚಿ 50 ಮಂದಿ ಸಾವು



**ಮೊರಾಕೊ:** ಬರೊಬ್ಬರಿ ಎಂಬತ್ತು ವಲಸಿಗರನ್ನು ಹೊತ್ತು ಅಕ್ರಮವಾಗಿ ಸ್ಪೇನ್‌ಗೆ ತೆರಳಲು ಪ್ರಯತ್ನಿಸುತ್ತಿದ್ದ ದೋಣಿ ಮೊರಾಕೊದ ಸಮುದ್ರದಲ್ಲಿ ಮಗುಚಿದ ಪರಿಣಾಮ 40 ಪಾಕಿಸ್ತಾನಿಗಳು ಸೇರಿ ಒಟ್ಟು 50 ಮಂದಿ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ಮೊರೊಕನ್ ಅಧಿಕಾರಿಗಳು ದೋಣಿ ಮೂಲಕ 30 ಜನರನ್ನು ರಕ್ಷಿಸಿದರು. ಈ ದೋಣಿ ಜನವರಿ 2 ರಂದು ಮಾರಿಷಸ್‌ನಿಂದ ಹೊರಟಿತ್ತು. 50ಕ್ಕೂ ಹೆಚ್ಚು ವಲಸಿಗರು ಅಪಘಾತದಲ್ಲಿ ಮುಳುಗಿ ಸಾವನ್ನಪ್ಪಿರುವ ಶಂಕೆ ಇದೆ ಎಂದು ವಲಸೆ ಹಕ್ಕುಗಳ ಗುಂಪು ವಾಕಿಂಗ್ ಬಾರ್ಡರ್ಸ್ ಹೇಳಿದೆ.

ಮತರ ಗುರುತುಗಳನ್ನು ದಢೀಕರಿಸಲು, ಬದುಕುಳಿದವರಿಗೆ ನೆರವು ನೀಡಲು ಪ್ರಯತ್ನಗಳು ನಡೆಯುತ್ತಿವೆ. ಈ ಭೀಕರ ಘಟನೆಯ ನಂತರ ಪರಿಸ್ಥಿತಿಯನ್ನು ನಿಭಾಯಿಸಲು ಮೊರಾಕೊ, ಪಾಕಿಸ್ತಾನ ಎರಡೂ ಅಧಿಕಾರಿಗಳು ಒಟ್ಟಾಗಿ ಕೆಲಸ ಮಾಡುತ್ತಿದ್ದಾರೆ. ಘಟನೆ ಕುರಿತು ಪಾಕಿಸ್ತಾನದ ವಿದೇಶಾಂಗ ಕಚೇರಿ ಹೇಳಿಕೆ ನೀಡಿದೆ. ರಕ್ಷಣಾ ಕಾರ್ಯಾಚರಣೆಯಲ್ಲಿ ನೆರವಾಗಲು ಮೊರಾಕೊದಲ್ಲಿರುವ ತನ್ನ ರಾಯಭಾರ ಕಚೇರಿ ಸ್ಥಳೀಯ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದೆ ಎಂದು ಪಾಕಿಸ್ತಾನ ಹೇಳಿದೆ.


ಹೆಚ್ಚುವರಿಯಾಗಿ, ಪಾಕಿಸ್ತಾನಿ ಪ್ರಜೆಗಳಿಗೆ ಸಹಾಯ ಮಾಡಲು ಮತ್ತು ಅಗತ್ಯ ನೆರವು ನೀಡಲು ಮೊರಾ ಕೊದಲ್ಲಿರುವ ಪಾಕಿಸ್ತಾನಿ ರಾಯಭಾರ ಕಚೇರಿಯ ತಂಡವನ್ನು ದಖ್ಲಾಗೆ ಕಳುಹಿಸಲಾಗಿದೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯದಲ್ಲಿನ ಬಿಕ್ಕಟ್ಟು ನಿರ್ವಹಣಾ ಘಟಕವನ್ನು ಸಹ ಸಕ್ರಿಯ ಗೊಳಿಸಲಾಗಿದೆ. ಪ್ರಧಾನ ಮಂತ್ರಿ ಮತ್ತು ವಿದೇ ಶಾಂಗ ಸಚಿವರು ಸಂತ್ರಸ್ತ ಪಾಕಿಸ್ತಾನಿಗಳಿಗೆ ಸಾಧ್ಯ ವಿರುವ ಎಲ್ಲಾ ನೆರವು ನೀಡುವಂತೆ ಸಂಬಂಧಿತ ಸರ್ಕಾರಿ ಸಂಸ್ಥೆಗಳಿಗೆ ನಿರ್ದೇಶನ ನೀಡಿದ್ದಾರೆ. ಮೌರಿಟಾನಿಯಾದಿಂದ ಹೊರಟಿದ್ದ ಹಲವಾರು ಪಾಕಿಸ್ತಾನಿ ಪ್ರಜೆಗಳು ಸೇರಿದಂತೆ 80 ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ದೋಣಿಯೊಂದು ಮೊರೊಕ್ಕನ್ ಬಂದರಿನ ದಖ್ಲಾದಲ್ಲಿ ಮಗುಚಿದೆ.

# ಇಮ್ರಾನ್ ಖಾನ್, ಪತ್ನಿ ಬುಶ್ರಾ ಬೀಬಿಗೆ ಜೈಲುಶಿಕ್ಷೆ ಪ್ರಕಟ

## ಅಲ್-ಖಾದಿರ್ ಟ್ರಸ್ಟ್ ಭ್ರಷ್ಟಾಚಾರ; ಪಾಕ್ ಮಾಜಿ ಪ್ರಧಾನಿ ಇಮ್ರಾನ್ ಖಾನ್, ಪತ್ನಿ ಬುಶ್ರಾ ಬೀಬಿಗೆ ಸೆರೆವಾಸ

**ಇಸ್ಲಾಮಾಬಾದ್:** ಮಹತ್ವದ ಬೆಳವಣಿಗೆಯೊಂದರಲ್ಲಿ, ಅಲ್-ಖಾದಿರ್ ಟ್ರಸ್ಟ್‌ಗೆ ಸಂಬಂಧಿಸಿದ ಭೂ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ, ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮತ್ತು ಅವರ ಪತ್ನಿ ಬುಶ್ರಾ ಬೀಬಿಗೆ ಸೆರೆವಾಸ ಘೋಷಿಸಿ ಪಾಕ್ ನ್ಯಾಯಾಲಯ ಆದೇಶ ಹೊರಡಿಸಿದೆ.



**ಈ ತೀರ್ಪು ಭಾರೀ ಹಿನ್ನಡೆ**

ಭ್ರಷ್ಟಾಚಾರ ಪ್ರಕರಣದಲ್ಲಿ ಇಮ್ರಾನ್ ಖಾನ್ ಮತ್ತು ಬುಶ್ರಾ ಬೀಬಿ ತಪ್ಪಿಸ್ಥರೆಂದು ಹೇಳಿದ ರಾವಲ್ಪಿಂಡಿ ಭ್ರಷ್ಟಾಚಾರ ವಿರೋಧಿ ನ್ಯಾಯಾಲಯ, ಇಬ್ಬರಿಗೂ ಕ್ರಮವಾಗಿ 14 ಮತ್ತು 7 ವರ್ಷಗಳ ಜೈಲುಶಿಕ್ಷೆ ವಿಧಿಸಿ ಆದೇಶ ಹೊರ ಡಿಸಿತು. ಇಲ್ಲಿನ ಅಡಿಲಾ ಜೈಲಿನಲ್ಲಿ ಸ್ಥಾಪಿಸಲಾದ ತಾತ್ಕಾಲಿಕ ನ್ಯಾಯಾಲಯದಲ್ಲಿ ತೀರ್ಪು ಪ್ರಕಟಿಸಿದ ನ್ಯಾಯಾಧೀಶ ನಾಸೀರ್ ಜಾವೇದ್ ರಾಣಾ, ಇಮ್ರಾನ್ ಖಾನ್ ಅವರಿಗೆ 14 ವರ್ಷ ಮತ್ತು ಬುಶ್ರಾ ಬೀಬಿಗೆ 7 ವರ್ಷ ಜೈಲುಶಿಕ್ಷೆ ವಿಧಿಸಿ ಆದೇಶ ಹೊರಡಿಸಿದರು.

ಆಗಸ್ಟ್ 2023ರಿಂದ ಜೈಲಿನಲ್ಲಿರುವ ಇಮ್ರಾನ್ ಖಾನ್ ಇದೀಗ ಅಲ್-ಖಾದಿರ್ ಟ್ರಸ್ಟ್ ಭ್ರಷ್ಟಾಚಾರ ಪ್ರಕರಣದಲ್ಲೂ ಜೈಲು ಶಿಕ್ಷೆಯನ್ನು ಅನುಭವಿಸಬೇಕಾಗಿ ಬಂದಿದೆ. ಬುಶ್ರಾ ಬೀಬಿ ಕೂಡ ಜೈಲು ಶಿಕ್ಷೆಗೆ ಗುರಿಯಾಗಿದ್ದಾರೆ.

ಏನಿದು ಅಲ್-ಖಾದಿರ್ ಟ್ರಸ್ಟ್ ವಿವಾದ

ಇಮ್ರಾನ್ ಖಾನ್ ಪಾಕಿಸ್ತಾನದ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ, ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಝೀಲಂನಲ್ಲಿರುವ ಅಲ್ ಖಾದಿರ್ ವಿಶ್ವವಿದ್ಯಾಲಯಕ್ಕಾಗಿ 458 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಈ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಭಾರೀ ಅವ್ಯವಹಾರವಾಗಿದೆ ಎಂಬ ಆರೋಪ ಕೇಳಿ ಬಂದಿತ್ತು.

ವಿವಿ ಪದಾಧಿಕಾರಿಯಾಗಿ ಬುಶ್ರಾ ಬೀಬಿ ಅವರ ಆಪ್ತರನ್ನು ನೇಮಕ ಮಾಡಲಾಗಿತ್ತಲ್ಲದೇ, ಉದ್ಯಮಿಯೊಬ್ಬರ ವಾಣಿಜ್ಯ ಲಾಭಕ್ಕಾಗಿ ಒಟ್ಟು 190 ಮಿಲಿಯನ್ ಪೌಂಡ್(50 ಶತಕೋಟಿ ಪಾಕಿಸ್ತಾನಿ ರೂಪಾಯಿ) ಭ್ರಷ್ಟಾಚಾರ ನಡೆಸಲಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಪಾಕಿಸ್ತಾನದ ನ್ಯಾಶನಲ್ ಅಕೌಂಟೆಬಿಲಿಟಿ ಬ್ಯುರೋ(ಎನ್‌ಎಬಿ) ಡಿಸೆಂಬರ್ 2023ರಲ್ಲಿ ಇಮ್ರಾನ್ ಖಾನ್, ಬುಶ್ರಾ ಬೀಬಿ ಮತ್ತು ಇತರ ಆರು ಜನರ ವಿರುದ್ಧ ಭ್ರಷ್ಟಾಚಾರ ಪ್ರಕರಣ ದಾಖಲಿಸಿತ್ತು.

ಟ್ರಸ್ಟ್‌ಗಾಗಿ ಇಮ್ರಾನ್ ಖಾನ್ ಮತ್ತು ಪತ್ನಿ ಬುಶ್ರಾ ಬೀಬಿ ದೇಶದ ಖಜಾನೆಗೆ 50 ಶತಕೋಟಿ ಪಾಕಿಸ್ತಾನಿ ರೂಪಾಯಿಯಷ್ಟು ನಷ್ಟ ಉಂಟು ಮಾಡಿದ್ದಾರೆ ಎಂದು ಎನ್‌ಎಬಿ ಆರೋಪಿಸಿತ್ತು.

**ಅಲ್-ಖಾದಿರ್ ಟ್ರಸ್ಟ್‌ಗೆ ಸಂಬಂಧಿಸಿದ ಭೂ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ, ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮತ್ತು ಅವರ ಪತ್ನಿ ಬುಶ್ರಾ ಬೀಬಿಗೆ ಕ್ರಮವಾಗಿ 14 ಮತ್ತು 7 ವರ್ಷಗಳ ಜೈಲು ಶಿಕ್ಷೆ ವಿಧಿಸಿ ರಾವಲ್ಪಿಂಡಿ ಭ್ರಷ್ಟಾಚಾರ ವಿರೋಧಿ ನ್ಯಾಯಾಲಯ ತೀರ್ಪು ಪ್ರಕಟಿಸಿದೆ. ಹಲವು ಪ್ರಕರಣಗಳಲ್ಲಿ ಈಗಾಗಲೇ ಸೆರೆವಾಸ ಅನುಭವಿಸುತ್ತಿರುವ ಪಾಕ್ ಮಾಜಿ ಪ್ರಧಾನಿ ಇಮ್ರಾನ್ ಖಾನ್, ಅಲ್-ಖಾದಿರ್ ಟ್ರಸ್ಟ್ ಪ್ರಕರಣ ದಲ್ಲೂ ದೋಷಿಯಾಗಿ ಸೆರೆವಾಸ ಅನುಭವಿಸಬೇಕಾಗಿದೆ. ಈ ಕುರಿತು ಇಲ್ಲಿದೆ ವಿಸ್ತೃತ ವರದಿ.**

### ಏಳು ವರ್ಷ ಶಿಕ್ಷೆ

**ಇದೀಗ ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ ರಾವಲ್ಪಿಂಡಿ ಭ್ರಷ್ಟಾಚಾರ ವಿರೋಧಿ ನ್ಯಾಯಾಲಯವು, ಇಮ್ರಾನ್ ಖಾನ್ ಅವರಿಗೆ 14 ವರ್ಷ ಮತ್ತು ಬುಶ್ರಾ ಬೀಬಿಗೆ 7 ವರ್ಷ ಶಿಕ್ಷೆ ವಿಧಿಸಿ ತೀರ್ಪು ಪ್ರಕಟಿಸಿದೆ. ಈಗಾಗಲೇ ಹಲವು ಪ್ರಕರಣಗಳಲ್ಲಿ ಬಂಧಿತರಾಗಿ ಜೈಲಿನಲ್ಲಿರುವ ಇಮ್ರಾನ್ ಖಾನ್ ಅವರಿಗೆ, ಈ ತೀರ್ಪು ಭಾರೀ ಹಿನ್ನಡೆ ಉಂಟು ಮಾಡಲಿದೆ ಎಂದು ಪಾಕ್ ಮಾಧ್ಯಮಗಳು ವಿಶ್ಲೇಷಿಸಿವೆ.**

## ಮಿನಿ ನ್ಯೂಸ್

### ದೇಶದಾದ್ಯಂತ ಸುದ್ದಿಯಾಗಿದ್ದ ವೈದ್ಯೆ ಅತ್ಯಾಚಾರ ಪ್ರಕರಣದ ತೀರ್ಪು ಇಂದು

**ಕೋಲ್ಕತ್ತಾ:** ರಾಷ್ಟ್ರವ್ಯಾಪಿ ಆಕ್ರೋಶ ಮತ್ತು ಸುದೀರ್ಘ ಪ್ರತಿಭಟನೆಗೆ ಕಾರಣವಾದ ಆರ್ ಜಿ ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಕರ್ತವ್ಯ ನಿರತ ವೈದ್ಯೆಯ ಅಮಾನುಷ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಬಹು ನಿರೀಕ್ಷಿತ ತೀರ್ಪು ಇಂದು ಪ್ರಕಟವಾಗಲಿದೆ. ನಗರ ಪೊಲೀಸ್‌ನಲ್ಲಿ ನಾಗರಿಕ ಸ್ವಯಂಸೇವಕರಾಗಿದ್ದ ಸಂಜಯ್ ರಾಯ್ ಅವರು ಕಳೆದ ವರ್ಷ ಆಗಸ್ಟ್ 9 ರಂದು ಉತ್ತರ ಕೋಲ್ಕತ್ತಾದ ಆಸ್ಪತ್ರೆಯಲ್ಲಿ ಸ್ನಾತಕೋತ್ತರ ತರಬೇತಿದಾರರ ಮೇಲೆ ಅತ್ಯಾಚಾರ ನಡೆಸಿ ಹತ್ಯೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಅನಿರ್ಬನ್ ದಾಸ್ ಅವರ ಮುಂದೆ ವಿಚಾರಣೆ ಪ್ರಾರಂಭವಾದ 57 ದಿನಗಳ ನಂತರ ಇಂದು ತೀರ್ಪು ನೀಡಲಾಗುತ್ತದೆ. ಪ್ರಕರಣದ ತನಿಖೆ ನಡೆಸುತ್ತಿದ್ದ ಕೋಲ್ಕತ್ತಾ ಪೊಲೀಸರು ಆರಂಭದಲ್ಲಿ ಆಗಸ್ಟ್ 10 ರಂದು ರಾಯ್ ಅವರನ್ನು ಬಂಧಿಸಿದರು, ಆಸ್ಪತ್ರೆಯ ಸೆಮಿನಾರ್ ಕೊಠಡಿಯಲ್ಲಿ ವೈದ್ಯರ ದೇಹವನ್ನು ವಶಪಡಿಸಿಕೊಂಡ ಒಂದು ದಿನದ ನಂತರ. ಕಲ್ಕತ್ತಾ ಹೈಕೋರ್ಟ್ ನಂತರ ಪ್ರಕರಣವನ್ನು ಕೇಂದ್ರೀಯ ತನಿಖಾ ದಳಕ್ಕೆ ವರ್ಗಾಯಿಸಿತು, ಸಂಸ್ಥೆಯ ಆರೋಪಿಗಳಿಗೆ ಮರಣದಂಡನೆಯನ್ನು ಕೋರಿದೆ. ವೈದ್ಯೆಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಇನ್-ಕ್ಯಾಮೆರಾ ವಿಚಾರಣೆಯು ನವೆಂಬರ್ 12 ರಂದು ಪ್ರಾರಂಭವಾಯಿತು ಮತ್ತು 50 ಸಾಕ್ಷಿಗಳನ್ನು ಪರೀಕ್ಷಿಸಲಾಯಿತು.

ರಾಯ್ ಅವರ ವಿಚಾರಣೆಯ ವಿಚಾರಣೆಯನ್ನು ಜನವರಿ 9 ರಂದು ಮುಕ್ತಾಯಗೊಳಿಸಲಾಯಿತು. ಅಪರಾಧದಲ್ಲಿ ಇತರ ವ್ಯಕ್ತಿಗಳೂ ಭಾಗಿಯಾಗಿದ್ದಾರೆ ಎಂದು ಸಮರ್ಥಿಸಿಕೊಂಡಿರುವ ಸಂತ್ರಸ್ತೆಯ ಪೋಷಕರು, ಅವರನ್ನೂ ಬಂಧಿಸಿ ನ್ಯಾಯಾಲಯದ ಮುಂದೆ ವಿಚಾರಣೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದ್ದಾರೆ. ಅಲ್ಲದೆ ಪ್ರಕರಣದ ಮುಂದಿನ ತನಿಖೆಗೆ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಈ ಅಪರಾಧವು ರಾಷ್ಟ್ರವ್ಯಾಪಿ ಆಕ್ರೋಶಕ್ಕೆ ಕಾರಣವಾಯಿತು ಮತ್ತು ಕೋಲ್ಕತ್ತಾದಲ್ಲಿ ಕಿರಿಯ ವೈದ್ಯರಿಂದ ದೀರ್ಘಕಾಲದ ಪ್ರತಿಭಟನೆಗೆ ಕಾರಣವಾಗಿತ್ತು.

### ಪತನಗೊಂಡ ವಿಮಾನದ ಎಂಜಿನ್ ನಲ್ಲಿ ಹಕ್ಕಿಯ ಗರಿಗಳು, ರಕ್ತ ಪತ್ತೆ

**ಸೋಲ್:** ದಕ್ಷಿಣ ಕೊರಿಯಾದ ಮುವಾನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅಪಘಾತಕ್ಕೀಡಾದ ವಿಮಾನದ ಎರಡು ಎಂಜಿನ್‌ಗಳಲ್ಲಿ ಹಕ್ಕಿಯ ಗರಿಗಳು, ರಕ್ತ ಕಂಡುಬಂದಿದೆ. ತನಿಖಾಧಿಕಾರಿಗಳು ಈ ಮಾಹಿತಿ ನೀಡಿರುವುದಾಗಿ ಮೂಲಗಳು ಶುಕ್ರವಾರ ರಾಯಿಟರ್ಸ್ ಗೆ ತಿಳಿಸಿವೆ. 'ಜೆಜು ಏರ್' ವಿಮಾನಯಾನ ಸಂಸ್ಥೆಗೆ ಸೇರಿದ ಎಜರಿಣ ಂಡಿ 7ಅ2216 ವಿಮಾನವು ಡಿಸೆಂಬರ್ 29ರಂದು ಲ್ಯಾಂಡ್ ಆಗುವ ವೇಳೆ ಅಪಘಾತಕ್ಕೀಡಾಗಿತ್ತು. ಥಾಯ್ಲೆಂಡ್ ರಾಜಧಾನಿ ಬ್ಯಾಂಕಾಕ್‌ನಿಂದ ಮುನಾನ್‌ಗೆ ಬಂದಿದ್ದ ಅದು, ರನ್‌ವೇನಿಂದ ಜಾರಿ ಕಾಂಕ್ರಿಟ್ ಗೋಡೆಗೆ ಡಿಕ್ಕಿಯಾಗಿತ್ತು. ಡಿಕ್ಕಿಯ ರಭಸಕ್ಕೆ ತಕ್ಷಣವೇ ಸ್ಫೋಟಗೊಂಡಿತ್ತು.

6 ಸಿಬ್ಬಂದಿ ಸೇರಿದಂತೆ ವಿಮಾನದಲ್ಲಿದ್ದ 181 ಮಂದಿಯ ಪೈಕಿ ಕೇವಲ ಇಬ್ಬರಷ್ಟೇ ಬದುಕುಳಿದಿದ್ದಾರೆ. ಇದು, ದಕ್ಷಿಣ ಕೊರಿಯಾದಲ್ಲಿ ಸಂಭವಿಸಿದ ಅತ್ಯಂತ ಭೀಕರ ವಿಮಾನ ದುರಂತಗಳಲ್ಲಿ ಒಂದಾಗಿದೆ. ಅಪಘಾತದ ಸ್ಥಳದಿಂದ ವಶಕ್ಕೆ ಪಡೆದ ಎಂಜಿನ್‌ನಗಳಲ್ಲಿ ಗರಿಗಳು ಇರುವುದು ಕಂಡುಬಂದಿದೆ ಎನ್ನಲಾಗಿದೆ. ಆದರೆ, ಈ ಕುರಿತು ಪ್ರತಿಕ್ರಿಯಿಸಲು ದ. ಕೊರಿಯಾದ ಸಾರಿಗೆ ಸಚಿವಾಲಯದ ಅಧಿಕಾರಿಗಳು ನಿರಾಕರಿಸಿದ್ದಾರೆ.

### ಈರೋಡ್ ಪೂರ್ವ ವಿಧಾನಸಭೆ ಉಪ ಚುನಾವಣೆ ಬಹಿಷ್ಕರಿಸಿದ ಟಿವಿಕೆ

**ಚೆನ್ನೈ:** ಫೆಬ್ರುವರಿ 5ರಂದು ನಿಗದಿಯಾಗಿರುವ ತಮಿಳುನಾಡು ಈರೋಡ್ ಪೂರ್ವ ವಿಧಾನಸಭೆ ಉಪ ಚುನಾವಣೆಗೆ ನಟ ವಿಜಯ್ ಅವರ ಟಿವಿಕೆ ಪಕ್ಷ ಸ್ಪರ್ಧಿಸುವುದಿಲ್ಲ ಎಂದು ಘೋಷಣೆಯಾಗಿದೆ. ಶುಕ್ರವಾರ ಟಿವಿಕೆ ಪಕ್ಷದ ಎನ್. ಆನಂದ ಅವರು ಈ ಘೋಷಣೆ ಮಾಡಿದರು. ಈ ಕ್ಷೇತ್ರ ಪ್ರತಿನಿಧಿಸಿದ್ದ ಕಾಂಗ್ರೆಸ್‌ನ ಇವಿಕೆಎಸ್ ಇಳಾಂಗೋವನ್ ಅವರ ನಿಧನದಿಂದ ಉಪ ಚುನಾವಣೆ ಘೋಷಣೆಯಾಗಿದೆ.

ಉಪ ಚುನಾವಣೆಯಲ್ಲಿ ಸಹಜವಾಗಿ ಆಡಳಿತಾರೂಢ ಪಕ್ಷಗಳು ಗೆಲ್ಲುತ್ತವೆ. ಆದರೆ, ವಾಮಮಾರ್ಗದಲ್ಲಿ ಚುನಾವಣೆ ಗೆಲ್ಲಲು ಎಲ್ಲಾ ತಯಾರಿ ಮಾಡಿಕೊಂಡಿದೆ. ಹೀಗಾಗಿ ನಾವು ಮುಂಬರುವ (2026) ಸಾರ್ವತ್ರಿಕ ಚುನಾವಣೆಯಲ್ಲಿ ಡಿಎಂಕೆಯನ್ನು ಮನೆಗೆ ಕಳುಹಿಸುವ ಕೆಲಸದಲ್ಲಿ ತಲ್ಲೀನರಾಗುತ್ತೇವೆ. ಈ ಉಪ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಆನಂದ ಹೇಳಿದ್ದಾರೆ. ಈರೋಡ್ ಪೂರ್ವ ವಿಧಾನಸಭೆ ಉಪ ಚುನಾವಣೆಗೆ ಡಿಎಂಕೆ ಮೈತ್ರಿ ಅಭ್ಯರ್ಥಿಯಾಗಿ ವಿ.ಸಿ. ಚಂದ್ರಕುಮಾರ್ ಎನ್ನುವರ ಹೆಸರನ್ನು ಘೋಷಣೆ ಮಾಡಲಾಗಿದೆ.

ಈಗಾಗಲೇ ಬಿಜೆಪಿ ನೇತೃತ್ವದ ಎನ್‌ಡಿಎ, ಎಐಎಡಿಎಂಕೆ ಸಹ ಈ ಉಪ ಚುನಾವಣೆಯನ್ನು ಬಹಿಷ್ಕರಿಸಿವೆ. ಮುಂದಿನ ವರ್ಷಾಂತ್ಯಕ್ಕೆ ತಮಿಳುನಾಡು ವಿಧಾನಸಭೆ ಚುನಾವಣೆ ನಡೆಯಲಿದೆ. ಇತ್ತೀಚೆಗೆ ದಳಪತಿ ಖ್ಯಾತಿಯ ನಟ ವಿಜಯ್ ಅವರು ಪಕ್ಷವನ್ನು ಘೋಷಣೆ ಮಾಡಿದ್ದರು.

### ಶ್ವೇತಭವನದ ಮೇಲೆ ಟ್ರಕ್ ದಾಳಿಗೆತ್ನಿಸಿದ್ದವನಿಗೆ 8 ವರ್ಷ ಜೈಲು

**ವಾಷಿಂಗ್ಟನ್:** ಬಾಡಿಗೆ ಟ್ರಕ್ ಬಳಸಿ ಶ್ವೇತಭವನದ ಮೇಲೆ ದಾಳಿ ಮಾಡಲು ಯತ್ನಿಸಿದ ಆರೋಪದ ಮೇಲೆ ಭಾರತೀಯ ಮೂಲದ ಸಾಯಿ ವರ್ಷಿತ್ ಕಂದುಲಾ (20) ಎಂಬಾತನಿಗೆ ಅಮೆರಿಕದ ನ್ಯಾಯಾ ಲಯ 8 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಆರೋಪವನ್ನು ಕಳೆದ ಮೇ 13, 2024 ರಂದು ತಪ್ಪೊಪ್ಪಿಕೊಂಡಿದ್ದರು. ಭಾರತ ಮೂಲದ ಈತ ಗ್ರೀನ್ ಕಾರ್ಡ್ ಹೊಂದಿರುವ ಅಮೆರಿಕದ ಶಾಶ್ವತ ನಿವಾಸಿ ನ್ಯಾಯಾಲಯದ ದಾಖಲೆಗಳ ಪ್ರಕಾರ, 2023ರ ಮೇ 22 ರಂದು ಮಧ್ಯಾಹ್ನ ಮಿಸೌರಿಯ ಸೇಂಟ್ ಲೂಯಿಸ್‌ನಿಂದ ವಾಷಿಂಗ್ಟನ್ ಡಿ.ಸಿ.ಗೆ ವಾಣಿಜ್ಯ ವಿಮಾನದಲ್ಲಿ ವರ್ಷಿತ್ ಬಂದಿದ್ದ. ಅಲ್ಲಿ ಸಂಜೆ 6:30 ಕ್ಕೆ ಟ್ರಕ್ ಬಾಡಿಗೆಗೆ ಪಡೆದಿದ್ದ. ನಂತರ ವಾಷಿಂಗ್ಟನ್ ಡಿ.ಸಿ.ಗೆ ಬಂದು ಅಲ್ಲಿ ಅವರು ರಾತ್ರಿ 9:35 ಕ್ಕೆ ವಾಯುವ್ಯದ ಎಚ್ ಸ್ಟ್ರೀಟ್‌ನಿಂದ ಶ್ವೇತಭವನ ಮತ್ತು ಅಧ್ಯಕ್ಷರ ಉದ್ಯಾನವನವನ್ನು ರಕ್ಷಿಸುವ ತಡೆಗೋಡೆಗಳಿಗೆ ಡಿಕ್ಕಿ ಹೊಡೆದರು.

ನಂತರ, ಟ್ರಕ್ ಹಿಮ್ಮುಖವಾಗಿ ಹಿಮುಖವಾಗಿ, ನಂತರ ಮುಂದಕ್ಕೆ ಚಲಿಸಿ, ಲೋಹದ ತಡೆಗೋಡೆಗಳನ್ನು ಎರಡನೇ ಬಾರಿಗೆ ಬಡಿದು. ಎರಡನೇ ಡಿಕ್ಕಿ ಟ್ರಕ್ ಅನ್ನು ನಿಷ್ಕ್ರಿಯಗೊಳಿಸಿತು, ಅದು ಎಂಜಿನ್ ವಿಭಾಗದಿಂದ ಹೊಗೆಯಾಡಲು ಮತ್ತು ದ್ರವಗಳನ್ನು ಸೋರಿಕೆ ಮಾಡಲು ಪ್ರಾರಂಭಿಸಿತು ನಂತರ ಪ್ರತಿಭಟನೆ ನಡುವೆ ಆತನನ್ನು ಬಂಧಿಸಲಾಯಿತು. ಪ್ರಜಾಪ್ರಭುತ್ವದಿಂದ ಚುನಾಯಿತವಾದ ಸರ್ಕಾರವನ್ನು ನಾಜಿ ಜರ್ಮನಿಯ ಸಿದ್ಧಾಂತದಿಂದ ಉತ್ತೇಜಿಸಲ್ಪಟ್ಟ ಸರ್ವಾಧಿಕಾರದಿಂದ ಬದಲಾಯಿಸುವುದು ವ್ಯಯವಸ್ಥೆ ಮಾಡಿದ್ದೇನೆ ಎಂದು ಕಂದುಲಾ ತನಿಖಾಧಿಕಾರಿಗಳಿಗೆ ಒಪ್ಪಿಕೊಂಡರು. ಬೆದರಿಕೆ ಅಥವಾ ಬಲವಂತದ ಮೂಲಕ ಸರ್ಕಾರದ ನಡವಳಿಕೆಯ ಮೇಲೆ ಪ್ರಭಾವ ಬೀರಲು ಅಥವಾ ಪರಿಣಾಮ ಬೀರಲು ಪ್ರಯತ್ನಿಸಿದ್ದ,ಇದರ ಬಗ್ಗೆ ವಿಚಾರಣೆ ನಡೆದು ಕೆಳ ನ್ಯಾಯಾಲಯ ಶಿಕ್ಷೆ ವಿಧಿಸಿದೆ.

# ಆಗಸ್ಟ್‌ನಲ್ಲಿ ಅಯೋಗ್ಯ 2 ಬಿಡುಗಡೆ

ಮಹೇಶ್ ಕುಮಾರ್ ನಿರ್ದೇಶನದ ಮತ್ತು ಎಂ ಮುನೇಗೌಡ ನಿರ್ಮಾಣದ ಚಿತ್ರದ ಎರಡನೇ ಹಂತದ ಚಿತ್ರೀಕರಣ 2 ಕೋಟಿ ವೆಚ್ಚದಲ್ಲಿ ನಡೆಯಲಿದೆ. ಸತೀಶ್ ನೀನಾಸಂ ಮತ್ತು ರಚಿತಾ ರಾಮ್ ಅಭಿನಯದ 'ಅಯೋಗ್ಯ 2' ಚಿತ್ರತಂಡವು ಮಂಡ್ಯ ಸುತ್ತಮುತ್ತ ಮೊದಲ ಶೂಟಿಂಗ್ ಶೆಡ್ಯೂಲ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಇದೀಗ ಶುಕ್ರವಾರದಿಂದ ಎರಡನೇ ಹಂತದ ಚಿತ್ರೀಕರಣವನ್ನು ಪ್ರಾರಂಭಿಸಿದೆ.

ಮಹೇಶ್ ಕುಮಾರ್ ನಿರ್ದೇಶನದ ಮತ್ತು ಎಂ ಮುನೇಗೌಡ ನಿರ್ಮಾಣದ ಚಿತ್ರದ ಎರಡನೇ ಹಂತದ ಚಿತ್ರೀಕರಣ 2 ಕೋಟಿ ವೆಚ್ಚದಲ್ಲಿ ನಡೆಯಲಿದೆ. ಈ ಚಿತ್ರೀಕರಣವು ನಾಯಕನ ಪರಿಚಯದ ಸೀಕ್ವೆನ್ಸ್, ರೊಮ್ಯಾಂಟಿಕ್ ಹಾಡು ಮತ್ತು ಫೈಟ್ ಸೀಕ್ವೆನ್ಸ್ ಅನ್ನು ಒಳಗೊಂಡಿದೆ. 20 ದಿನಗಳ ಕಾಲ ಚಿತ್ರೀಕರಣ ನಡೆಯಲಿದ್ದು, ಅದ್ದೂರಿ ದೃಶ್ಯ ವೈಭವವನ್ನು ತೆರೆ ಮೇಲೆ ತರಲು ಚಿತ್ರತಂಡ ಯೋಜನೆ ರೂಪಿಸಿದೆ.

ಮಹೇಶ್ ಕುಮಾರ್ ಮಾತನಾಡಿ, 'ಮೊದಲ ಚಿತ್ರವು (ಅಯೋಗ್ಯ) ಕೊನೆಗೊಂಡ ಸ್ಥಳದಿಂದಲೇ ಅಯೋಗ್ಯ 2 ಚಿತ್ರವು ಪ್ರಾರಂಭವಾಗುತ್ತದೆ. ಒಂದೆರಡು ಹೊಸ ಪಾತ್ರಗಳು ಚಿತ್ರತಂಡ ಸೇರಿದ್ದು, ಮುಖ್ಯ ಪಾತ್ರವರ್ಗವು ಪ್ರಯಾಣವನ್ನು ಮುಂದುವರೆಸುತ್ತದೆ. ಈಗ ಗ್ರಾಮ ಪಂಚಾಯಿತಿ ಸದಸ್ಯರಾಗಿರುವ ಸಿದ್ಧೇಗೌಡ ಅವರು ಸಮಸ್ಯೆಗಳ ಹೊಸ ಅಲೆಯನ್ನು ಎದುರಿಸುತ್ತಿದ್ದಾರೆ. ಮೊದಲ ಚಿತ್ರದ ಸಾರವನ್ನು ಉಳಿಸಿಕೊಂಡು ಕಥೆಯು ಮುಖ್ಯ ಪಾತ್ರವು ಎದುರಿಸುತ್ತಿರುವ ಸವಾಲುಗಳನ್ನು ಅನ್ವೇಷಿಸುತ್ತದೆ. ಚಿತ್ರವು ಕನ್ನಡದಲ್ಲಿ ತಯಾರಾಗಲಿದ್ದು, ನಂತರ ತೆಲುಗು ಮತ್ತು ತಮಿಳಿಗೆ ಡಬ್ಬಿಂಗ್ ಮಾಡಲಾಗುತ್ತಿದೆ' ಎಂದರು.

ಆಗಸ್ಟ್‌ನಲ್ಲಿ ಚಿತ್ರ ಬಿಡುಗಡೆ ಮಾಡುವ ಗುರಿಯನ್ನು ಚಿತ್ರತಂಡ ಹೊಂದಿದೆ. ಚಿತ್ರದ ತಾರಾಗಣದಲ್ಲಿ ಸುಂದರ್ ರಾಜ್, ಶಿವರಾಜ್ ಕೆಆರ್ ಪೇಟೆ, ಅರುಣಾ ಬಾಲರಾಜ್, ಮಂಜು ಪಾವಗಡ ಇದ್ದಾರೆ. ಚಿತ್ರಕ್ಕೆ ಅರ್ಜುನ್ ಜನ್ಯ ಅವರ ಸಂಗೀತ ಸಂಯೋಜನೆ, ಮಾಸ್ತಿ ಉಪ್ಪಾರಹಳ್ಳಿ ಅವರ ಸಂಭಾಷಣೆ ಮತ್ತು ಬಹದ್ದೂರ್ ಚೇತನ್ ಅವರ ಸಾಹಿತ್ಯವಿದೆ.

ಶಾಕಾಹಾರಿ ಚಿತ್ರಕ್ಕೆ ಛಾಯಾಗ್ರಾಹಕರಾಗಿದ್ದ ವಿಶ್ವಜಿತ್ ರಾವ್ ಈ ಚಿತ್ರಕ್ಕೆ ಕ್ಯಾಮರಾ ನಿರ್ವಹಿಸುತ್ತಿದ್ದಾರೆ.

**ಸತೀಶ್ ನೀನಾಸಂ, ರಚಿತಾ ರಾಮ್ ನಟನೆ**





# 12 ವರ್ಷಗಳ ಬಳಿಕ ಬಿಡುಗಡೆ

ಮರು ಬಿಡುಗಡೆ ಆದ ಸಿನಿಮಾಗಳು ಹೆಚ್ಚೆಂದರೆ ಎಷ್ಟು ಕಲೆಕ್ಷನ್ ಮಾಡಬಹುದು ಕೆಲ ತಿಂಗಳ ಹಿಂದೆ ಒಂದು ಹಿಂದೊಂದರಂತೆ ತೆಲುಗಿನ ಸೂಪರ್ ಹಿಟ್ ಸಿನಿಮಾಗಳು ಬಿಡುಗಡೆ ಆದವು. ಯಾವ ಸಿನಿಮಾಗಳು ಸಹ 5 ಕೋಟಿ ಕಲೆಕ್ಷನ್ ದಾಟಲಿಲ್ಲ. ಆದರೆ ತಮಿಳಿನ ಒಂದು ಸಿನಿಮಾ ಬಿಡುಗಡೆ ಆಗಿದ್ದೇ 12 ವರ್ಷಗಳ ಬಳಿಕ, ಆದರೆ ಭರ್ಜರಿ ಕಲೆಕ್ಷನ್ ಮಾಡುತ್ತಿದೆ. ಕೇವಲ ಐದು ದಿನಕ್ಕೆ 30 ಕೋಟಿಗೂ ಹೆಚ್ಚು ಗಳಿಸಿದ್ದು, ಸಿನಿಮಾದ ಕಲೆಕ್ಷನ್ ಬಗ್ಗೆ ಚಿತ್ರತಂಡವೇ ಆಶ್ಚರ್ಯ ವ್ಯಕ್ತಪಡಿಸಿದೆ. ತಮಿಳಿನ ನಟ ವಿಶಾಲ್ ನಟನೆಯ 'ಮದ ಗಜ ರಾಜ' ಸಿನಿಮಾ ನಿರ್ಮಾಣವಾಗಿದ್ದ 12 ವರ್ಷಗಳ ಹಿಂದೆ ಅಂದರೆ 2013 ರಲ್ಲಿ ಆದರೆ ಸಿನಿಮಾ ಬಿಡುಗಡೆಗೆ ಕೆಲವು ಅಡೆ-ತಡೆಗಳು ಆಗ ಎದುರಾಗಿದ್ದವು. ಹಣಕಾಸಿನ ಸಮಸ್ಯೆ ನಿರ್ಮಾಪಕರನ್ನು ಕಾಡಿತ್ತು. ಸಿನಿಮಾ ಬಿಡುಗಡೆಗೆ ಕಾನೂನು ತೊಡಕು ಸಹ ಉಂಟಾಗಿತ್ತು. ಇದೇ ಕಾರಣಕ್ಕೆ ಸಿನಿಮಾ ರೆಡಿಯಾಗಿದ್ದರೂ ಡಬ್ಬದಲ್ಲಿಯೇ ಉಳಿದಿತ್ತು. ಇದೀಗ 12 ವರ್ಷಗಳ ಬಳಿಕ ಕಳೆದ ವಾರ ಸಿನಿಮಾ ಬಿಡುಗಡೆ ಆಗಿದೆ. 'ಮದ ಗಜ ರಾಜ' ಸಿನಿಮಾ ಬಿಡುಗಡೆ ಆಗಿ ಐದೇ ದಿನದಲ್ಲಿ ಸುಮಾರು 30 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ.



# ಎಮರ್ಜೆನ್ಸಿ ಸಿನಿಮಾಗೆ ಪಂಜಾಬ್‌ನಲ್ಲಿ ತೀವ್ರ ವಿರೋಧ

ಇಂದಿರಾ ಗಾಂಧಿ ಹೇರಿದ್ದ ತುರ್ತು ಪರಿಸ್ಥಿತಿ ಕುರಿತು ಮೂಡಿಬಂದಿರುವ 'ಎಮರ್ಜೆನ್ಸಿ' ಸಿನಿಮಾ ಬಿಡುಗಡೆ ಆಗಿದೆ. ಈ ಚಿತ್ರದ ಸುತ್ತ ಇರುವ ವಿವಾದಗಳು ಒಂದೆರಡಲ್ಲ. ಪಂಜಾಬ್‌ನಲ್ಲಿ 'ಎಮರ್ಜೆನ್ಸಿ' ಸಿನಿಮಾಗೆ ವಿರೋಧ ವ್ಯಕ್ತವಾಗಿದೆ. ಸಿನಿಮಾವನ್ನು ರಾಜ್ಯದಲ್ಲಿ ಬ್ಯಾನ್ ಮಾಡಬೇಕು ಎಂಬ ಒತ್ತಾಯ ಕೇಳಿಬಂದಿದೆ. ನಟಿ ಕಂಗನಾ ರಣಾವತ್ ಅವರು ಸಾಕಷ್ಟು ಶ್ರಮವಹಿಸಿ 'ಎಮರ್ಜೆನ್ಸಿ' ಸಿನಿಮಾ ಮಾಡಿದ್ದಾರೆ. ಅವರೇ ನಿರ್ದೇಶನ ಕೂಡ ಮಾಡಿದ್ದಾರೆ. ಹಲವು ಅಡೆತಡೆಗಳು ಈ ಚಿತ್ರಕ್ಕೆ ಎದುರಾಗಿದ್ದವು. ಬಿಡುಗಡೆ ಸಮಯದಲ್ಲಿ ಕೂಡ ತೊಂದರೆ ಉಂಟಾಯಿತು. ಎಲ್ಲಾ ವಿಘ್ನಗಳನ್ನು ನಿವಾರಿಸಿಕೊಂಡು ಈಗ 'ಎಮರ್ಜೆನ್ಸಿ' ತೆರೆಕಂಡಿದೆ. ಈ ಸಿನಿಮಾದಲ್ಲಿ ಕಂಗನಾ ರಣಾವತ್ ಅವರು ಇಂದಿರಾ ಗಾಂಧಿ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಈ ಸಿನಿಮಾ ಮೂಲಕ ಗೆಲುವು ಕಾಣುವ ಹಂಬಲ ಅವರದ್ದು. ಆದರೆ ಕೆಲವು ಕಡೆಗಳಲ್ಲಿ 'ಎಮರ್ಜೆನ್ಸಿ' ಚಿತ್ರಕ್ಕೆ ವಿರೋಧ ವ್ಯಕ್ತವಾಗುತ್ತಿದೆ. ಪಂಜಾಬ್‌ನಲ್ಲಿ ಈ ಸಿನಿಮಾವನ್ನು ನಿಷೇಧ ಮಾಡಬೇಕು ಎಂದು ಒತ್ತಾಯಿಸಲಾಗುತ್ತಿದೆ. ಸಿಖ್ ಸಮುದಾಯದವರು 'ಎಮರ್ಜೆನ್ಸಿ' ಸಿನಿಮಾವನ್ನು ತೀವ್ರವಾಗಿ ವಿರೋಧಿಸಿದ್ದಾರೆ. 'ಶಿರೋಮಣಿ ಗುರುದ್ವಾರ ಪ್ರತಿಬಂಧಕ ಸಮಿತಿ' ಈ ಚಿತ್ರದ ಬಗ್ಗೆ ತಕರಾರು ತೆಗೆದಿದೆ. ಈ ಸಿನಿಮಾದಲ್ಲಿ ಸಿಖ್ ಸಮುದಾಯಕ್ಕೆ ಅವಮಾನ ಮಾಡಲಾಗಿದೆ ಎಂದು ಆರೋಪಿಸಲಾಗಿದೆ. ಸಿನಿಮಾವನ್ನು ಬ್ಯಾನ್ ಮಾಡಬೇಕು ಎಂದು ಒತ್ತಾಯಿಸಿ ಅಮೃತಸರದಲ್ಲಿ ಪ್ರತಿಭಟನೆ ಮಾಡಲಾಗಿದೆ. 'ಎಮರ್ಜೆನ್ಸಿ' ಸಿನಿಮಾ ಪ್ರದರ್ಶನ ಆಗುತ್ತಿದ್ದ ಚಿತ್ರಮಂದಿರದ ಎದುರು ಪೊಲೀಸರನ್ನು ನಿಯೋಜಿಸಲಾಗಿದೆ. ಟ್ರೇಲರ್ ಬಿಡುಗಡೆ ಆದಾಗಲೂ ಕೂಡ ಸಿಖ್ ಸಮುದಾಯದವರು ಈ ಚಿತ್ರಕ್ಕೆ ವಿರೋಧ ವ್ಯಕ್ತಪಡಿಸಿದ್ದರು.

# ಅಮರನ್ ಸಕ್ಸಸ್ ಬಳಿಕ ಹೊಸ ಪ್ರಾಜೆಕ್ಟ್ ಒಪ್ಪಿಕೊಂಡ ಸಾಯಿ ಪಲ್ಲವಿ




'ಫಿದಾ' ಬೆಡಗಿ ಸಾಯಿ ಪಲ್ಲವಿ ಸೌತ್ ಮತ್ತು ಬಾಲಿವುಡ್ ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಶಿವಕಾರ್ತಿಕೇಯನ್ ಜೊತೆಗಿನ 'ಅಮರನ್' ಸಿನಿಮಾ ಸಕ್ಸಸ್ ಕಂಡ್ಮೇಲೆ ತೆಲುಗಿನಲ್ಲಿ ಮಹಿಳಾ ಪ್ರಧಾನ ಚಿತ್ರವೊಂದನ್ನು ಒಪ್ಪಿಕೊಂಡಿದ್ದಾರೆ. ಈ ಮೂಲಕ ಫ್ಯಾನ್ಸ್‌ಗೆ ಸಿಹಿಸುದ್ದಿ ನೀಡಿದ್ದಾರೆ. ಆಮೀರ್ ಖಾನ್ ಪುತ್ರನ ಜೊತೆ ಮತ್ತು 'ರಾಮಾಯಣ' ಸಿನಿಮಾ ಕೆಲಸಗಳ ನಡುವೆ ವಿಭಿನ್ನ ಎನಿಸೋ ಮಹಿಳಾ ಪ್ರಧಾನ ಚಿತ್ರ ಒಪ್ಪಿಕೊಂಡಿದ್ದಾರೆ. ಈಗಾಗಲೇ ಹಲವು ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದ ಕಾರ್ತಿಕ್ ತೀಡಾ ಜೊತೆ ನಟಿ ಕೈಜೋಡಿಸಿದ್ದಾರೆ.

ಈ ಹಿಂದೆ 'ಗಾರ್ಗಿ' ಚಿತ್ರದಲ್ಲಿ ಸಾಯಿ ಪಲ್ಲವಿ ಮಹಿಳಾ ಪ್ರಧಾನ ಪಾತ್ರ ಮಾಡಿ ಸೈ ಎನಿಸಿಕೊಂಡಿದ್ದರು. ಈಗ ಹೊಸ ಸಿನಿಮಾದಲ್ಲೂ ಡಿಫರೆಂಟ್ ಆಗಿರುವ ಪಾತ್ರದಲ್ಲಿ ಮಿಂಚಲು ರೆಡಿಯಾಗಿದ್ದಾರೆ. ಈ ಸಿನಿಮಾ ಬಗ್ಗೆ ಅಧಿಕೃತ ಅನೌನ್ಸ್‌ಮೆಂಟ್‌ಗಾಗಿ ಫ್ಯಾನ್ಸ್ ಕಾಯುತ್ತಿದ್ದಾರೆ. ಇನ್ನೂ ನಾಗಚೈತನ್ಯ ಜೊತೆಗಿನ 2ನೇ ಸಿನಿಮಾ ತಾಂಡೇಲ್ ಇದೇ ಫೆ.7ರಂದು ರಿಲೀಸ್ ಆಗಲಿದೆ. ಈಗಾಗಲೇ ಸಿನಿಮಾದ ಸಾಂಗ್ಸ್ ಪ್ರೇಕ್ಷಕರ ಮನ ಗೆದ್ದಿದೆ.

# ಗುಟ್ಟಾಗಿ ಹೈದರಾಬಾದ್‌ಗೆ ಬಂದ ಪ್ರಿಯಾಂಕಾ

ಪ್ರಿಯಾಂಕಾ ಚೋಪ್ರಾ, ಈಗ ಹಾಲಿವುಡ್ ನಟಿ. ಬಾಲಿವುಡ್‌ನಿಂದ ಬಹುತೇಕ ದೂರ ಆಗಿಬಿಟ್ಟಿದ್ದಾರೆ. ಆದರೆ ಈಗ ಅಚಾನಕ್ಕಾಗಿ ಭಾರತಕ್ಕೆ ಬಂದಿದ್ದಾರೆ. ಸಾಮಾನ್ಯವಾಗಿ ಪ್ರಿಯಾಂಕಾ ಚೋಪ್ರಾ, ಭಾರತಕ್ಕೆ ಬರುವುದು ತಮ್ಮ ಕುಟುಂಬ ಸದಸ್ಯರ ಮದುವೆ ಇನ್ನಿತರೆಕಾರ್ಯಕ್ರಮ ಅಥವಾ ಅಂಬಾನಿಯ ಕಾರ್ಯಕ್ರಮಗಳಿಗೆ ಮಾತ್ರ. ಹಾಗಾಗಿ ಬಂದಾಗೆಲ್ಲ ಮುಂಬೈನಲ್ಲಿ ವಿಮಾನ ಇಳಿದು ಅಲ್ಲಿಯೇ ಕೆಲ ಸಮಯ ಇದ್ದು ಕಾರ್ಯಕ್ರಮ ಮುಗಿಸಿ ಅಮೆರಿಕಕ್ಕೆ ಮರಳುತ್ತಾರೆ.

ಆದರೆ ಈ ಬಾರಿ ಪ್ರಿಯಾಂಕಾ ಚೋಪ್ರಾ, ಬಿಸಿಲ ನಗರ ಹೈದರಾಬಾದ್‌ಗೆ ಬಂದಿದ್ದಾರೆ. ಅದೂ ಗುಟ್ಟಾಗಿ. ಪ್ರಿಯಾಂಕಾ ಚೋಪ್ರಾ, ಹೈದರಾಬಾದ್‌ಗೆ ಬಂದಿರುವುದು ಯಾವುದೋ ಕಾರ್ಯಕ್ರಮಕ್ಕೆ ಅಲ್ಲ ಬದಲಿಗೆ ನಿರ್ದೇಶಕ ರಾಜಮೌಳಿಯನ್ನು ಭೇಟಿ ಆಗಲು. ಮೂಲಗಳ ಪ್ರಕಾರ ರಾಜಮೌಳಿಯ ಮುಂದಿನ ಸಿನಿಮಾದಲ್ಲಿ ಪ್ರಿಯಾಂಕಾ ಚೋಪ್ರಾ ನಾಯಕಿಯಂತೆ. ಅದೇ ಸಿನಿಮಾದ ಕಾರಣಕ್ಕಾಗಿ ಈಗ ಪ್ರಿಯಾಂಕಾ ಚೋಪ್ರಾ ಹೈದರಾಬಾದ್‌ಗೆ ಬಂದಿಳಿದಿದ್ದಾರೆ. ಕೆಲ ದಿನಗಳ ಹಿಂದಷ್ಟೆ ರಾಜಮೌಳಿ ಹಾಗೂ ಮಹೇಶ್ ಬಾಬು ಅವರ ಹೊಸ ಸಿನಿಮಾದ ಮುಹೂರ್ತ ಕಾರ್ಯಕ್ರಮ ಹೈದರಾಬಾದ್‌ನಲ್ಲಿ ನೆರವೇರಿದೆ. ಈ ಸಿನಿಮಾದಲ್ಲಿ ನಾಯಕಿಯಾಗಿ ಪ್ರಿಯಾಂಕಾ ಚೋಪ್ರಾ ನಟಿಸುತ್ತಿದ್ದು, ಸಿನಿಮಾದ ಫೋಟೊಶೂಟ್‌ಗಾಗಿ ಈಗ ಅವರು ಹೈದರಾಬಾದ್‌ಗೆ ಬಂದಿದ್ದಾರೆ ಎನ್ನಲಾಗುತ್ತಿದೆ. ಸಿನಿಮಾದ ಚಿತ್ರೀಕರಣ ಕೆಲವೇ ದಿನಗಳಲ್ಲಿ ಪ್ರಾರಂಭವಾಗಲಿದ್ದು, ಅದಕ್ಕೆ ಮುಂಚೆ ಎಲ್ಲಾ ನಟರಿಗೂ ತಾಲೀಮು ಮಾಡಿಸುತ್ತಿದ್ದಾರೆ ರಾಜಮೌಳಿ.



# ಡಬ್ಲ್ಯುಪಿಎಲ್ 3ನೇ ಆವೃತ್ತಿಯ ವೇಳಾಪಟ್ಟಿ ಪ್ರಕಟ
# ಮೊದಲ ಪಂದ್ಯದಲ್ಲೇ ಆರ್‌ಸಿಬಿ ಕಣಕ್ಕೆ

ಮಹಿಳಾ ಪ್ರೀಮಿಯರ್ ಲೀಗ್‌ನ ಮೂರನೇ ಸೀಸನ್ ಫೆಬ್ರವರಿ 14 ರಿಂದ ಮಾರ್ಚ್ 15 ರವರೆಗೆ ನಡೆಯಲಿದೆ. ಈ ಬಾರಿ ಲಕ್ನೋ, ಮುಂಬೈ, ಬರೋಡಾ ಮತ್ತು ಬೆಂಗಳೂರಿನಲ್ಲಿ ಪಂದ್ಯಗಳು ನಡೆಯಲಿವೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಗುಜರಾತ್ ಜೈಂಟ್ಸ್ ನಡುವಿನ ಪಂದ್ಯದೊಂದಿಗೆ ಟೂರ್ನಿ ಆರಂಭವಾಗಲಿದೆ. 30 ದಿನಗಳ ಈ ಟೂರ್ನಿಯಲ್ಲಿ ಆಟಗಾರ್ತಿಯರಿಗೆ ಸಾಕಷ್ಟು ವಿಶ್ರಾಂತಿ ನೀಡಲಾಗಿದೆ. ಪ್ರತಿ ದಿನ ಒಂದೇ ಒಂದು ಪಂದ್ಯ ನಡೆಯಲಿದೆ.

ಮಹಿಳಾ ಪ್ರೀಮಿಯರ್ ಲೀಗ್‌ನ ಮೂರನೇ ಸೀಸನ್‌ಗೆ ಕ್ಷಣಗಣನೆ ಪ್ರಾರಂಭವಾಗಿದ್ದು, ಇದೀಗ ಈ ಟೂರ್ನಿಯ ವೇಳಾಪಟ್ಟಿಯನ್ನು ಬಿಸಿಸಿಐ ಪ್ರಕಟಿಸಿದೆ. ಅದರಂತೆ ಡಬ್ಲ್ಯುಪಿಎಲ್‌ನ ಮೂರನೇ ಆವೃತ್ತಿ ಫೆಬ್ರವರಿ 14 ರಿಂದ ಪ್ರಾರಂಭವಾಗಲಿದ್ದು, ಮಾರ್ಚ್ 15 ರಂದು ನಡೆಯಲ್ಲಿರುವ ಫೈನಲ್ ಪಂದ್ಯದೊಂದಿಗೆ ಟೂರ್ನಿಗೆ ತೆರೆಬೀಳಲಿದೆ. ಟೂರ್ನಿಯ ಮೊದಲ ಪಂದ್ಯದಲ್ಲೇ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಗುಜರಾತ್ ಜೈಂಟ್ಸ್ ತಂಡವನ್ನು ಎದುರಿಸಲಿದೆ. ಈ ಹೈವೋಲ್ಟೇಜ್ ಕದನಕ್ಕೆ ವಡೋದರದಲ್ಲಿ ಹೊಸದಾಗಿ ನಿರ್ಮಿಸಲಾಗಿರುವ ಕೊಟಂಬಿ ಕ್ರೀಡಾಂಗಣ ಆತಿಥ್ಯವಹಿಸಲಿದೆ.

**ಮೊದಲ ಬಾರಿಗೆ 4 ಸ್ಥಳಗಳಲ್ಲಿ ಟೂರ್ನಿ**



ಈ ಬಾರಿ ಬಿಸಿಸಿಐ ಡಬ್ಲ್ಯುಪಿಎಲ್ ವ್ಯಾಪ್ತಿಯನ್ನು ವಿಸ್ತರಿಸುವ ಮಹತ್ವದ ನಿರ್ಧಾರವನ್ನು ತೆಗೆದುಕೊಂಡಿದೆ. ಈ ಹಿಂದೆ ಲೀಗ್‌ನ ಮೊದಲ ಸೀಸನ್ ಮುಂಬೈನ ಎರಡು ವಿಭಿನ್ನ ಮೈದಾನಗಳಲ್ಲಿ ಮಾತ್ರ ನಡೆದಿದ್ದರೆ, ಕೊನೆಯ ಸೀಸನ್ ಬೆಂಗಳೂರು ಮತ್ತು ದೆಹಲಿಯಲ್ಲಿ ನಡೆದಿತ್ತು. ಇದೀಗ 4 ಸ್ಥಳಗಳಲ್ಲಿ ಟೂರ್ನಿ ಆಯೋಜಿಸಲು ಬಿಸಿಸಿಐ ನಿರ್ಧರಿಸಿದೆ. ಈ ಬಾರಿಯ ಲೀಗ್ ಲಕ್ನೋ, ಮುಂಬೈ, ವಡೋದರಾ ಮತ್ತು ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದು, 30 ದಿನಗಳಲ್ಲಿ 22 ಪಂದ್ಯಗಳು ನಡೆಯಲಿವೆ.

**ಬರೋಡದಿಂದ ಆರಂಭವಾಗಿ ಮುಂಬೈನಲ್ಲಿ ಅಂತ್ಯ**

ಪ್ರತಿ ಬಾರಿಯಂತೆ ಈ ಬಾರಿಯೂ ಹಾಲಿ ಚಾಂಪಿಯನ್‌ಗಳ ನಡುವಿನ ಪಂದ್ಯದೊಂದಿಗೆ ಹೊಸ ಸೀಸನ್ ಆರಂಭವಾಗಲಿದೆ. ಕಳೆದ ಸೀಸನ್‌ನ ವಿಜೇತ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಫೆಬ್ರವರಿ 14 ರಂದು ಗುಜರಾತ್ ಜೈಂಟ್ಸ್ ತಂಡವನ್ನು ಎದುರಿಸಲಿದೆ. ಪಂದ್ಯಾವಳಿಯ ಮೊದಲ 6 ಪಂದ್ಯಗಳು ಬರೋಡದಲ್ಲಿಯೇ ನಡೆಯಲಿದ್ದು, ನಂತರ ಫೆಬ್ರವರಿ 21 ರಿಂದ ಬೆಂಗಳೂರಿನ ಎಂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಈ ಟೂರ್ನಿಯ 8 ಪಂದ್ಯಗಳು ನಡೆಯಲಿವೆ. ಮಾರ್ಚ್ 3 ರಿಂದ ಲಕ್ನೋದಲ್ಲಿ ಪಂದ್ಯಗಳು ಪ್ರಾರಂಭವಾಗಲಿದ್ದು, ಈ ಮೈದಾನದಲ್ಲಿ 4 ಪಂದ್ಯಗಳು ನಡೆಯಲಿವೆ. ಅಂತಿಮವಾಗಿ ಮುಂಬೈನ ಐತಿಹಾಸಿಕ ಕ್ರೀಡಾಂಗಣದಲ್ಲಿ ಪಂದ್ಯಾವಳಿ ಕೊನೆಗೊಳ್ಳಲಿದೆ. ಇದೇ ಮೈದಾನದಲ್ಲೇ ಕ್ವಾಲಿಫೈಯರ್ ಮತ್ತು ಫೈನಲ್ ಸೇರಿದಂತೆ ಕೊನೆಯ 4 ಪಂದ್ಯಗಳು ನಡೆಯಲಿವೆ.

**ಆಟಗಾರ್ತಿಯರಿಗೆ ಸಂಪೂರ್ಣ ವಿಶ್ರಾಂತಿ**

ಈ ವರ್ಷ ಟೂರ್ನಿ ನಡೆಯುವ ದಿನಗಳನ್ನು ಹೆಚ್ಚು ಮಾಡಲಾಗಿದ್ದು, ಈ ಮೂಲಕ ಆಟಗಾರ್ತಿಯರಿಗೆ ವಿಶ್ರಾಂತಿ ಪಡೆಯಲು ಸಾಕಷ್ಟು ಸಮಯಾವಕಾಶ ಸಿಗಲಿದೆ. ಕಳೆದ ಬಾರಿ ಈ ಟೂರ್ನಿ 24 ದಿನಗಳ ಕಾಲ ನಡೆದಿತ್ತು. ಆದರೆ ಈ ಬಾರಿ ಈ ಟೂರ್ನಿಯನ್ನು 30 ದಿನಗಳಿಗೆ ವಿಸ್ತರಿಸಲಾಗಿದೆ. ಪಂದ್ಯಾವಳಿಯು ಫೆಬ್ರವರಿ 14 ರಿಂದ ಪ್ರಾರಂಭವಾಗಿ ಮಾರ್ಚ್ 15 ರವರೆಗೆ ನಡೆಯಲಿದೆ. ದಿನವೊಂದಕ್ಕೆ ಕೇವಲ ಒಂದು ಪಂದ್ಯವನ್ನು ಮಾತ್ರ ಆಡಲಾಗುತ್ತದೆ. ಹೀಗಾಗಿ ಈ ಬಾರಿ ಡಬಲ್ ಹೆಡರ್ ಪಂದ್ಯಗಳು ಅಂದರೆ ಒಂದು ದಿನದಲ್ಲಿ 2 ಪಂದ್ಯಗಳು ನಡೆಯುವುದಿಲ್ಲ. ಆದ್ದರಿಂದ ಈ ಅವಧಿಯಲ್ಲಿ ತಂಡಗಳು ಒಟ್ಟು 8 ದಿನಗಳ ವಿಶ್ರಾಂತಿ ದಿನಗಳನ್ನು ಪಡೆಯುತ್ತವೆ. ಅಲ್ಲದೆ, ಪ್ರತಿ ಪಂದ್ಯ ರಾತ್ರಿ 7.30ಕ್ಕೆ ಆರಂಭವಾಗಲಿದೆ.



# 13 ವರ್ಷಗಳ ಬಳಿಕ ದೆಹಲಿ ರಣಜಿ ತಂಡಕ್ಕೆ ಆಯ್ಕೆ..!

ಬಿಸಿಸಿಐನ ಆದೇಶದಂತೆ, ವಿರಾಟ್ ಕೊಹ್ಲಿ ಮತ್ತು ರಿಷಭ್ ಪಂತ್ ರಣಜಿ ಟ್ರೋಫಿಗೆ ಮರಳಿದ್ದಾರೆ. ದೆಹಲಿ ತಂಡಕ್ಕೆ ಆಯ್ಕೆಯಾಗಿರುವ ವಿರಾಟ್ ಕೊಹ್ಲಿ ಹಾಗೂ ರಿಷಬ್ ಪಂತ್ ಕ್ರಮವಾಗಿ 13 ಮತ್ತು 8 ವರ್ಷಗಳ ಬಳಿಕ ರಣಜಿ ಕ್ರಿಕೆಟ್ ಆಡಲಿದ್ದಾರೆ. ಆದರೆ ಮೊದಲ ಪಂದ್ಯದಲ್ಲಿ ಕೊಹ್ಲಿ ಆಡುವುದು ಖಚಿತವಿಲ್ಲ. ಆದಾಗ್ಯೂ ಅವರು ತಂಡದೊಂದಿಗೆ ಇರಲಿದ್ದಾರೆ.

ಬಿಸಿಸಿಐನ ಕಟ್ಟುನಿಟ್ಟಿನ ಆದೇಶಕ್ಕೆ ತಲೆಬಾಗಿರುವ ಟೀಂ ಇಂಡಿಯಾದ ಸ್ಟಾರ್ ಆಟಗಾರರು ಇದೀಗ ದೇಶೀ ಟೂರ್ನಿಯತ್ತ ಮುಖ ಮಾಡಿದ್ದಾರೆ. ಅದರಂತೆ ಮುಂಬರುವ ರಣಜಿ ಟ್ರೋಫಿ ಆಡುವುದಕ್ಕೆ ಎಲ್ಲಾ ಆಟಗಾರರು ತಮ್ಮ ತಯಾರಿಯನ್ನು ಆರಂಭಿಸಿದ್ದು, ಇದೀಗ ತಮ್ಮ ರಾಜ್ಯ ತಂಡಗಳ ಪರ ಬಹಳ ವರ್ಷಗಳ ಬಳಿಕ ಕಣಕ್ಕಿಳಿಯಲಿದ್ದಾರೆ. ಇದಕ್ಕೆ ಪೂರಕವಾಗಿ ಇದೀಗ ದೆಹಲಿ ತನ್ನ ರಣಜಿ ಟ್ರೋಫಿ ತಂಡವನ್ನು ಅಂತಿಮಗೊಳಿಸಿದ್ದು, ಈ ತಂಡದಲ್ಲಿ ವಿರಾಟ್ ಕೊಹ್ಲಿ ಸ್ಥಾನ ಪಡೆದಿದ್ದಾರೆ. ಈ ಮೂಲಕ 13 ವರ್ಷಗಳ ಬಳಿಕ ಕೊಹ್ಲಿ ದೆಹಲಿ ರಣಜಿ ತಂಡದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಅವರಲ್ಲದೆ, ರಿಷಬ್ ಪಂತ್ ಕೂಡ ದೆಹಲಿ ತಂಡದಲ್ಲಿದ್ದು, ಅವರು ಕೂಡ 8 ವರ್ಷಗಳ ನಂತರ ಈ ಪಂದ್ಯಾವಳಿಯನ್ನು ಆಡುತ್ತಿದ್ದಾರೆ. ಈ ಇಬ್ಬರೂ ಆಟಗಾರರು ಅತ್ಯಂತ ಕಿರಿಯ ಕ್ರಿಕೆಟಿಗನ ನಾಯಕತ್ವದಲ್ಲಿ ಆಡಲಿದ್ದಾರೆ ಎಂಬುದು ದೊಡ್ಡ ಸುದ್ದಿ. ವಾಸ್ತವವಾಗಿ, ದೆಹಲಿಯ ರಣಜಿ ತಂಡದ ನಾಯಕತ್ವವನ್ನು ಆಯುಷ್ ಬದೋನಿಗೆ ಹಸ್ತಾಂತರಿಸಲಾಗಿದೆ.



**ವಿರಾಟ್ ಆಡುವುದು ಖಚಿತವಾಗಿಲ್ಲ**

ವಿರಾಟ್ ಕೊಹ್ಲಿ ಅವರ ಹೆಸರನ್ನು ತಂಡದಲ್ಲಿ ಸೇರಿಸಲಾಗಿದೆಯಾದರೂ ಅವರು ಸೌರಾಷ್ಟ್ರ ವಿರುದ್ಧ ಆಡುತ್ತಾರೆ ಎಂಬುದು ಖಚಿತವಾಗಿಲ್ಲ. ವಾಸ್ತವವಾಗಿ, ಸಿಡ್ನಿ ಟೆಸ್ಟ್‌ನಲ್ಲಿ ವಿರಾಟ್ ಕೊಹ್ಲಿಯ ಕುತ್ತಿಗೆ ಉಳುಕಿತ್ತು. ಹೀಗಾಗಿ ಅವರಿನ್ನೂ ಸಂಪೂರ್ಣವಾಗಿ ಚೇತರಿಸಿಕೊಂಡಿಲ್ಲ. ಇದಕ್ಕಾಗಿ ವಿರಾಟ್ ಇಂಜೆಕ್ಷನ್ ಕೂಡ ತೆಗೆದುಕೊಂಡಿದ್ದಾರೆ. ವಿರಾಟ್ ಫಿಟ್ ಆಗದೇ ಇದ್ದರೆ ಈ ಪಂದ್ಯದಲ್ಲಿ ಆಡುವುದಿಲ್ಲ ಆದರೆ ತಂಡದೊಂದಿಗೆ ಅವರು ರಾಜ್ ಕೋಟ್‌ನಲ್ಲಿ ಇರೋದು ಖಚಿತ. ಮತ್ತೊಂದೆಡೆ ಪಂತ್ ಈ ಪಂದ್ಯ ಆಡುವುದು ಖಚಿತವಾಗಿದೆ.

**ರಣಜಿ ಟ್ರೋಫಿಯಲ್ಲಿ ವಿರಾಟ್ ಸಾಧನೆ**

ರಿಷಬ್ ಪಂತ್ ರಣಜಿ ಟ್ರೋಫಿಯಲ್ಲಿ ಆಡಿರುವ 17 ಪಂದ್ಯಗಳಲ್ಲಿ 58.12 ಸರಾಸರಿಯಲ್ಲಿ 1395 ರನ್ ಗಳಿಸಿದ್ದಾರೆ. ಇದರಲ್ಲಿ 4 ಶತಕ ಮತ್ತು 4 ಅರ್ಧ ಶತಕಗಳು ಸೇರಿವೆ.

# ಆಸ್ಟ್ರೇಲಿಯನ್ ಓಪನ್ ಟೆನಿಸ್ ಇಗಾ, ಸಿನ್ನರ್ 3ನೇ ಸುತ್ತಿಗೆ

ಆಸ್ಟ್ರೇಲಿಯನ್ ಓಪನ್ ಗ್ರ್ಯಾನ್‌ಸ್ಲಾಂ ಟೆನಿಸ್ ಟೂರ್ನಿಯಲ್ಲಿ ಯಾನಿಕ್ ಸಿನ್ನರ್, ಇಗಾ ಸ್ವಿಯಾಟೆಕ್, ಎಮ್ಮಾ ರಾಡುಕಾನು, ಎಲೆನಾ ರಬೈಕೆನಾ ಸೇರಿದಂತೆ ಪ್ರಮುಖರು 3ನೇ ಸುತ್ತು ಪ್ರವೇಶಿಸಿದ್ದಾರೆ. ಪುರುಷರ ಸಿಂಗಲ್ಸ್‌ನ ವಿಶ್ವ ನಂ.1 ಟೆನಿಸಿಗ, ಇಟಲಿಯ ಸಿನ್ನರ್ ಗುರುವಾರ ನಡೆದ 2ನೇ ಸುತ್ತಿನ ಪಂದ್ಯದಲ್ಲಿ ಆಸ್ಟ್ರೇಲಿಯಾದ ಟ್ರಿಸ್ಟನ್ ಸ್ಕೂಲ್‌ಕೇಟ್ ವಿರುದ್ಧ 4-6, 6-4, 6-1, 6-3 ಸೆಟ್‌ಗಳಲ್ಲಿ ಜಯಭೇರಿ ಬಾರಿಸಿದರು. ಸತತ 2ನೇ ಬಾರಿ ಆಸ್ಟ್ರೇಲಿಯನ್ ಓಪನ್ ಗೆಲ್ಲುವ ನಿರೀಕ್ಷೆಯಲ್ಲಿರುವ ಸಿನ್ನರ್‌ಗೆ 3ನೇ ಸುತ್ತಿನಲ್ಲಿ ಅಮೆರಿಕದ ಮಾರ್ಕೊಸ್ ಗಿರೊನ್ ಸವಾಲು ಎದುರಾಗಲಿದೆ.

ಆದರೆ 2021, 2022, 2024 ರನ್ನಅಪ್, ರಷ್ಯಾದ ಡ್ಯಾನಿಲ್ ಮೆಡ್ವಡೆವ್ 2ನೇ ಸುತ್ತಿನಲ್ಲಿ ಅಮೆರಿಕದ 19 ವರ್ಷದ ಲೀರ್ನರ್ ಟೀನ್ ವಿರುದ್ಧ ಆಘಾತಕಾರಿ ಸೋಲನುಭವಿಸಿದರು.

**ಜಯಭೇರಿ ಶುಭಾರಂಭ:** ಈಗಾಗಲೇ 5 ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆದ್ದಿದ್ದರೂ ಆಸ್ಟ್ರೇಲಿಯನ್ ಓಪನ್‌ನಲ್ಲಿ ಮೊದಲ ಬಾರಿ ಟ್ರೋಫಿ ಗೆಲ್ಲಲು ಎದುರು ನೋಡುತ್ತಿರುವ ಪೋಲೆಂಡ್ ತಾರೆ ಇಗಾ ಸ್ವಿಯಾಟೆಕ್ ಮಹಿಳಾ ಸಿಂಗಲ್ಸ್‌ನಲ್ಲಿ 3ನೇ ಸುತ್ತು ಪ್ರವೇಶಿಸಿದರು. ಗುರುವಾರ ಅವರು ಸ್ಲೋವೆಂಕಿಯಾದ ರೆಬೆಕಾ ಸಮ್ ಕೋವಾ ವಿರುದ್ಧ 6-0, 6-2 ಸೆಟ್‌ಗಳಲ್ಲಿ ಗೆದ್ದರು. ಕಜಕಸ್ತಾದನ ಎಲೆನಾ ರಬೈಕೆನಾ, ಬ್ರಿಟನ್‌ನ ಎಮ್ಮಾ ರಾಡುಕಾನು, ಟ್ಯುನೀಶಿಯಾದ ಒನ್ಸ್ ಜಬು ಕೂಡಾ 3ನೇ ಸುತ್ತು ತಲುಪಿದರು.

# ಖೋ ಖೋ ವಿಶ್ವಕಪ್ 2025 ಅಮೋಘ ಪ್ರದರ್ಶನ

ಭಾರತೀಯ ಮಹಿಳಾ ಖೋ ಖೋ ತಂಡ ವಿಶ್ವಕಪ್ 2025 ರಲ್ಲಿ ಇರಾನ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿದೆ. ತಂಡವು 100-16 ಅಂತರದಿಂದ ಗೆದ್ದು ಪಂದ್ಯಾವಳಿಯಲ್ಲಿ ತಮ್ಮ ಎರಡನೇ ಗೆಲುವು ದಾಖಲಿಸಿದೆ.

ಜನವರಿ 15 ರಂದು, ಬುಧವಾರ, ನವದೆಹಲಿಯ ಇಂದಿರಾಗಾಂಧಿ ಕ್ರೀಡಾಂಗಣದಲ್ಲಿ, ಭಾರತೀಯ ಮಹಿಳಾ ತಂಡ ಖೋ ಖೋ ವಿಶ್ವಕಪ್ 2025 ರಲ್ಲಿ ತಮ್ಮ ಎರಡನೇ ಗೆಲುವು ದಾಖಲಿಸಿದೆ. ಭಾರತೀಯ ಮಹಿಳಾ ತಂಡದ ಅಮೋಘ ಪ್ರದರ್ಶನ ಇರಾನ್ ತಂಡಕ್ಕೆ ಕಠಿಣ ಪಾಠ ಕಲಿಸಿತು. ಪ್ರಿಯಾಂಕ ಇಂಗಲ್ ನಾಯಕತ್ವದಲ್ಲಿ, ಭಾರತ ದಕ್ಷಿಣ ಕೊರಿಯಾ ವಿರುದ್ಧ ಅದ್ಭುತ ಗೆಲುವಿನೊಂದಿಗೆ ತಮ್ಮ ಮೊದಲ ಗೆಲುವು ದಾಖಲಿಸಿತ್ತು. ದಕ್ಷಿಣ ಕೊರಿಯಾ ವಿರುದ್ಧ ಭಾರತೀಯ ಮಹಿಳಾ ತಂಡದ ಪ್ರಾಬಲ್ಯ ಇರಾನ್ ವಿರುದ್ಧವೂ ಮುಂದುವರೆಯಿತು. ಇರಾನ್ ತಂಡ ಭಾರತೀಯ ತಂಡದ ಕೌಶಲ್ಯ, ವೇಗ ಮತ್ತು ತಂತ್ರಗಳಿಗೆ ಸರಿಸಾಟಿಯಾಗಲಿಲ್ಲ. ಮೊದಲ ಇನ್ನಿಂಗ್ಸ್‌ನಲ್ಲಿ, ಟಾಸ್ ಗೆದ್ದ ಭಾರತ ಆಕ್ರಮಣ ಆಯ್ದುಕೊಂಡಿತು. ಭಾರತೀಯ ಆಕ್ರಮಣಕಾರಿ ಆಟಗಾರ್ತಿಯರು 15 ಇರಾನಿ ರಕ್ಷಣಾತ್ಮಕ ಆಟಗಾರ್ತಿಯರನ್ನು ಔಟ್ ಮಾಡಿ 48 ಅಂಕ ಗಳಿಸಿದರು.

ಭಾರತದ ಈ ಪ್ರಭಾವಶಾಲಿ ಪ್ರದರ್ಶನಕ್ಕೆ ಪ್ರತಿಯಾಗಿ, ಇರಾನ್ ಎರಡನೇ ಇನ್ನಿಂಗ್ಸ್‌ನಲ್ಲಿ ಕೇವಲ 10 ರನ್ ಗಳಿಸಿತು. ಭಾರತೀಯ ಮಹಿಳಾ ತಂಡದ ರಕ್ಷಣಾತ್ಮಕ ಆಟಗಾರ್ತಿಯರ ಎದುರು ಇರಾನಿ ಆಕ್ರಮಣಕಾರಿ ಆಟಗಾರ್ತಿಯರು ನಿಲ್ಲಲಾಗಲಿಲ್ಲ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966